
ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಕಾಂ. ವಾಮನ ಭಟ್ ಲಾಲ್ ಸಲಾಂ



ಸಂಪುಟ 10 | ಸಂಚಿಕೆ 25 | ಪುಟ 16 | ಜೂನ್ 19, 2016 | ರೂ. 10/-

web: www.janashakthi.co.in e-mail : js_weekly@yahoo.com



ಎಡ ಪರ್ಯಾಯದತ್ತ ನಿರ್ಣಾಯಕ ಹೆಜ್ಜೆ

ಯಶಸ್ವಿ ದ.ಕ. ಸಿಐಟಿಯು ಸಮ್ಮೇಳನ



ಚೆನ್ನೈ ಎಕ್ಸ್‌ಪ್ರೆಸ್ ವೇ ಪ್ರತಿಭಟನೆ

ರಾಜ್ಯ ಸಭೆ : ಕುದುರೆ ವ್ಯಾಪಾರಕ್ಕೆ ಕಡಿವಾಣ ಹೇಗೆ?



ವೋಟಿಗಾಗಿ ಮತ್ತೆ ಬೀಫ್ ರಾಜಕೀಯ

ಮಹಮ್ಮದ್ ಅಲಿ : ನಿನ್ನ ಹೇಗೆ ಮರೆಯಲಿ



ಮಥುರಾ ಹಿಂಸಾಚಾರ: ನ್ಯಾಯಾಂಗ ತನಿಖೆ ನಡೆಸಿ

ಅಸಹಿಷ್ಣುತೆಯ ವಾತಾವರಣ ಸಶಸ್ತ್ರ ತಿಳಿಗೇಡಿಗಳ ಅರಾಜಕತೆಗೆ ಒತ್ತಾಸೆಯಾಗುತ್ತಿದೆಯೇ?–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಉತ್ತರ ಪ್ರದೇಶದ ಮಥುರಾದಲ್ಲಿ ಜೂನ್ 2ರ ರಾತ್ರಿ ಒತ್ತುವರಿ ತೆರವಿನ ಸಂದರ್ಭದಲ್ಲಿ ಉಂಟಾದ ಹಿಂಸಾಚಾರ, ಇತ್ತೀಚಿನ ವರದಿಗಳ ಪ್ರಕಾರ ಇಬ್ಬರು ಹಿರಿಯ ಪೋಲೀಸ್ ಅಧಿಕಾರಿಗಳು ಸೇರಿದಂತೆ 29 ಮಂದಿಯನ್ನು ಬಲಿ ತೆಗೆದುಕೊಂಡಿದೆ.

ತಾವು ನೇತಾಜಿ ಸುಭಾಷ್‌ಚಂದ್ರ ಬೋಸ್‌ರವರ ನಿಜವಾದ ಅನುಯಾಯಿಗಳು ಎಂದು ಹೇಳಿಕೊಳ್ಳುವ 2000ಕ್ಕಿಂತಲೂ ಹೆಚ್ಚಿನ ಸಶಸ್ತ್ರ ಅನುಯಾಯಿಗಳನ್ನು ಹೊಂದಿದೆ ಎನ್ನಲಾದ, ಸ್ವಾಧೀನ ಭಾರತ ಸುಭಾಷ್ ಸೇನಾ 2014ರಿಂದ ಮಥುರಾದ ಜವಾಹರ ಬಾಗ್‌ನಲ್ಲಿ ಬೀಡು ಬಿಟ್ಟು ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳನ್ನು, ನಾಡಬಾಂಬುಗಳನ್ನು ಪೇರಿಸಿಕೊಂಡಿತ್ತು ಎಂದು ವರದಿಯಾಗಿದೆ. ಅವರು ಒಂದು ಸಮರಕ್ಕೆ ಸಿದ್ಧತೆ ನಡೆಸಿದಂತಿತ್ತು. ಎರಡು ವರ್ಷಗಳ ಕಾಲ ಇದೆಲ್ಲ ಜಿಲ್ಲಾ ಆಡಳಿತ ಕಚೇರಿಯ ಹತ್ತಿರವೇ, ಮಥುರಾ ಕಂಟೋನ್ಮೆಂಟಿನಿಂದ ಎರಡು ಕಿ.ಮೀ. ದೂರದಲ್ಲಿಯೇ ಹೇಗೆ ನಡೆಯುತ್ತಿತ್ತು ಎಂಬುದು ಅರ್ಥವಾಗದ ಸಂಗತಿ. ಖಂಡಿತವಾಗಿಯೂ ಇದೊಂದು ಕೇಂದ್ರ ಮತ್ತು ರಾಜ್ಯ ಬೇಹುಗಾರಿಕೆ ಸಂಸ್ಥೆಗಳ ಅತ್ಯಂತ ದೊಡ್ಡ ಲೋಪ, ಕೊನೆಗೂ ಈ ಪೋಲೀಸ್ ಕಾರ್ಯಾಚರಣೆ ನಡೆದದ್ದು ನಮ್ಮ ಭದ್ರತಾ ವ್ಯವಸ್ಥೆಯಿಂದ ದೊರೆತ ಮಾಹಿತಿಗಳಿಂದ ಅಲ್ಲ, ಬದಲಿಗೆ ನ್ಯಾಯಾಂಗದ ಮಧ್ಯಪ್ರವೇಶದಿಂದ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಎಲ್ಲ ಆಯಾಮಗಳ ಗಂಭೀರ ತನಿಖೆಯಾಗ ಬೇಕಾಗಿದೆ, ಇಂತಹ ಅರಾಜಕತೆಯ ಅಪರಾಧ ಮಾಡಿರುವವವರನ್ನು ಶಿಕ್ಷಿಸಬೇಕಾಗಿದೆ ಎಂದಿದೆ.

ಇಂತಹ ಅರಾಜಕ ಘಟನೆ ನಡೆಯಲು ಬಿಜೆಪಿ ಕೇಂದ್ರ ಸರಕಾರದ ಕೃಪಾಪೋಷಣೆಯಲ್ಲಿ ದೇಶದಲ್ಲಿ ಹರಡಿರುವ, ರಾಜ್ಯ ಸರಕಾರ ಉಪೇಕ್ಷಿಸಿರುವ ಅಸಹಿಷ್ಣುತೆಯ ವಾತಾವರಣ ಇಂತಹ ಸಶಸ್ತ್ರ ತಿಳಿಗೇಡಿ ಅರಾಜಕತೆಗೆ ಒತ್ತಾಸೆ ನೀಡುವಲ್ಲಿ ಪಾತ್ರ ವಹಿಸಿದೆಯೇ ಎಂದು ಕೂಡ ತನಿಖೆ ಮಾಡಬೇಕಾಗಿದೆ, ಇಂತಹ ಅರಾಜಕತೆ ಹರಡುತ್ತಿರುವುದು ನಿಜಕ್ಕೂ ಆತಂಕಕಾರಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ತಕ್ಷಣವೇ ಈ ಎಲ್ಲ ಅಂಶಗಳ ತನಿಖೆಗೆ ಒಂದು ಉನ್ನತ ಅಧಿಕಾರದ ನ್ಯಾಯಾಂಗ ತನಿಖೆಯನ್ನು ತಕ್ಷಣವೇ ರಚಿಸಬೇಕು, ಅಪರಾಧಿಗಳನ್ನು ಗುರುತಿಸಿ, ತಪ್ಪಿತಸ್ಥರನ್ನು ಶಿಕ್ಷಿಸಬೇಕು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕೆಲಸವನ್ನು ಒಮದು ನಿಯಮಿತ ಅವಧಿಯೊಳಕ್ಕೆ ಮುಗಿಸಲು ಸುಪ್ರಿಂ ಕೋರ್ಟಿನ ಪ್ರಸಕ್ತ ನ್ಯಾಯಾಧೀಶರೊಬ್ಬರಿಗೆ ಈ ಕೆಲಸವನ್ನು ಒಪ್ಪಿಸುವುದು ಉತ್ತಮ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ದಾದ್ರಿ ಕೊಲೆಯನ್ನು ಗೋಹತ್ಯೆಯ ಪ್ರಶ್ನೆಯಾಗಿ ತಿರುಚುವ ಹೀನ ತಂತ್ರ –ಚುನಾವಣಾ ಲಾಭಕ್ಕಾಗಿ ಮತ್ತೆ ಕೋಮುಧ್ರುವೀಕರಣದ ಆಟ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಬಿಜೆಪಿ ಮತ್ತು ಹಿಂದುತ್ವ ಕೋಮುವಾದಿ ಶಕ್ತಿಗಳು ಉತ್ತರಪ್ರದೇಶದಲ್ಲಿ ಮತ್ತೆ ಕೋಮು ಅಶಾಂತಿಯನ್ನು ಬಡಿದೆಬ್ಬಿಸುವ ಪ್ರಯತ್ನ ಆರಂಭಿಸಿವೆ. ದಾದ್ರಿಯ ಬಿಸಾರಾ ಹಳ್ಳಿಯಲ್ಲಿ ನಡೆದ ಮಹಮ್ಮದ್ ಅಖ್ಲಾಕ್‌ನ ಕೊಲೆ ಮತ್ತು ಅವರ ಕುಟುಂಬದವರ ಮೇಲಿನ ದಾಳಿಯನ್ನು ಒಂದು ಗೋಹತ್ಯೆ ಮತ್ತು ಗೋಮಾಂಸದ ಪ್ರಶ್ನೆಯಾಗಿ ತಿರುಚುವ ಪ್ರಯತ್ನ ನಡೆದಿದೆ. ಇವು ಅತ್ಯಂತ ಹೀನ ತಂತ್ರಗಳು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಅಕ್ಲಾಖ್‌ನ ಮನೆಯಿಂದಲ್ಲ, ಮನೆಯ ಹೊರಗೆ ಸಿಕ್ಕ ಮಾಂಸದ ತುಣುಕು ಗೋಮಾಂಸ ಎಂದು ಮಥುರಾದ ಒಂದು ಪ್ರಯೋಗಾಲಯದ ಪರೀಕ್ಷೆ ತಿಳಿಸಿದೆ ಎಂಬ ವರದಿಯ ಆಧಾರದಲ್ಲಿ ಅಕ್ಲಾಖ್‌ನ ಕುಟುಂಬದವರ ಮೇಲೆ ಗೋಹತ್ಯೆಯ ಕೇಸು ದಾಖಲಿಸಬೇಕು, ಅವರಿಗೆ ನೀಡಿದ ಪರಿಹಾರವನ್ನು ಹಿಂದಕ್ಕೆ ಪಡೆಯಬೇಕು ಎಂದು ಆ ಹಳ್ಳಿಯಲ್ಲಿ ನಡೆದ ಒಂದು ಸಭೆ ಆಗ್ರಹಿಸಿದೆಯಂತೆ. 20 ದಿನಗಳೊಳಗೆ ಇದನ್ನು ಮಾಡದಿದ್ದರೆ ಅದು 'ಸಾರ್ವಜನಿಕ ಆಕ್ರೋಶ'ಕ್ಕೆ ಎಡೆ ಮಾಡಿಕೊಡಬಹುದು ಎಂದು ಆಡಳಿತಕ್ಕೆ 'ಎಚ್ಚರಿಕೆ' ನೀಡಲಾಗಿದೆಯಂತೆ.

ಇನ್ನೊಂದೆಡೆಯಲ್ಲಿ, ಮುಝಫ್ಫರ್‌ನಗರದ ಗಲಭೆಗಳ ಕೇಸುಗಳಲ್ಲಿ ಆಪಾದಿತನಾಗಿರುವ ಮೋದಿ ಸಂಪುಟದ ಒಬ್ಬ ಮಂತ್ರಿ ಸಂಜೀವ ಬಲ್ಯಾನ್ ಒಂದು ಗೋವಿನ ಮಾಂಸ 150 ಕೆ.ಜಿ.ಯಷ್ಟಿರುತ್ತದೆ, ಅದನ್ನು ಒಬ್ಬನೇ ತಿಂದಿರಲು ಸಾಧ್ಯವಿಲ್ಲ, ಆದ್ದರಿಂದ ಅಖ್ಲಾಕ್ ಅಲ್ಲದೆ ಅದನ್ನು ಯಾರೆಲ್ಲಾ ತಿಂದಿದ್ದಾರೆ ಎಂದು ತನಿಖೆ ನಡೆಸಬೇಕು ಎಂಬ ಉದ್ರೇಕಕಾರಿ ಹೇಳಿಕೆ ನೀಡಿದ್ದಾರೆ. ಇತರ ಬಿಜೆಪಿ ಮುಖಂಡರೂ ಅಖ್ಲಾಕ್ ಕುಟುಂಬದವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ಹೇಳಿಕೆಗಳೆಲ್ಲವೂ ಕೋಮು ಉದ್ವೇಗವನ್ನು ಬಡಿದೆಬ್ಬಿಸುವ ಉದ್ದೇಶದಿಂದಲೇ ಬರುತ್ತಿವೆ. ಉತ್ತರ ಪ್ರದೇಶದಲ್ಲಿ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳ ಮೊದಲು ಕೋಮುಧ್ರುವೀಕರಣವನ್ನು ಸೃಷ್ಟಿಸುವ ಒಂದು ವಿಸ್ತೃತ ಹುನ್ನಾರದ ಭಾಗವಿದು ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಉತ್ತರಪ್ರದೇಶ ಆಡಳಿತ ಕೋಮುದ್ವೇಷವನ್ನು ಉದ್ರೇಕಿಸುತ್ತಿರುವ ಸಂಜೀವ ಬಲ್ಯಾನ್ ಮತ್ತು ಇತರರ ವಿರುದ್ಧ ಕೇಸುಗಳನ್ನು ಹಾಕಬೇಕು, ಕೋಮುವಾದಿ ಭಾವೋದ್ವೇಗಗಳನ್ನು ಹರಡುವ ಮತ್ತು ಹಿಂಸಾಚಾರವನ್ನು ಉದ್ರೇಕಿಸುವ ಎಲ್ಲ ಶಕ್ತಿಗಳ ವಿರುದ್ಧ ದೃಢವಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ. ಅಖ್ಲಾಕ್ ಕೊಲೆ ಕೇಸಿನಲ್ಲಿ ಆಪಾದಿತರ ವಿರುದ್ಧ ಕ್ರಮಗಳನ್ನು ಕೈಗೊಳ್ಳುವಲ್ಲಿ ಯಾವ ರೀತಿಯ ಸಡಿಲತೆಯೂ ಕಂಡುಬರಬಾರದು ಎಂದು ಅದು ಹೇಳಿದೆ.

ಸಾರ್ವಜನಿಕ ವಲಯದ ಘಟಕಗಳಿಗೆ ಖಾಸಗೀವಲಯದ ಮ್ಯಾನೇಜರುಗಳ ನೇಮಕ–ಮೋದಿ ಸರಕಾರದ ಮತ್ತೊಂದು ಕಾರ್ಪೊರೇಟ್–ಪರ ಕ್ರಮ: ಸಿಐಟಿಯು ಖಂಡನೆ

ಕೆಲವು ದಿನಗಳ ಹಿಂದೆ ನರೇಂದ್ರ ಮೋದಿ ಸರಕಾರ ಸಾರ್ವಜನಿಕ ವಲಯ ನೇಮಕಾತಿ ನಿಯಮಗಳಲ್ಲಿ ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಆಯ್ಕೆ ಮಂಡಳಿ(ಪಿಇಎಸ್‌ಬಿ)ಯ ನಿಯಮಗಳಲ್ಲಿ ಕೆಲವು ಹಿಂದಿನಿಂದಲೇ ಜಾರಿಯಾಗುವ ಬದಲಾವಣೆಗಳನ್ನು ಮಾಡಿದೆ. ಇದರ ಉದ್ದೇಶ ಖಾಸಗೀ ವಲಯದ ಅಭ್ಯರ್ಥಿಗಳನ್ನು ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗಳ ಬಹಳ ಮೇಲ್ಮಟ್ಟದ ಹುದ್ದೆಗಳಿಗೆ ನೇಮಿಸಲು ಅವಕಾಶ ಕಲ್ಪಿಸುವುದು. ಇದರಿಂದ ಖಾಸಗೀ ವಲಯದ ಕೆಲವು 'ಸಮರ್ಥ ಮತ್ತು ದಕ್ಷ ಕೈಗಳೆ ಪ್ರಯೋಜನವನ್ನು ಸಾರ್ವಜನಿಕ ವಲಯದ ಉದ್ದಿಮೆಗಳು ಪಡೆಯಲು ನೆರವಾಗುತ್ತದೆ ಎಂಬುದು ಸರಕಾರದ ತರ್ಕ.

ಆದರೆ ವಾಸ್ತವವಾಗಿ ಇದು ಅಪಾರ ಸಂಪನ್ಮೂಲಗಳು ಮತ್ತು ಆಸ್ತಿ ನೆಲೆ ಇರುವ, ಆರ್ಥಿಕ ವ್ಯವಸ್ಥೆಯ ಆಯಕಟ್ಟಿನ ವಲಯಗಳಲ್ಲಿ ಇರುವ ಅತ್ಯಂತ ದಕ್ಷ ಮತ್ತು ಲಾಭದಾಯಕವಾಗಿ ನಡೆಯುತ್ತಿರುವ ಸಾರ್ವಜನಿಕ ವಲಯದ ಘಟಕಗಳೊಳಕ್ಕೆ ಖಾಸಗೀ ವಲಯದ ಏಜೆಂಟರುಗಳನ್ನು ಹೊಕ್ಕಿಸುವ ಹುನ್ನಾರ ಎಂದು ದೇಶದ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳಲ್ಲಿ ಒಂದಾದ ಸಿಐಟಿಯು ಈ ಕ್ರಮವನ್ನು ಖಂಡಿಸಿದೆ, ಇದೊಂದು ದುರುದ್ದೇಶದಿಂದ ಕೂಡಿದ ಕ್ರಮ ಎಂದು ಅದು ಇದನ್ನು ತಿರಸ್ಕರಿಸಿದೆ.


ಇಲ್ಲಿ ಒಂದು ಮುಖ್ಯ ಸಂಗತಿಯನ್ನು ಗಮನಿಸಬೇಕು ಎಂದು ಸಿಐಟಿಯು ಹೇಳಿದೆ. ಖಾಸಗಿ ವಲಯದ ಕೆಲವು ದೊಡ್ಡ ಉದ್ದಿಮೆಗಳೇನಾದರೂ ಯಶಸ್ವಿಯಾಗಿದ್ದರೆ ಅದು ಸಾರ್ವಜನಿಕ ವಲಯದಲ್ಲಿ ಅಭಿವೃದ್ಧಿ ಹೊಂದಿದ ದಕ್ಷತೆ ಮತ್ತು ಅನುಭವವವನ್ನು ವಿವಿಧ ರೀತಿಗಳಲ್ಲಿ ಲಪಟಾಯಿಸುವ ಮೂಲಕವೇ. ಉದಾಹರಣೆಗೆ ಇಂಧನ ವಲಯವನ್ನು ತಗೊಳ್ಳಿ. ತೈಲ, ನೈಸರ್ಗಿಕ ಅನಿಲ, ಕಲ್ಲಿದ್ದಲು, ವಿದ್ಯುತ್ ಮುಂತಾದೆಡೆಗಳಲ್ಲಿ ಈಗಿರುವ ಖಾಸಗಿ ಕಂಪನಿಗಳ ಆಡಳಿತ ಮಂಡಳಿಗಳ ಉನ್ನತ ಹುದ್ದೆಗಳಲ್ಲಿ ಹಿಂದೆ ಕೇಂದ್ರ ಸಾರ್ವಜನಿಕ ವಲಯದ ಘಟಕಗಳಲ್ಲಿದ್ದ ಮುಖ್ಯಸ್ಥರುಗಳೇ ತುಂಬಿದ್ದಾರೆ. ಇವರ ಮೂಲಕ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳ ಮಹತ್ವದ ತಾಂತ್ರಿಕ ಮತ್ತು ವಾಣಿಜ್ಯ ಮಾಹಿತಿಗಳೆಲ್ಲ ಖಾಸಗಿ ವಲಯಕ್ಕೆ ಸ್ಮಗಲ್ ಆದವು. ಇವೇ ಅವುಗಳ ಯಶಸ್ವಿಗೆ ಆಧಾರವಾದವು.

ಆದ್ದರಿಂದ ಖಾಸಗಿಯವರ ದಕ್ಷತೆ ಮತ್ತು ಸಾಮರ್ಥ್ಯದ ಹೆಸರಲ್ಲಿ ಎನ್‌ಡಿಎ ಸರಕಾರ ಕೈಗೊಂಡಿರುವ ಒಂದು ಹೇಯ ಕ್ರಮ ಇದು ಎಂದು ಸಿಐಟಿಯು ಖಂಡಿಸಿದೆ. ಇದು ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳ ಅತ್ಯುತ್ತಮ ಭೌತಿಕ ಮತ್ತು ಹಣಕಾಸು ನಿರ್ವಹಣೆಯನ್ನು ಬುಡಮೇಲು ಮಾಡುವ, ಸ್ವಾತಂತ್ರ್ಯೋತ್ತರ ಭಾರತದ ಆರ್ಥಿಕ ಪುನರ್ರಚನೆಯಲ್ಲಿ ಇವುಗಳ ಪಾತ್ರವನ್ನು ಮರೆಮಾಚುವ ಪಿತೂರಿ. ಈ ಘಟಕಗಳಿಂದ ಸರಕಾರ ಈಗಾಗಲೇ ಖಾಸಗೀಕರಣದ ಕ್ರಮಗಳು, ಡಿವಿಡೆಂಡ್‌ಗಳು, ತೆರಿಗೆಗಳು, ಸುಂಕಗಳು ಇತ್ಯಾದಿ ಸ್ವರೂಪಗಳಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಸೆಳೆದುಕೊಂಡಿದೆ.

ಪುಟ 12 ರಲ್ಲಿ ಮುಂದುವರೆದಿದೆ

aAiAvEAzAgEEzAA

"ನನ್ನ ಜನಗಳ ನಿಜವಾದ ಶತ್ರುಗಳು ಇರುವುದು ಇಲ್ಲಿಯೇ. ತಮ್ಮ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೋರಾಡುತ್ತಿರುವವರನ್ನು ಗುಲಾಮಗಿರಿಗೊಳಪಡಿಸುವ ಸಾಧನವಾಗಲಾರೆ, ಆ ಮೂಲಕ ನಾನು ನನ್ನ ಧರ್ಮ, ನನ್ನ ಜನತೆ ಮತ್ತು ನನಗೇ ಅವಮಾನ ಮಾಡಲಾರೆ. ....ನನ್ನ ನಂಬಿಕೆಗಳಗಾಗಿ ಎದ್ದು ನಿಲ್ಲುವುದರಲ್ಲಿ ನಾನು ಕಳಕೊಳ್ಳುವುದು ಏನೂ ಇಲ್ಲ. ನಾನು ಜೈಲಿಗೆ ಹೋಗಬಹುದು. ಅದರಲ್ಲೇನಿದೆ? ನಾವೆಲ್ಲ 400 ವರ್ಷಗಳಿಂದ ಜೈಲಿನಲ್ಲೇ ಇದ್ದೇವೆ"



–1966ರಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ವಿಯೆಟ್ನಾಂ ಯುದ್ಧದಲ್ಲಿ ಭಾಗವಹಿಸಲು ನಿರಾಕರಿಸಿ ಜೈಲು ಶಿಕ್ಷೆ ವಿಧಿಸಲ್ಪಟ್ಟ ಪ್ರಖ್ಯಾತ ಅಮೆರಿಕನ್ ಬಾಕ್ಸರ್ ಮುಹಮ್ಮದ್ ಅಲಿ

ಮತ್ತೊಮ್ಮೆ ರೈತರಿಗೆ ಮೋದಿ ಸರಕಾರದ ವಿಶ್ವಾಸಘಾತ –ಮುಂಗಾರು ಬೆಳೆಗಳಿಗೆ ಕಡಿಮೆ ಬೆಂಬಲ ಬೆಲೆ

ಅಖಿಲ ಭಾರತ ಕಿಸಾನ್ ಸಭಾ ಖಂಡನೆ

ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ 2016–17ರ ಮುಂಗಾರು ಬೆಳೆಗಳಿಗೆ ಪ್ರಕಟಿಸಿರುವ ಕನಿಷ್ಟ ಬೆ>ಬಲ ಬೆಲೆಗಳು(ಎಂಎಸ್‌ಪಿ) ಉತ್ಪಾದನಾ ಖರ್ಚಿಗಿಂತಲೂ ಕಡಿಮೆ ಮಟ್ಟದಲ್ಲಿ ಇವೆ. ಈ ಮೂಲಕ ಅದು ರೈತರಿಗೆ ವಿಶ್ವಾಸಘಾತ ಮಾಡಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಖಂಡಿಸಿದೆ.

ರೈತರು ಬರದ ವಷದಲ್ಲಿ ಭತ್ತಕ್ಕೆ ಒಳ್ಳೆಯ ಬೆಲೆಗಳನ್ನು ನಿರೀಕ್ಷಿಸುತ್ತಿದ್ದಾಗ ಸರಕಾರ ಯಾಂತ್ರಿಕವಾಗಿ ಕಳೆದ ವರ್ಷಕ್ಕಿಂತ ಕ್ವಿಂಟಾಲಿಗೆ 60ರೂ. ಹೆಚ್ಚಳವನ್ನು ಮಾತ್ರ ಪ್ರಕಟಿಸಿದೆ. ಈ ಮೂಲಕ ಈ ಸರಕಾರ ಕನಿಷ್ಟ ಬೆಂಬಲ ಬೆಲೆಗಳು ಉತ್ಪಾದನಾ ಖರ್ಚಿಗಿಂತ 50ಶೇ.ದಷ್ಟು ಹೆಚ್ಚಿರಬೇಕು ಎಂಬ ಸ್ವಾಮಿನಾಥನ್ ಆಯೋಗದ ಶಿಫಾರಸನ್ನು ಉಪೇಕ್ಷಿಸಿದೆ. ಎಐಕೆಎಸ್ ಕ್ವಿಂಟಾಲಿಗೆ 2000ರೂ. ಬೇಡಿಕೆ ಇಟ್ಟಿತ್ತು. ಏಕೆಂದರೆ ಈಗಿರುವ ಎಂಎಸ್‌ಪಿ ಉತ್ಪಾದನಾ ಖರ್ಚಿಗಿಂತ ಕೆಳಮಟ್ಟದಲ್ಲಿತ್ತು.

ಬೇಳೆಕಾಳುಗಳ ವಿಷಯದಲ್ಲಿ ಹೇಳುವುದಾದರೆ, ಕ್ವಿಂಟಾಲಿಗೆ 6000 ಕೋಟಿರೂ.ಗಳಿಗೂ ಹೆಚ್ಚು ಹಣ ತೆತ್ತು ಕೆಳಮಟ್ಟದ ಬೇಳೆಕಾಳುಗಳನ್ನು ಆಮದು ಮಾಡುವ ಸರಕಾರ, ಈ ಬಹಳ ರಿಸ್ಕ್‌ನ ಬೆಳೆಗೆ ಅಲ್ಪ ಮಟ್ಟದ ಎಂಎಸ್‌ಪಿ ಪ್ರಕಟಿಸಿ, ರೈತರ ಗಾಯಕ್ಕೆ ಉಪ್ಪು ಸವರಿದೆ, ಅವರ ಶೋಚನೀಯ ಪರಿಸ್ಥಿತಿಯ ಪರಿಹಾಸ್ಯ ಮಾಡಿದೆ ಎಂದು ಎಐಕೆಎಸ್ ಟೀಕಿಸಿದೆ.

2015–16ರ ಮುಂಗಾರು ಮಾರುಕಟ್ಟೆ ಸೀಝನ್‌ಗೆ ಭತ್ತದ ಒಟ್ಟಾರೆ ಉತ್ಪಾದನಾ ಖರ್ಚು ಕ್ವಿಂಟಾಲಿಗೆ 1324 ರೂ. ಎಂದು 'ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ'(ಸಿಎಸಿಪಿ) ಲೆಕ್ಕಾಚಾರ ಹಾಕಿತ್ತು. ಆದರೆ ಪ್ರಕಟಿಸಿದ ಕನಿಷ್ಟ ಬೆಂಬಲ ಬೆಲೆ ರೂ. 1410/ ಕ್ವಿಂ. ಮಾತ್ರ. ಇದು 2013–14 ರ ಬೇಲೆಗಳನ್ನು ಆಧರಿಸಿ ಮಾಡಿದ್ದುದು. ಈಗ ಮೂರು ವರ್ಷಗಳ ನಂತರ ಸರಕಾರ ಭತ್ತಕ್ಕೆ ಕೇವಲ 1470ರೂ./ಕ್ವಿಂ. ಪ್ರಕಟಿಸಿದೆ. ಸರಕಾರದಿಂದ ಧಾನ್ಯ ಖರೀದಿಯ ಕಾರ್ಯಕ್ರಮದ ಭರವಸೆಯೇನೂ ಇಲ್ಲವಾದ್ದರಿಂದ ರೈತರು ಹತಾಶರಾಗಿ ಖಾಸಗಿ ವ್ಯಾಪಾರಿಗಳಿಗೆ ಅವರ ಕೊಡುವ ಬೆಲೆಗಳಲ್ಲಿ ಮಾರಬೇಕಾಗಿ ಬಂದಿದೆ. ಒಡಿಶಾ, ಝಾರ್ಖಂಡ್ ಮುಂತಾದೆಡೆಗಳಲ್ಲಿ ರೈತರು ಕ್ವಿಂಟಾಲಿಗೆ ರೂ.1100 ಕೂಡ ಪಡೆಯುತ್ತಿಲ್ಲ. ಅಂದರೆ ಅವರಿಗೆ ಉತ್ಪಾದನಾ ವೆಚ್ಚ ಕೂಡ ದಕ್ಕುತ್ತಿಲ್ಲ.

2014–15ರಲ್ಲಿ ಹೆಸರು ಕಾಳಿನ ಉತ್ಪಾದನಾ ವೆಚ್ಚ ಕ್ವಿಂಟಾಲಿಗೆ 4970.77 ರೂ. ಇತ್ತು. ಆದರೆ ಎರಡು ವರ್ಷಗಳ ನಂತರ ಪ್ರಕಟಿಸಿದ ಕನಿಷ್ಟ ಬೆಂಬಲ ಬೆಲೆ ರೂ. 5225 ಮಾತ್ರ. ಇದರಲ್ಲಿ 425ರೂ. ಬೋನಸ್ ಕೂಡ ಇದೆ ಎಂದು ಹೇಳಿಕೊಂಡಿತು ಸರಕಾರ.

ರಾಗಿ ಬೆಳೆಸುವ ಖರ್ಚು 2014–15ರ ಸಿಎಸಿಪಿ ಲೆಕ್ಕಾಚಾರದ ಪ್ರಕಾರ ಕ್ವಿಂಟಾಲಿಗೆ ರೂ. 1793.87 ಎಂಬುದನ್ನು ಗಮನಿಸಬೇಕು ,ಆದರೆ 2016–17ಕ್ಕೆ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆ ರೂ. 1725 ಮಾತ್ರ.

ಜೋಳದ ಉತ್ಪಾದನಾ ಖರ್ಚು 2014–15ರ ಸಿಎಸಿಪಿ ಲೆಕ್ಕಾಚಾರಗಳ ಪ್ರಕಾರ ಕ್ವಿಂಟಾಲಿಗೆ 1788.20 ಮತ್ತು ಸರಕಾರ ಪ್ರಕಟಿಸಿದ ಕನಿಷ್ಟ ಬೆಂಬಲ ಬೆಲೆ ಕೇವಲ ರೂ. 1625/ಕ್ವಿಂ.

ನಿಜ ಹೇಳಬೇಕೆಂದರೆ, ಸಿಎಸಿಪಿ ಹಾಕುವ ವೆಚ್ಚಗಳ ಲೆಕ್ಕಾಚಾರ ಕಿಸಾನ್ ಸಭಾ ಮತ್ತು ರಾಜ್ಯ ಸರಕಾರಗಳ ಲೆಕ್ಕಾಚಾರಗಳ ಪ್ರಕಾರ ರೈತರಿಗೆ ತಗಲುವ ನಿಜವಾದ ವೆಚ್ಚಗಳಿಗಿಂತ ಬಹಳ ಕಡಿಮೆ ಇದೆ. ಹಣದುಬ್ಬರ ಮತ್ತು ಉತ್ಪಾದನಾ ವೆಚ್ಚದಲ್ಲಿ ಏರಿಕೆಯನ್ನು ಕನಿಷ್ಟ ಬೆಲೆಗಳನ್ನು ನಿರ್ಧರಿಸುವಾಗ ಪರಿಗಣಿಸಿಯೇ ಇಲ್ಲ. ಆದರೂ ಸರಕಾರ ಪ್ರಕಟಿಸಿರುವ ಕನಿಷ್ಟ ಬೆಂಬಲ ಬೆಲೆಗಳು ಹೆಚ್ಚಿನ ಬೆಳೆಗಳಿಗೆ ಸಿಎಸಿಪಿಯ ಕಡಿಮೆ ಲೆಕ್ಕಾಚಾರಗಳಿಗಿಂತಲೂ ಕೆಳಗೆಯೇ ಇವೆ. ಇಷ್ಟೊಂದು ಕೆಳಮಟ್ಟದ ಬೆಂಬಲ ಬೆಲೆ ರೈತರಿಗೆ ಕೃಷಿಯಲ್ಲಿ ಮುಂದುವರೆಯಲು ಯಾವುದೇ ಉತ್ತೇಜನೆಯನ್ನು ನೀಡಲಾರದು ಎಂದು ಎಐಕೆಎಸ್ ಹೇಳಿದೆ.

ಡಾ.ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಪ್ರಕಾರ ಬೆಂಬಲ ಬೆಲೆಗಳ ಭರವಸೆ ನೀಡಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಹಾಗೆ ಮಾಡುವುದು ಸಾಧ್ಯವಿಲ್ಲ, ಏಕೆಂದರೆ ಅದು

ಪುಟ 12 ರಲ್ಲಿ ಮುಂದುವರೆದಿದೆ

ಸರಕಾರಿ ಕನ್ನಡ ಶಾಲಾ ವ್ಯವಸ್ಥೆ ನಾಶ ಮಾಡುವ ಹುನ್ನಾರ ನಿಲ್ಲಿಸಿ!

ಸಂಪಾದಕೀಯ

ಸರಕಾರಿ ಶಾಲೆಗಳಲ್ಲಿ ಮಕ್ಕಳ ಕೊರತೆಯ ನೆಪವೊಡ್ಡಿ ಅವನ್ನು ಮುಚ್ಚಲು ಸುತ್ತೋಲೆ ಹೊರಡಿಸುವುದು, ಅದರ ಬಗ್ಗೆ ವಿರೋಧ ವ್ಯಕ್ತವಾದಾಗ ಸುತ್ತೋಲೆ ವಾಪಸು ಪಡೆಯುವುದು ಕರ್ನಾಟಕ ಸರಕಾರದ ವಾರ್ಷಿಕ ಚಾಳಿ ಆದಂತಿದೆ. ಅಥವಾ ಸರಕಾರಿ ಶಾಲೆಗಳನ್ನು ಮುಚ್ಚುತ್ತಿಲ್ಲ, ಬರಿಯ ವಿಲೀನಗೊಳಿಸಲಾಗುತ್ತಿದೆ ಎಂದು ಹೇಳುವುದೂ ಈ ಚಾಳಿಯ ಭಾಗ. ವಿಲೀನಗೊಳಿಸುವುದು ಎಂದರೆ ಒಂದು ಶಾಲೆ ಮುಚ್ಚಿ ಇದ್ದ ಮಕ್ಕಳನ್ನು ಇನ್ನೊಂದು (ಹೆಚ್ಚಾಗಿ) ದೂರದ ಶಾಲೆಗೆ ಬಲವಂತವಾಗಿ ವರ್ಗಾಯಿಸುವುದು ಎಂದು ಶಾಲೆಗೆ ಹೋಗದವರಿಗೂ ತಿಳಿಯುವ ವಿಷಯ. ಈ ವರ್ಷವೂ ಈ ಕಪಟ ನಾಟಕ ನಡೆದಿದೆ. ಸರಕಾರಿ ಶಾಲಾ ವ್ಯವಸ್ಥೆಯನ್ನು, ಕನ್ನಡ ಮಾಧ್ಯಮ ಶಾಲೆಗಳನ್ನು ನಾಶ ಮಾಡುವ ಹುನ್ನಾರ ಸತತವಾಗಿ ಮುಂದುವರೆಯುತ್ತಿದೆ.

ಮೇ 21ರಂದು ಹೊರಡಿಸಿದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸುತ್ತೋಲೆಯಲ್ಲಿ 7 ಶೈಕ್ಷಣಿಕ ಜಿಲ್ಲೆಗಳ 791 ಶಾಲೆಗಳನ್ನು, ಹಾಗೂ ಜೂನ್ 1ರ ಸುತ್ತೋಲೆಯಲ್ಲಿ ಉಳಿದ 27 ಶೈಕ್ಷಣಿಕ ಜಿಲ್ಲೆಗಳ 2168 ಶಾಲೆಗಳನ್ನು 'ವಿಲೀನಗೊಳಿಸುವ'ಂತೆ ಆದೇಶಿಸಿದೆ. ಇವು 10 ಕ್ಕಿಂತ ಕಡಿಮೆ ಮಕ್ಕಳಿರುವ ಶಾಲೆಗಳನ್ನು ಹತ್ತಿರದ 31 ಮಕ್ಕಳಿಗಿಂತ ಹೆಚ್ಚು ದಾಖಲಾತಿ ಇರುವ 'ಶಾಲೆಗಳ ಜತೆ ವಿಲೀನಗೊಳಿಸುವ' ಕ್ರಮ ಎಂದು ಹೇಳಲಾಗಿದೆ. ಮುಚ್ಚಲ್ಪಟ್ಟ ಶಾಲೆಗಳ ವಿದ್ಯಾರ್ಥಿಗಳನ್ನು ಒಂದು ಕಿ.ಮಿ. ವ್ಯಾಪ್ತಿಯ ಒಳಗೆ ಇರುವ ಇತರೆ ಸರಕಾರಿ ಅಥವಾ ಅನುದಾನಿತ ಅಥವಾ ಅನುದಾನರಹಿತ ಶಾಲೆಗಳ ಆರ್.ಟಿ.ಇ. ಸೀಟುಗಳಿಗೆ ಸ್ಥಳಾಂತರಿಸಬೇಕು ಎಂದು ಸುತ್ತೋಲೆ ಹೇಳುತ್ತದೆ. ಇದು ಸಾಧ್ಯವಾಗದಿದ್ದಲ್ಲಿ ಹತ್ತಿರದ ಸರಕಾರಿ ಶಾಲೆಗೆ ವಿದ್ಯಾರ್ಥಿಗಳನ್ನು ಸ್ಥಳಾಂತರಿಸಿ ಅವರಿಗೆ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎನ್ನುತ್ತದೆ ಸುತ್ತೋಲೆ. ಶಾಲೆಗಳು ಆರಂಭವಾಗಿ ಒಂದು ವಾರದೊಳಗೆ ಇಂತಹ ಸುತ್ತೋಲೆ ಹೊರಡಿಸುವುದೇ ಇದು ಸರಕಾರಿ ಶಾಲಾ ವ್ಯವಸ್ಥೆ ಮತ್ತು ಸಾರ್ವತ್ರಿಕ ಶಿಕ್ಷಣದ ಬಗ್ಗೆ ಸರಕಾರದ ಕಾಳಜಿಯ ಅಭಾವವನ್ನು ತೋರಿಸುತ್ತದೆ.



ಈ ಬಗ್ಗೆ ಎಸ್.ಎಫ್.ಐ.ಯ ಯಂತಹ ವಿದ್ಯಾರ್ಥಿ ಸಂಘಟನೆಗಳು ಮತ್ತು ಎಸ್.ಡಿ.ಎಂ.ಸಿ. ಗಳ ರಾಜ್ಯ ಸಮನ್ವಯ ವೇದಿಕೆಯಂತಹ ಸಾರ್ವತ್ರಿಕ ಶಿಕ್ಷಣದ ಬಗ್ಗೆ ಕಾಳಜಿಯ ಸಂಘಟನೆಗಳು ತೀವ್ರವಾಗಿ ಪ್ರತಿಭಟಿಸಿದಾಗ, ಈ ಬಗ್ಗೆ ಸರಕಾರದ ಮಟ್ಟದಲ್ಲಿ ಯಾವುದೇ ನಿರ್ಣಯ ತೆಗೆದುಕೊಂಡಿರಲಿಲ್ಲ. ಈ ಸುತ್ತೋಲೆಯನ್ನು ವಾಪಸು ತೆಗೆದುಕೊಳ್ಳಲಾಗಿದೆ ಎಂದು ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಆದರೆ ಅನುಪಾತಕ್ಕಿಂತ ಹೆಚ್ಚು ಇರುವ ಶಿಕ್ಷಕರ ಖಾಲಿ ಹುದ್ದೆಗಳ ಗುರುತಿಸುವಿಕೆ, ಸ್ಥಳಾಂತರ ಮುಂದುವರೆಯುತ್ತದೆ ಎಂದೂ ಅವರು ಹೇಳಿದ್ದಾರೆ. ಆದರೆ ಇಲಾಖೆ ಅಧಿಕಾರಿಗಳು ಸರಕಾರದ ಜತೆ ಚರ್ಚಿಸಿ ಮುಂದಿನ ಕ್ರಮ ನಿರ್ಧರಿಸುವುದಾಗಿ ಹೇಳಿದ್ದಾರೆ. ಅಂದರೆ ವಿಲೀನ ಪ್ರಕ್ರಿಯೆಯನ್ನು ಪೂರ್ಣವಾಗಿ ಕೈ ಬಿಟ್ಟಿಲ್ಲ ಎಂದರ್ಥವೇ?

'ಈ ಸುತ್ತೋಲೆಯನ್ನು ನಂಬಿ ನಾವು ಚಳುವಳಿ ನಿಲ್ಲಿಸುವುದಿಲ್ಲ. ಯಾಕೆಂದರೆ ಇದು ಬೂದಿ ಮುಚ್ಚಿದ ಕೆಂಡದಂತಿದೆ. ಗಾಳಿ ಬಿಟ್ಟಾಗ ಬೂದಿ ಸರಿದು ಬೆಂಕಿ ಉರಿದು ಸರಕಾರಿ ಶಾಲೆಗಳನ್ನು ಆಹುತಿ ಪಡೆಯಬಹುದು.' ಎನ್ನುತ್ತಾರೆ, ಶಾಲೆ ಮುಚ್ಚುವ ನಿರ್ಧಾರದ ವಿರುದ್ಧ ಜೂನ್ 15ರಂದು ಶಾಸಕರ ಕಛೇರಿಗೆ ಮುತ್ತಿಗೆ ಹಾಕುವ ಚಳುವಳಿ ಘೋಷಿಸಿದ್ದ ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಗುರುರಾಜ ದೇಸಾಯಿ. ಹೆಚ್ಚುವರಿ ಶಿಕ್ಷಕರ ಗುರುತಿಸುವಿಕೆ, ಸ್ಥಳಾಂತರ ಮುಂದುವರೆಯುತ್ತದೆ ಎಂಬ ನಿರ್ಧಾರದಿಂದ ಇದು ಸ್ಪಷ್ಟವಾಗುತ್ತದೆ. 10 ರಿಂದ 30ರ ವರೆಗೆ ಮಕ್ಕಳಿರುವ ಶಾಲೆಗಳನ್ನು ಒಬ್ಬರೇ ಶಿಕ್ಷಕರು ನಿರ್ವಹಿಸುವಂತೆ ಮಾಡಿ, ಉಳಿದ ಶಿಕ್ಷಕರನ್ನು ವರ್ಗಾವಣೆ ಮಾಡಲಾಗುತ್ತಿದೆ. ಒಬ್ಬರೇ ಶಿಕ್ಷಕರಿರುವಾಗ ಮಕ್ಕಳ ದಾಖಲಾತಿ ಹೆಚ್ಚಳ ಆಗುವುದೇ ಇಲ್ಲ. ಕಡಿಮೆ ಆಗುವ ಸಾಧ್ಯತೆ ಹೆಚ್ಚು. ಆಗ ಸರಕಾರದ ಉದ್ದೇಶದಂತೆ ಸರಕಾರಿ ಶಾಲೆಗಳಿಗೆ ಬೀಗ ಬೀಳಲಿದೆ. ಮಕ್ಕಳ ದಾಖಲಾತಿ ಕಡಿಮೆ ಇರುವ ಶಾಲೆಗಳಲ್ಲಿ ಮೂಲ ಸೌಕರ್ಯ ಉತ್ತಮ ಪಡಿಸಬೇಕು,. ಶಿಕ್ಷಕರ ಸಂಖ್ಯೆ, ಕಲಿಸುವ ಗುಣಮಟ್ಟ ಹೆಚ್ಚಿಸಿದರೆ ಮಾತ್ರ ಮಕ್ಕಳ ದಾಖಲಾತಿ ಹೆಚ್ಚುತ್ತದೆ ಎಂದು ಎಸ್.ಎಫ್.ಐ. ಒತ್ತಾಯಿಸುತ್ತಾ ಬಂದಿದೆ. ವಿಲೀನದ ಹೆಸರಲ್ಲಿ ಜಾಣತನ ಪ್ರದರ್ಶಿಸಿ ಪರೋಕ್ಷವಾಗಿ ಶಾಲೆ ಮುಚ್ಚುವ ಸರಕಾರದ ಪ್ರಯತ್ನಕ್ಕೆ ಪ್ರತಿರೋಧ ಒಡ್ಡುತ್ತೇವೆ ಎನ್ನುತ್ತಾರೆ. ಗುರುರಾಜ ದೇಸಾಯಿ.

ಇನ್ನೂ ಕೆಲವು ಕ್ರಮಗಳಿಂದ ಪರೋಕ್ಷವಾಗಿ 'ಸರಕಾರಿ ಶಾಲೆಗಳನ್ನು ಮುಚ್ಚಲು' ಸರಕಾರ ಹೊರಟಿದೆ ಎಂದು ಖ್ಯಾತ ಶಿಕ್ಷಣತಜ್ಞ ವಿ.ಪಿ.ನಿರಂಜನಾರಾಧ್ಯ ಆಪಾದಿಸುತ್ತಾರೆ. ಕರ್ನಾಟಕ ಶಿಕ್ಷಣ ಕಾಯಿದೆ 1983ರ ಪ್ರಕಾರ ಸುತ್ತಮುತ್ತಲಿನ ಒಂದು ಕಿ.ಮೀ. ದೂರದಲ್ಲಿ ಯಾವುದೇ ಸರಕಾರಿ ಅಥವಾ ಸರಕಾರಿ ಅನುದಾನಿತ ಶಾಲೆ ಇದ್ದರೆ ಖಾಸಗಿ ಶಾಲೆಗೆ ಅನುಮತಿ ಕೊಡಲಾಗದು. ಆದರೆ ಈ ಕಾಯಿದೆ ಉಲ್ಲಂಘಿಸಿ ಖಾಸಗಿ ಶಾಲೆಗಳಿಗೆ ಅನುಮತಿ ಕೊಡಲಾಗಿದೆ. ಆದ್ದರಿಂದಲೇ ಈ ಸುತ್ತೋಲೆಯಲ್ಲಿ ಮುಚ್ಚಿದ ಶಾಲೆಗಳ ಮಕ್ಕಳನ್ನು ಸುತ್ತಲಿನ ಒಂದು ಕಿ.ಮಿ. ಒಳಗೆ ಅನುದಾನಿತ ಅಥವಾ ಅನುದಾನರಹಿತ ಶಾಲೆಗಳ ಆರ್.ಟಿ.ಇ. ಸೀಟುಗಳಿಗೆ ಸ್ಥಳಾಂತರಿಸಬೇಕು ಎಂದು ಹೇಳಿರುವುದು. ಕಾಯಿದೆ ಉಲ್ಲಂಘಿಸಿರದಿದ್ದರೆ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಕಾಯಿದೆ ಉಲ್ಲಂಘಿಸಿ ಶಾಲೆಗಳಿಗೆ ಅನುಮತಿ ಕೊಟ್ಟ ಅಧಿಕಾರಿಗಳನ್ನು ಶಿಕ್ಷಿಸಬೇಕು ಎನ್ನುತ್ತಾರೆ ನಿರಂಜನಾರಾಧ್ಯ. ಸರಕಾರಿ ಶಾಲಾ ಶಿಕ್ಷಕರಿಗೆ ಚುನಾವಣೆ, ಜನಗಣತಿ, ಸಮೀಕ್ಷೆ ಸೇರಿದಂತೆ ಹಲವಾರು 'ಸರಕಾರಿ' ಶಿಕ್ಷಣೇತರ ಕೆಲಸಗಳನ್ನು ಹೇರಲಾಗುತ್ತದೆ. ಖಾಸಗಿ ಶಾಲೆಗಳಲ್ಲಿ ಇಂತಹ ಹೊರೆ ಇರವುದಿಲ್ಲ. ಆದ್ದರಿಂದ ಖಾಸಗಿ ಶಾಲೆಗಳು ಉತ್ತಮ ಎಂಬ ಭಾವನೆ ಜನರಲ್ಲಿ ಬರುವಂತಾಗಿದೆ. ಹೆಚ್ಚುವರಿ ಶಿಕ್ಷಕರ ಗುರುತಿಸುವಿಕೆಯನ್ನು ಅತ್ಯಂತ ಅವೈಜ್ಞಾನಿಕವಾಗಿ ಮಾಡಲಾಗುತ್ತಿದೆ. ಮೇ 16ರ ಸುತ್ತೋಲೆಯಲ್ಲಿ 3 ವಾರಗಳೊಳಗೆ ಪೂರ್ಣಗೊಳಿಸಿ ಅವರ ಮರು-ನಿಯುಕ್ತಿಗೊಳಿಸಬೇಕೆಂದು ಹೇಳಲಾಗಿದೆ. ವಿದ್ಯಾರ್ಥಿ-ಶಿಕ್ಷಕ ಅನುಪಾತ ಬಿಟ್ಟರೆ ತರಗತಿ-ವಾರು ವಿಷಯ-ವಾರು ಶಿಕ್ಷಕರ ಅಗತ್ಯತೆಯನ್ನು ಹೆಚ್ಚುವರಿ ಶಿಕ್ಷಕರ ಗುರುತಿಸುವಿಕೆಯಲ್ಲಿ ಗಣನೆಗೆ ತೆಗೆದುಕೊಂಡಂತಿಲ್ಲ.

ಆರ್.ಟಿ.ಇ. ಜಾರಿ ಮಕ್ಕಳು ಮತ್ತು ಪಾಲಕರನ್ನು ಸರಕಾರಿ ಕನ್ನಡ ಶಾಲೆಗಳಿಂದ ಖಾಸಗಿ ಇಂಗ್ಲಿಷ್ ಶಾಲೆಗಳತ್ತ ಸೆಳೆಯುವ ಕೆಲಸ ಮಾಡುತ್ತಿದೆ. ಆ ಮೂಲಕ ಕನ್ನಡ ಮಾಧ್ಯಮ ಮತ್ತು ಸರಕಾರಿ ಶಾಲಾ ವ್ಯವಸ್ಥೆ ಎರಡೂ ದುರ್ಬಲವಾಗುತ್ತಿದೆ. ಆರ್.ಟಿ.ಇ. ಜಾರಿ ಸಾಮಾಜಿಕ ನ್ಯಾಯಕ್ಕಿಂತ ಹೆಚ್ಚಾಗಿ ಖಾಸಗಿ ಅನುದಾನರಹಿತ ಶಾಲೆಗಳ ಖಜಾನೆ ತುಂಬುವ ಕೆಲಸ ಮಾಡುತ್ತಿದೆ. 1ರಿಂದ 5 ನೇ ತರಗತಿವರೆಗಿನ ಆರ್.ಟಿ.ಇ. ಜಾರಿಗೆ ಸರಕಾರ ಸುಮಾರು 400 ಕೋಟಿ ರೂ. ಖರ್ಚು ಮಾಡುತ್ತಿದೆ. 5ರಿಂದ 8 ನೇ ತರಗತಿವರೆಗಿನ ಆರ್.ಟಿ.ಇ. ಜಾರಿಗೆ ವಿಸ್ತರಿಸಿದಾಗ 1500 ಕೋಟಿ ರೂ. ಖರ್ಚಾಗಲಿದೆ. ಇದೇ ಹಣವನ್ನು ಸರಕಾರಿ ಕನ್ನಡ ಶಾಲೆ ವಿಸ್ತರಣೆ ಗುಣಮಟ್ಟ ಉತ್ತಮ ಪಡಿಸಲು ಬಳಸಬಾರದೇಕೆ ಎಂದು ಶಿಕ್ಷಣ ಮಂತ್ರಿಗಳನ್ನು ಪ್ರಶ್ನಿಸಿದರೆ, ಇದು ಕಾಯಿದೆಯಾದ್ದರಿಂದ ಪಾಲಿಸಲೇಬೇಕು ಎನ್ನುತ್ತಾರೆ. ಸರಕಾರಿ ಶಾಲಾ ವ್ಯವಸ್ಥೆಯ ವಿಸ್ತಾರ, ಗುಣಮಟ್ಟಗಳ ನ್ಯೂನತೆಗಳಿಂದಾಗಿ ಆರ್.ಟಿ.ಇ.ಯ ಈ ಕ್ರಮದ ಅಗತ್ಯ ಬಿದ್ದಿದ್ದು ಎಂದು ಶಿಕ್ಷಣ ಮಂತ್ರಿಗಳಿಗೆ ಗೊತ್ತಿಲ್ಲವೆಂದೇನಲ್ಲ. ಸರಕಾರಿ ಶಾಲಾವ್ಯವಸ್ಥೆಯ ವಿಸ್ತಾರ, ಗುಣಮಟ್ಟಗಳ ನ್ಯೂನತೆಗಳನ್ನು ಇನ್ನಷ್ಟು ಹೆಚ್ಚಿಸಿ, ಅವುಗಳನ್ನು ದುರ್ಬಲಗೊಳಿಸಿ ಮುಚ್ಚಿ, ಖಾಸಗಿ ಶಿಕ್ಷಣ ಸಂಸ್ಥೆಗಳ ಲಾಭ ಹೆಚ್ಚಿಸುವುದು ಸರಕಾರದ ನೀತಿಗಳ ಹಿಂದಿರುವ ಹುನ್ನಾರ ಎಂಬುದು ದಿನೇ ಸ್ಪಷ್ಟವಾಗುತ್ತಿದೆ. ಇವುಗಳನ್ನು ಬಯಲು ಮಾಡಿ ಇದರ ವಿರುದ್ಧ ಪ್ರಜಾಸತ್ತಾತ್ಮಕ ಶಕ್ತಿಗಳು ಒಗ್ಗೂಡಿ ಹೋರಾಟ ಮಾಡುವ ಅಗತ್ಯ ಇದೆ.

ಫೇಸ್ ಬುಕ್‌ನಲ್ಲಿ



ಒಬ್ಬ ಮುಸ್ಲಿಮನ ಬಳಿ ಗನ್ನು ಇದ್ದರೆ
– ಆತ ಭಯೋತ್ಪಾದಕ
ಒಬ್ಬ ದಲಿತನ ಬಳಿ ಗನ್ನು ಇದ್ದರೆ
– ಆತ ನಕ್ಸಲೈಟ್
ಒಬ್ಬ ಹಿಂದೂ ಬಳಿ ಗನ್ನು ಇದ್ದರೆ
– ಆತ ರಾಷ್ಟ್ರವಾದಿ

ನಾಳಿನ ಕಾರ್ಯಕ್ರಮಗಳು

ಜೂನ್ 12	: ವೃತ್ತಿಪರ ಶಿಕ್ಷಣ ಪದವೀಧರರ ಪ್ರಥಮ ಸಂಸ್ಥಾಪನಾ ರಾಜ್ಯ ಸಮಾವೇಶ, ಶಿವಮೊಗ್ಗ.
ಜೂನ್ 12–14	: ಅದಿವಾಸಿ-ಬುಡಕಟ್ಟು ಸಮುದಾಯಗಳ ಅಭಿವೃದ್ಧಿ, ರಾಜ್ಯ ಮಟ್ಟದ ಜಾಗೃತಿ ಶಿಬಿರ, ಜೋಯ್ಡಾ, ಉತ್ತರ ಕನ್ನಡ.
ಜೂನ್ 15	: 'ಸರ್ಕಾರಿ ಶಾಲೆಗಳ ವಿಲೀನ' ಖಂಡಿಸಿ ಎಸ್‌ಎಫ್‌ಐನಿಂದ ರಾಜ್ಯದ ಎಲ್ಲಾ ಶಾಸಕರ ಕಾರ್ಯಾಲಯಕ್ಕೆ ಮುತ್ತಿಗೆ
ಜುಲೈ 1–3	: ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕೌನ್ಸಿಲ್ ಸಭೆ, ಶಿಕ್ಷಕರ ಸದನ, ಬೆಂಗಳೂರು.

ಸಿಐಟಿಯು ಜಿಲ್ಲಾ ಸಮ್ಮೇಳನಗಳು

ಜೂನ್ 19	: ಧಾರವಾಡ ಜಿಲ್ಲೆ
ಜೂನ್ 24–25	: ಕೊಪ್ಪಳ
ಜೂನ್ 26–27	: ಬಳ್ಳಾರಿ ಜಿಲ್ಲೆ
ಜುಲೈ 8–9	: ಚಿಕ್ಕಬಳ್ಳಾಪುರ ಜಿಲ್ಲೆ
ಜುಲೈ 16–17	: ಮೈಸೂರು ಜಿಲ್ಲೆ
ಜುಲೈ 23–24	: ದಾವಣಗೆರೆ ಜಿಲ್ಲೆ
ಜುಲೈ 24–25	: ಬೆಂಗಳೂರು ದಕ್ಷಿಣ ಜಿಲ್ಲೆ
ಜುಲೈ 29–30	: ಕಲಬುರಗಿ ಜಿಲ್ಲೆ
ಜುಲೈ 30–31	: ಉತ್ತರ ಕನ್ನಡ
ಜುಲೈ 30–31	: ಚಿತ್ರದುರ್ಗ
ಜುಲೈ 30	: ಯಾದಗಿರಿ ಜಿಲ್ಲೆ
ಜುಲೈ 31–ಆಗಸ್ಟ್ 01	: ಕೋಲಾರ ಜಿಲ್ಲೆ
ಆಗಸ್ಟ್ 06–07	: ಬೆಳಗಾಂ
ಆಗಸ್ಟ್ 6–7	: ತುಮಕೂರು ಜಿಲ್ಲೆ
ಆಗಸ್ಟ್ 13–14	: ಹಾಸನ ಜಿಲ್ಲೆ

ನಮ್ಮ ಚುರು-ಟ್ವೀಟ್

@ShirishKunder

ನಾನು ಎಲ್ಲರಿಗೂ ಶಾಂತಿಯುತವಾಗಿ ಯೋಚಿಸಬೇಕು ಎಂದು ಮನವಿ ಮಾಡಿಕೊಳ್ತೀನಿ. ಸೆನ್ಸಾರ್ ಬೋರ್ಡಿನಿಂದ ಪಹಲಾಜ್ ನಿಹಲಾನಿಯವರನ್ನು ರಾಜಿನಾಮೆ ಕೊಡುವಂತೆ ಮಾಡಿದರೆ, ಅವರನ್ನು ರಿಸರ್ವ ಬ್ಯಾಂಕಿನ ಗವರ್ನರ್ ಮಾಡುವ ಅಪಾಯ ಇದೆ. ಅದು ಹೆಚ್ಚು ಅಪಾಯಕಾರಿ ಅಲ್ವೇ?

–ಶಿರಿಶ್ ಕುಂದರ್

('ಉಡ್ತಾ ಪಂಜಾಬ್' ಫಿಲಂಗೆ ಸೆನ್ಸಾರ್ ಬೋರ್ಡ್ 70ಕ್ಕೂ ಹೆಚ್ಚು ಕತ್ತರಿ ಹಾಕಿರುವ ವಿವಾದ ಮತ್ತು ರಿಸರ್ವ ಬ್ಯಾಂಕಿನ ಗವರ್ನರ್ ರಾಜನ್ ಬಗ್ಗೆ ಸುಬ್ರಹಮಣ್ಯ ಸ್ವಾಮಿ ಎಬಿಸಿರುವ ವಿವಾದ ಎರಡಕ್ಕೂ ಸೇರಿದ ಅಣಕ)

ರಾಜ್ಯಸಭಾ ಚುನಾವಣೆ: ಕುದುರೆ ವ್ಯಾಪಾರಕ್ಕೆ ಕಡಿವಾಣ ಹೇಗೆ?

ಎಸ್.ವೈ. ಗುರುಶಾಂತ

ಕರ್ನಾಟಕ ವಿಧಾನ ಸಭೆಯಿಂದ ರಾಜ್ಯಸಭೆಗೆ ತೆರವಾದ ನಾಲ್ಕು ಸ್ಥಾನಗಳಿಗೆ ಮತದಾನವಾಗಲು ಇನ್ನೇನು ಉಳಿದಿರುವುದು ಕೇವಲ 24 ಗಂಟೆಗಳು! ಆದರೆ ಚುನಾವಣೆ 2016ರ ಜೂನ್ 11 ರಂದು ಎಂದು ನಿಗದಿಯಾಗಿ ಬಹುತೇಕ ಮತದಾನಕ್ಕೆ ಚುನಾವಣಾ ಪ್ರಕ್ರಿಯೆಗಳು ನಡೆದಿರುವಾಗಲೂ ಮತದಾನ ನಡೆವ ಬಗ್ಗೆ ಅನುಮಾನ, ಆತಂಕ! ಎಲ್ಲರಿಗೂ ಕೇಂದ್ರ ಚುನಾವಣಾ ಆಯೋಗ ತೆಗೆದುಕೊಳ್ಳಲಿರುವ ನಿರ್ಧಾರದತ್ತಲೇ ಕಣ್ಣು! ಯಾರೆಲ್ಲ? ಚುನಾವಣೆಯನ್ನು ರದ್ದುಪಡಿಸುವುದು ಗ್ಯಾರಂಟಿ ಎಂಬ ಬಗ್ಗೆ ಕೆಲವು ಕಾನೂನು ಪಂಡಿತರು, ವಿಷಯಾಸಕ್ತರ ಮಾತುಗಳಿಗೆ ಬರವಿಲ್ಲ. ಆದರೆ ಅದು ಅಂದುಕೊಂಡಷ್ಟು ಸುಲಭವೂ ಅಲ್ಲ!

ಪ್ರಕ್ರಿಯೆ ನಡೆದಿರುವಾಗಲೇ ಚುನಾವಣೆಯೊಂದು ರದ್ದುಗೊಳ್ಳುವ ಸಂದರ್ಭ ಕರ್ನಾಟಕದಲ್ಲಿ ಹೊಸದು. 224 ಸಂಖ್ಯಾ ಬಲದ ವಿಧಾನ ಸಭೆಯಿಂದ ಸಂಸತ್ತಿನ ಮೇಲ್ಮನೆ – ರಾಜ್ಯಸಭೆಗೆ 4 ಸದಸ್ಯರನ್ನು ಆರಿಸಬೇಕಿದೆ. ವಿಧಾನ ಸಭೆಯಲ್ಲಿನ ಮೂರು ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿ(ಎಸ್) ಗಳು ತಮ್ಮ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿವೆ. ಕಾಂಗ್ರೆಸ್‌ಗೆ ಒಟ್ಟು 123 ಸದಸ್ಯರ ಬಲ. ಹೀಗಾಗಿ ಅದು ಇಬ್ಬರನ್ನು (ಆಸ್ಕರ್ ಫರ್ನಾಡಿಸ್, ಜೈರಾಮ್ ರಮೇಶ್) ಅನಾಯಾಸವಾಗಿ ಗೆಲ್ಲಿಸಿಕೊಳ್ಳಲಿದೆ. ಅದಕ್ಕೆ 90 ಶಾಸಕರ ಬಲ ಸಾಕು. ಇನ್ನು ಉಳಿಯುವುದು 33 ಇದರೊಂದಿಗೆ ಕಾಂಗ್ರೆಸ್ ಜೊತೆಗೆ ಘೋಷಿಸಿಕೊಂಡ 6 ಪಕ್ಷೇತರರು. ಅಂದರೆ ಅದರ ಗೆಲುವಿಗೆ ಇನ್ನೂ 6 ಶಾಸಕರ ಅಗತ್ಯವಿದೆ. ಇದನ್ನು ಪಕ್ಷೇತರ ಶಾಸಕರ ನಡುವಿನಿಂದ ಸೆಳೆಯಬಹುದೆಂಬ ಲೆಕ್ಕಾಚಾರದಲ್ಲಿ ಮೂರನೆಯ ಅಭ್ಯರ್ಥಿ (ಕೆ.ಸಿ. ರಾಮಮೂರ್ತಿಯವರು)ಯನ್ನೂ ಕಣಕ್ಕಿಳಿಸಿದೆ. ಬಿಜೆಪಿ ಪಕ್ಷವು ನಿರ್ಮಲಾ ಸೀತರಾಮನ್ ಎಂಬ ಸ್ವಯಂ ಸೇವಕಿಯನ್ನು ಕಣಕ್ಕಿಳಿಸಿದ್ದರೆ. ಜೆಡಿ(ಎಸ್) ಪಕ್ಷವು ಮಂಗಳೂರು ಮೂಲದ ಫರೂಕಿಯವರನ್ನು ಇಳಿಸಿದೆ. ಈ ಎರಡು ಪಕ್ಷಗಳು ಸ್ವತಂತ್ರ ಬಲದಿಂದ ಗೆಲ್ಲುವಷ್ಟು ಸ್ಥಾನಗಳು ಇಲ್ಲ. ಹೀಗಾಗಿ ಬೇರೆ ಕಡೆಗೆ ಕೈಚಾಚಲೇ ಬೇಕಿದೆ!



ಇಂತಹ "ಬೆಂ–ಬಲ" "ಗಳಿಸಲು" ನಡೆದ ಕಸರತ್ತಿನಲ್ಲಿ ಕೆಲವು ಶಾಸಕರಿಗೆ 'ಹಣ' ನೀಡುವ ಆಮಿಷ ಒಡ್ಡಲಾಗಿದೆಯೆಂಬುದು, ಇದು 'ಟೈಮ್ಸ್ ನೌ' ಮತ್ತು ಇಂಡಿಯಾ ಟುಡೇ' ಎಂಬ ಎರಡು ಪರಭಾಷೆ ಚಾನೆಲ್‌ಗಳು ನಡೆಸಿದ 'ಕುಟುಕು' ಕಾರ್ಯಾಚರಣೆಯಲ್ಲಿ 'ಬಯಲಾಗಿದೆ'. ಹೀಗಾಗಿ ಹಣದ ಆಮಿಷ ಒಡ್ಡಿರುವುದು 'ಖಾತ್ರಿಯಾಗಿ'ರುವುದರಿಂದ ಈ ಚುನಾವಣೆಗಳನ್ನು ನಡೆಸದೇ ರದ್ದುಗೊಳಿಸಿ, ಹೊಸದಾಗಿ ಪ್ರಕಿಯೆ ಆರಂಭಿಸಬೇಕು ಎಂಬುದು ಈಗಿನ ಒತ್ತಾಯ! ಹೀಗಾಗಿಯೇ ಈ ಬಗ್ಗೆ ಚುನಾವಣಾ ಆಯೋಗದ ತೀರ್ಪಿಗಾಗಿ ಕಾಯುವ ಕಾತುರ!

ಹಾಗೆ ನೋಡಿದರೆ, ಈ ಚಾನೆಲ್‌ಗಳ ಕುಟುಕು ಕಾರ್ಯಚರಣೆ ಹೊಸ ಸತ್ಯ ಸಂಗತಿಗಳನ್ನೇನೂ ಹೊರಗೆಡಹಿಲ್ಲ. ಎಲ್ಲರಿಗೂ ಗೊತ್ತಿರುವುದನ್ನೇ ಶಾಸಕರ ಬಾಯಿಯಿಂದ (ಬಿ.ಆರ್. ಪಾಟೀಲ್, ಆರ್. ರಾಜೀವ್) ಮಾತನಾಡಿಸಿ ದಾಖಲಿಸಿಕೊಂಡಿದೆ. ಅಂತೂ ಈ ಪ್ರಸಂಗಗಳು ಮುತ್ಸದ್ದಿಗಳೇ ತುಂಬಿ, ಮಾರ್ಗದರ್ಶನ ಮಾಡುವ 'ಹಿರಿಯರ ಮನೆ'ಯ ಪ್ರವೇಶ ಎಂಥಾ ದಗಲುಬಾಜಿಗಳ, ಧನಿಕರ ವ್ಯಾಪಾರದ ಕೇಂದ್ರವಾಗಿದೆ ಮತ್ತು ಜನರಿಂದ ಚುನಾಯಿತವಾದ ಶಾಸಕರು ಹೇಗೆ ಹಣದ ಎಂಜಲಿಗೆ ಬಾಯ್ದೆರೆದು ತಮ್ಮನ್ನು ಎಳ್ಳಷ್ಟು ಅಳುಕಿಲ್ಲದೇ ಪ್ರಾಣಿಗಳಂತೆ ಮಾರಾಟವಾಗುತ್ತಾರೆ ಎಂಬ ಅಸಹ್ಯಕರ ಸತ್ಯವನ್ನು ಮತ್ತೇ ಹೊರಗೆಡಹಿದೆ.

ಇಂತಹ ಪ್ರಸಂಗಗಳು ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾದುದೇನಲ್ಲ. ವಿವಿಧ ಕ್ಷೇತ್ರಗಳ ಗಣ್ಯರು, ಅನುಭವಿಗಳು, ರಾಜಕೀಯ ಮುತ್ಸದ್ದಿಗಳ ಮನೆಯಾಗಿ, ಭಾರತದೇಶದ ವೈವಿಧ್ಯತೆ, ವೈಶಿಷ್ಟ್ಯತೆಗಳ ಸಂಗಮವಾಗಿರಬೇಕಾದ ಹಿರಿಯರ ಮನೆ ಇಂದೀಗ ರಾಜಕೀಯ ನಿರಾಶ್ರಿತರು, ಕೈಗಾರಿಕೋದ್ಯಮಿಗಳು, ರಿಯಲ್ ಎಸ್ಟೇಟ್, ಗಣಿಗಾರಿಕೆಯ ದಂಧೆಗಾರರ ನೆಲೆಯಾಗಿ ಮಾರ್ಪಟ್ಟಿರುವುದರಲ್ಲಿ ಕಾಂಗ್ರೆಸ್, ಬಿಜೆಪಿ, ಜೆಟಿ(ಎಸ್)ನಂತಹ ಪಕ್ಷಗಳ ಪಾತ್ರವೇ ಪ್ರಧಾನವಾಗಿದೆ. 1962ರ ನಂತರದಲ್ಲಿ ಕೆಲವು ಮಟ್ಟಿನಲ್ಲಿ ರಾಜರು, ಧನಿಕರನ್ನು ಸಭೆಗೆ ಆರಿಸಿದ್ದುದರಲ್ಲಿ ಕಾಂಗ್ರೆಸ್ ಜನಸಂಘಗಳ ಪಾಲು ಇದೆ. ಆಯಾ ರಾಜ್ಯಗಳಿಗೆ ಅಭ್ಯರ್ಥಿಗಳಿಗೆ ಮಾತ್ರವೇ ನೇಮಿತವಾಗಿದ್ದ ರಾಜ್ಯಸಭೆ ಚುನಾವಣೆಯಲ್ಲಿ ಹೊರರಾಜ್ಯದವರು ಸ್ಪರ್ಧಿಸುವ ಅವಕಾಶದ ತಿದ್ದುಪಡಿಯಾಗುತ್ತಲೇ ಅದು ಅಖಿಲ ಭಾರತ ವ್ಯಾಪಾರ ಕೇಂದ್ರವಾಗಿ ಮಾರ್ಪಟ್ಟಿರುವುದು ಕಹಿ ವಾಸ್ತವ. ಹೀಗೆ 'ಹಣವುಳ್ಳ ಆಕಾಂಕ್ಷೆ'ಗಳಿಂದಾಗಿ ಆರಿಸಬೇಕಾದ ಶಾಸಕರ ರೇಟೂ ಏರುತ್ತಲೇ ಹೋಗಿದೆ. ಬೇರೆ ಪಕ್ಷದವರಿರಲಿ, ಸ್ವಂತ ಪಕ್ಷದವರ ಮತಗಳನ್ನು 'ಮ್ಯಾನೇಜ್' ಮಾಡುವ ಅನಿವಾರ್ಯತೆ, ಕೋಟ್ಯಾಂತರ ಹಣ ಹಿಡಿದು ನಿಲ್ಲುವುದು. ಚುನಾವಣೆ ಸಿದ್ಧತೆ ಎಂದಾಗಿದೆ.

ಕುಟುಕು ಕಾರ್ಯಚರಣೆಯಲ್ಲಿ ಮತಹಾಕಲು ಒಬ್ಬ ಶಾಸಕನಿಗೆ 5 ರಿಂದ 10 ಕೋಟಿಯವರೆ ಬೇಡಿಕೆ ಇರುವುದು ದಾಖಲಾಗಿದೆ. ಕೆಲವರಿಗೆ ಅವರ "ಕ್ಷೇತ್ರದ ಅಭಿವೃದ್ಧಿ"ಗೆ 100 ಕೋಟಿ ಅನುದಾನ ನೀಡುವ ಭರವಸೆಯನ್ನು ಕಾಂಗ್ರೆಸ್ ನಾಯಕರು ನೀಡಿದ್ದಾರಂತೆ! ಅದೇ ರೀತಿಯಲ್ಲಿ ಈ ಸಲದಲ್ಲಿ ರೇಸ್‌ಗೆ ಇಳಿದಿರುವವಲ್ಲಿ ಜೆಡಿ(ಎಸ್) ಸಹ ಮತ ಖರೀದಿಗೆ ಯೋಗ್ಯತೆ ಇರುವ ಉದ್ಯಮಿಯನ್ನೇ ಕಣಕ್ಕಿಳಿಸಿದೆ. ಪಕ್ಷೇತರರನ್ನೂ ಸೆಳೆಯುವಲ್ಲಿ, ಮತ್ತು ಸ್ವಂತ ಪಕ್ಷದ ಕೆಲ ಶಾಸಕರನ್ನು ಹಿಡಿದಿಟ್ಟುಕೊಳ್ಳುವಲ್ಲಿಯೂ ಅದು ತೀರಾ ಸಂದಿಗ್ಧತೆ ಎದುರಿಸುತ್ತಿದೆ. ಹೀಗಾಗಿಯೂ ಅದು ಕಾಂಗ್ರೆಸ್ ಮೇಲೆ ಹಾರಾಟ ನಡೆಸುತ್ತಿದೆ! ಈ ಆತ್ಮವಂಚಕ, ಹಿಪಾಕ್ರಸಿಯ ಪ್ರವೃತ್ತಿ ಆ ಎಲ್ಲಾ ಪಕ್ಷಗಳಲ್ಲೂ ಇದೆ.

ಈಗ ತಕ್ಷಣದ ಪ್ರಶ್ನೆಯೆಂದರೆ, ಚುನಾವಣಾ ಆಯೋಗ ಏನು ಮಾಡಬೇಕು? ಮಾಡಲಿದೆ? ನಮ್ಮೆದುರು ಎರಡು ನಿದರ್ಶನಗಳಿವೆ. ಹಿಂದೆ 2012 ರಲ್ಲಿ ಝಾರ್ಖಂಡ್ ನಿಂದ ರಾಜ್ಯಸಭೆಗೆ ಸದಸ್ಯರನ್ನು ಆಯ್ಕೆ ಮಾಡಬೇಕಾದಾಗ ಮತದಾರರಿಗೆ ಹಣದ ಆಮಿಷದ ಆಕ್ರಮದ ಕಾರಣದಿಂದ ಚುನಾವಣೆಯನ್ನು ರದ್ದುಗೊಳಿಸಿದ್ದು, ಅಲ್ಲದೇ ಇತ್ತೀಚೆಗೆ ತಮಿಳುನಾಡಿನ ಎರಡು ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಮತದಾರರಿಗೆ ಎಗ್ಗಿಲ್ಲದೇ ಬಹಿರಂಗವಾಗಿಯೇ ಹಣ ಹಂಚಿಕೆ ಆಮಿಷದಿಂದಾಗಿ ರದ್ದುಗೊಳಿಸಿದ್ದ ಪ್ರಸಂಗಗಳು.

ಹಿಂದ 2012 ರಲ್ಲಿ – ಝಾರ್ಖಂಡ್ ಚುನಾವಣೆಯಲ್ಲಿ ರಾಜ್ಯಸಭೆ ಚುನಾವಣೆಗೆ ಸುಮಾರು 240 ಕೋಟಿಯಷ್ಟು ಹಣವನ್ನು ಆಯೋಗ ವಶಪಡಿಸಿಕೊಂಡಿತ್ತು. ಈ ಎಲ್ಲಾ ವರದಿಗಳನ್ನು ಪರಿಗಣಿಸಿದ ಆಯೋಗ ರದ್ದು ಪಡಿಸಲು ನಿರ್ಧರಿಸಿ ಅದನ್ನು ಜಾರಿಗೊಳಿಸುವ ಆದೇಶ ನೀಡುವಂತೆ ರಾಷ್ಟ್ರಪಾಲರಿಗೆ ಕೇಳಿತ್ತು. ಹಣವುಳ್ಳವರು ಈ ರಾಜ್ಯದಿಂದ ರಾಜ್ಯಸಭೆಗೆ ಆರಿಸಿ ಹೋಗುವ ಅತೀ ಸುಲಭ ಸ್ಥಳವಾಗಿ ಮಾರ್ಪಾಡಾದ್ದನ್ನು ಅತ್ಯಂತ ಕಟುವಾಗಿ ಆಯೋಗ ಟೀಕಿಸಿದೆ.

ಇಲ್ಲೂ ಕರ್ನಾಟಕದಲ್ಲಿಯೂ ಕಾಂಗ್ರೆಸ್‌ನ ಈ ವ್ಯವಹಾರದ ಬಗ್ಗೆ ತಕರಾರು ಎತ್ತಿ ರದ್ದುಗೊಳಿಸಲು ಒತ್ತಾಯಿಸಲಾಗುತ್ತಿದೆ. ಆದರೆ ಝಾರ್ಖಂಡ್ ಮತ್ತು ತಮಿಳುನಾಡಿನಂತೆ ಇಲ್ಲಿ ಹಣ ವಶಪಡಿಸಿಕೊಂಡಿಲ್ಲ. ಆದರೆ ಮಾತುಗಳಲ್ಲಿ ಇಂಗಿತ ಹೇಳಲಾಗಿದೆ. ಹೀಗಾಗಿ ಇಷ್ಟರ ಮೇಲೆಯೇ ಕ್ರಮ ವಹಿಸಬಹುದೇ ಎಂಬ ಪ್ರಶ್ನೆಗಳು ಹೊರಟಿವೆ. ಅಂತಹ ಅಧಿಕಾರ ಆಯೋಗಕ್ಕೆ ಇಲ್ಲವೆಂದೂ ಅದನ್ನು ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರ ರವಾನಿಸಲಾಗಿದೆ.

ಆಯೋಗದ ತೀರ್ಮಾನ ಏನೇ ಇರಲಿ. ಈಗಿನ ವ್ಯವಹಾರಗಳು ಅತ್ಯಂತ ಹೇಯಕರ, ಮತ್ತು ಪ್ರಜಾಪ್ರಭುತ್ವವನ್ನು ಬುಡಮೇಲುಗೊಳಿಸುವ ಕೃತ್ಯಗಳು. ಇಂತಹ ಅಕ್ರಮ, ಅವ್ಯವಹಾರಗಳಿಗೆ ಅವಕಾಶಗಳು ಇರಬೇಕೆಂಬುದು ಬಿಜೆಪಿ, ಕಾಂಗ್ರೆಸ್‌ನಂತಹ ಪಕ್ಷಗಳಿಗೆ ನಿಜ ಇಂಗಿತ.

ಆದ್ದರಿಂದ ಇಂದಿನ ಚುನಾವಣಾ ಪದ್ಧತಿಯಲ್ಲೇ ಅದಕ್ಕೆ ಅವಕಾಶಗಳಿವೆ. ಇದಕ್ಕೆ ಅಂಕುಶ ಹಾಕಬೇಕಾದಲ್ಲಿ ಸಮಗ್ರವಾಗಿ ಚುನಾವಣಾ ಸುಧಾರಣೆಗಳು ಅತ್ಯಂತ ಜರೂರಿಯಾಗಿ ಅಗಲೇಬೇಕಿದೆ. ಅದರಲ್ಲಿ ಸರ್ಕಾರವೇ ಚುನಾವಣೆ ವೆಚ್ಚ ನಿರ್ವಹಿಸುವ, ಸಂವಿಧಾನದ ಆಶಯಕ್ಕೆ ಅನುಗುಣವಾಗಿ ಅಭ್ಯರ್ಥಿಗಳನ್ನು ಆರಿಸುವ ವ್ಯವಸ್ಥೆ ತರಬೇಕಿದೆ. ಈ ದಿಕ್ಕಿನಲ್ಲಿ ಮುಕ್ತ ಚಿಂತನೆ, ದಿಟ್ಟ ಕ್ರಮ ಅಗತ್ಯ.

ಈ ಹಿನ್ನೆಲೆಯಲ್ಲಿ ಈಗ ಚುನಾವಣಾ ಆಯೋಗ ಕಠಿಣಕ್ರಮ ವಹಿಸಲಿ. ಹಾಗೇ ಮುಖ್ಯವಾಗಿ ತಮ್ಮನ್ನು ಮಾರಿಕೊಳ್ಳುವ ಶಾಸಕರ ಬಗ್ಗೆ, ಅಕ್ರಮಗಳ ವ್ಯವಸ್ಥೆ ವಿರುದ್ಧ ಜನ ಜಾಗೃತರಾಗಿ ಪಾಠ ಕಲಿಯಲಿ. ■

ಈ ವಾರ ಚರಿತ್ರೆಯಲ್ಲಿ

13 ಜೂನ್ 1959

'ವಿಮೋಚನಾ ಸಮರಂ' ಆರಂಭ

ಇದು ಕೇರಳದ ಮೊದಲ ಕಮ್ಯುನಿಸ್ಟ್ ಸರಕಾರವನ್ನು ವಜಾ ಮಾಡಬೇಕೆಂದು ಕಾಂಗ್ರೆಸ್ ಮುಂತಾದ ರಾಜಕೀಯ ಪಕ್ಷಗಳು, ಜಮೀನುದಾರಿ ಶಕ್ತಿಗಳು, ಜಾತಿವಾದಿ ಕೋಮುವಾದಿ ಸಂಘಟನೆಗಳು ಸೇರಿ ಸಂಘಟಿಸಿದ ಚಳುವಳಿ ತೀವ್ರವಾದ ದಿನ. ಇದಕ್ಕೆ ತಕ್ಷಣದ ಕಾರಣ ಈ ದಿನ ಅಂಗಮಾಲಿ ಎಂಬಲ್ಲಿ ನಡೆದ ಹಿಂಸಾತ್ಮಕ ಪ್ರದರ್ಶನದ ಮೇಲೆ ಪೋಲೀಸ್ ಗೋಳಿಬಾರಿನಿಂದ 7 ಜನ ಸತ್ತಾಗ. ಇದಕ್ಕೆ ನಿಜವಾದ ಕಾರಣ – ಭೂಮಿಯ ಒಡೆತನ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮೂಲಭೂತ ಸುಧಾರಣೆ ಮಾಡುವ 2 ಕಾನೂನುಗಳನ್ನು ತಂದಿದ್ದು. ಕಾಂಗ್ರೆಸ್, ಮುಸ್ಲಿಂ ಲೀಗ್ ಪಕ್ಷಗಳಲ್ಲದೆ ಪಿ.ಎಸ್.ಪಿ., ಆರ್.ಎಸ್.ಪಿ. ಯಂತಹ ಎಡ ಪಕ್ಷಗಳು ನಾಯರ್ ಸರ್ವಿಸ್ ಸೊಸೈಟಿ, ಚರ್ಚ್– ಇವುಗಳೆಲ್ಲ ಸೇರಿ ಈ ಚಳುವಳಿ ನಡೆಸಿದವು. ಅದಕ್ಕೆ ಅವು ಕೊಟ್ಟ ಹೆಸರು –'ವಿಮೋಚನ ಸಮರಂ'. ಅದು ಜಮೀನುದಾರರ, ಖಾಸಗಿ ಶಿಕ್ಷಣ ಸಂಸ್ಥೆಗಳ ಒಡೆಯರ 'ವಿಮೋಚನೆ'ಗೆ ಚಳುವಳಿಯಾಗಿತ್ತು. ಇದಕ್ಕೆ ಹಣ ಸೇರಿದಂತೆ ಸಿ.ಐ.ಎ. ಬೆಂಬಲ ನೀಡಿತ್ತು ಎಂದು ಆಗ ಅಮೆರಿಕದ ರಾಯಭಾರಿಯಾಗಿದ್ದವನ ಮತ್ತು ಇನ್ನೊಬ್ಬ ಲೇಖಕನ ಪುಸ್ತಕದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿತ್ತು. ಈ ಹಿಂಸಾತ್ಮಕ ಚಳುವಳಿಯನ್ನು ಬಳಸಿಕೊಂಡು 1959ರ ಜುಲೈ 31ರಂದು ಇ.ಎಂ.ಎಸ್. ಮಂತ್ರಿಮಂಡಲವನ್ನು ನೆಹರೂ ನೇತೃತ್ವದ ಕೇಂದ್ರ ಸರಕಾರ ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರಿತು. ಅದು ಕಾಂಗ್ರೆಸ್ಸೇತರ ಪಕ್ಷವೊಂದರ ಸರಕಾರ ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರಿದ ಮೊದಲ ಪ್ರಕರಣವಾಗಿತ್ತು.

ಜುಲೈ 1: ಬೆಂಗಳೂರಿನಲ್ಲಿ
ಅಖಿಲ ಭಾರತ ಕಿಸಾನ್ ಮಂಡಳಿ ಸಭೆ

ಜುಲೈ 1. ರಂದು ಅಖಿಲ ಭಾರತ ಕಿಸಾನ್ ಸಭಾದ ಅಖಿಲ ಭಾರತ ಕಿಸಾನ್ ಮಂಡಳಿ ಸಭೆ ಬೆಂಗಳೂರಿನಲ್ಲಿ ನಡೆಯಲಿದ್ದು ಈಗಾಗಲೇ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಶ್ರೀ ಶಾಂತರಾಜು ಅಧ್ಯಕ್ಷರಾಗಿರುತ್ತಾರೆ ಮತ್ತು ಶ್ರೀ ವೆಂಕಟಾಚಲಯ್ಯ ಪ್ರಧಾನ ಕಾರ್ಯದರ್ಶಿಗಳಾಗಿರುತ್ತಾರೆ. ಬೆಂಗಳೂರು ಜಿಲ್ಲೆಯ ವಿವಿಧ ವಿದ್ಯಾರ್ಥಿ– ಯುವಜನ–ಮಹಿಳೆ ಹಾಗೂ ಕಾರ್ಮಿಕ ಸಂಘಗಳ ಪಧಾದಿಕಾರಿಗಳು ಸ್ವಾಗತ ಸಮಿತಿಯ ಇತರ ಪದಾಧಿಕಾರಿಗಳಾಗಿರುತ್ತಾರೆ. ಈ ಸ್ವಾಗತ ಸಮಿತಿಯಲ್ಲಿ ಬೆಂಗಳೂರು ನಗರ ಮತ್ತು ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾಸಮಿತಿಗಳು ಪ್ರಮುಖವಾಗಿ ತಮ್ಮನ್ನು ತೊಡಗಿಸಿಕೊಂಡಿವೆ. ಈ ಸಭೆಯ ಯಶಸ್ಸಿಗೆ ಅಗತ್ಯವಾದ ನೆರವನ್ನು ಸಂಗ್ರಹಿಸಲು ನಿರ್ಧರಿಸಿವೆ ಜುಲೈ 01 ರಂದು ರೈತರ ರ್‍ಯಾಲಿ ನಡೆಯಲಿದೆ.

ಗ್ರಾಮಗಳಲ್ಲಿ ಪ್ರತಿಕೃತಿ ದಹನ, ಬಹಿರಂಗ ಸಭೆಗಳು

ಸರಕಾರಿ ಜಮೀನುಗಳಿಗಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮತ್ತು ಇತರೆ ರೈತರನ್ನು ಗ್ರಾಮ ಗ್ರಾಮಗಳಲ್ಲಿ ಅಣಿ ನೆರೆಸಿ, ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಂಪೆನಿ ಪರವಾದ ವ್ಯವಸಾಯ ಹಾಗೂ ಭೂ ನೀತಿಯ ವಿರುದ್ಧ ಪ್ರತಿಭಟನೆಯನ್ನು, ಅವುಗಳ ಪ್ರತಿಕೃತಿ ದಹನದ ಮೂಲಕ ಆಯೋಜಿಸಿ, ಜಾಗೃತಿ ಮೂಡಿಸ ಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘ ತನ್ನ ಗ್ರಾಮ ಘಟಕಗಳಿಗೆ ಕರೆ ನೀಡಿದೆ.

ಭೂಸ್ವಾಧೀನದಲ್ಲಿ ಮಧ್ಯ ಪ್ರವೇಶ :

ಬೆಳಗಾವಿ–ಗದಗ ಮತ್ತು ಹೊಸಪೇಟೆ–ಬಳ್ಳಾರಿ, ಬೆಂಗಳೂರು–ಚನ್ನೈ ಹಾಗೂ ಬೆಂಗಳೂರು–ಮೈಸೂರು ರಾಷ್ಟ್ರೀಯ ವೇಗಭರಿತ ಹೆದ್ದಾರಿ ನಿರ್ಮಿಸಲು ರಾಜ್ಯದಾದ್ಯಂತ ಹತ್ತಾರು ಸಾವಿರ ಎಕ–ರೆ ಜಮೀನನ್ನು ಭೂಸ್ವಾಧೀನ ಮಾಡಲು ಹೆದ್ದಾರಿ ಪ್ರಾಧಿಕಾರ ಮತ್ತು ಸರಕಾರಗಳು ಮುಂದಾಗುತ್ತಿವೆ. ತನ್ನದೇ ಕಾಯ್ದೆಯಂತೆ ಬಲವಂತದ ಭೂಸ್ವಾಧೀನಕ್ಕೆ ಕ್ರಮವಹಿಸುವುದರಿಂದ ರೈತರಿಗೂ ಮತ್ತು ಸರಕಾರಕ್ಕೂ ಸಹಜವಾಗಿಯೇ ಸಂಘರ್ಷ ಬರುವುದರಿಂದ, ರೈತ ಸಂಘದ ಜಿಲ್ಲಾ ಸಮಿತಿಗಳು ಈ ಕುರಿತು ಮಧ್ಯ ಪ್ರವೇಶಿಸಿ ರೈತರ ರಕ್ಷಣೆಗೆ ಮುಂದಾಗುವಂತೆ ರಾಜ್ಯ ಸಮಿತಿ ಕರೆ ನೀಡಿದೆ.

ಸಣ್ಣ ನೀರಾವರಿ ಇಲಾಖೆ ಭ್ರಷ್ಟಾಚಾರ ವಿರೋಧಿಸಿ ಜೂನ್ 7 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ:

ಕೊಪ್ಪಳ ಜಿಲ್ಲಾ ಸಮಿತಿಯು ಕೊಪ್ಪಳ ಹಾಗೂ ರಾಯಚೂರು ವಿಭಾಗದ ಸಣ್ಣ ನೀರಾವರಿ ಇಲಾಖೆಯಲ್ಲಿ ನಡೆದಿರುವ ಕಾಮಗಾರಿ ಮಾಡದೇ ಸುಮಾರು 34 ಕೋಟಿ ರೂಗಳ ಬಿಲ್ ಎತ್ತಿದ ಭ್ರಷ್ಟಾಚಾರದ ಪ್ರಕರಣದ ವಿರುದ್ಧ ಜೂನ್–07 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಲು ಉದ್ದೇಶಿಸಿರುವುದನ್ನು ರಾಜ್ಯ ಸಮಿತಿ ಬೆಂಬಲಿಸಿದೆ.

‘ಚೆನ್ನೈ ಎಕ್ಸ್‌ಪ್ರೆಸ್–ವೇ’ಗೆ ಜಮೀನು ವಶಕ್ಕೆ ಪ್ರತಿರೋಧ’



ರೈತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ, ಅನಾಗರಿಕವಾಗಿ “ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ” ರಸ್ತೆಗೆ ಭೂಮಿಯನ್ನು ವಶಪಡಿಸಿಕೊಳ್ಳಲು ಮುಂದಾಗುತ್ತಿರುವುದು ರೈತರಲ್ಲಿ ಆತಂಕ, ಗೊಂದಲವನ್ನು ಉಂಟು ಮಾಡಿದೆ. ಈ ಗೊಂದಲವನ್ನು ಪರಿಹರಿಸುವಂತೆ ಒತ್ತಾಯಿಸಿ ‘ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಸಂತ್ರಸ್ತ ರೈತರ ಹೋರಾಟ ಸಮಿತಿ’ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗ ಜೂನ್ 7 ರಂದು ಪ್ರತಿಭಟನೆ ನಡೆಸಿತು.

ತಲೆತಲಾಂತರಗಳಿಂದ ತಮ್ಮ ಜೀವ, ಜೀವನವಾಗಿರುವ ತಮ್ಮ ಕೃಷಿ ಭೂಮಿಯನ್ನು ‘ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ’ಗಾಗಿ ಸ್ವಾಧೀನಪಡಿಸಿಕೊಂಡಿದ್ದು, ತಾನು ‘ನೀಡುವ ನಾಲ್ಕು ಕಾಸಿಗೆ, ತಮ್ಮ ಒಡೆತನದ ದಾಖಲೆಗಳನ್ನು ಸಲ್ಲಿಸಬೇಕೆಂಬ ಕೇಂದ್ರ ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಅನುಸರಿಸುತ್ತಿದೆ. ಈಗಲಾದರೂ ಈ ‘ಎಕ್ಸ್‌ಪ್ರೆಸ್ ವೇ’ನ ಉದ್ದೇಶ ಏನು?, ಇನ್ನೊಂದು ಎಕ್ಸ್‌ಪ್ರೆಸ್ ವೇ ಅಗತ್ಯವಿದೆಯೇ? ಎಕ್ಸ್‌ಪ್ರೆಸ್ ವೇ ಅಲ್ಲದೇ ಇಲ್ಲಿ ಬರುವ ಬೇರೆ ಬೇರೆ ಯೋಜನೆಗಳು ಏನು? ಇದಕ್ಕೆ ಬೇಕಿರುವ ಭೂಮಿ ಎಷ್ಟು? ಒಂದು ವೇಳೆ ಭೂಮಿಯನ್ನು ನೀಡಲು ರೈತರು ಒಪ್ಪಿದರೆ ಭೂಮಿಗೆ ಸಿಗುವ ಪರಿಹಾರವೇನು? ಇಡೀ ಭೂಮಿ, ಮನೆಗಳನ್ನು ಕಳೆದುಕೊಳ್ಳುವವರಿಗೆ ಪುನರ್ ವಸತಿ ಹೇಗೆ? ರೈತರ ಭೂ ಬಳಕೆಯ ಮಾರ್ಪಾಡಿನಿಂದ ಬರುವಂತಹ ಹೆಚ್ಚಿನ ಆದಾಯದಲ್ಲಿ ರೈತರ ಪಾಲು ಏನು? ಇತ್ಯಾದಿ ಪ್ರಶ್ನೆಗಳ ಬಗ್ಗೆ ರೈತರ ಜೊತೆ ಸಭೆಯನ್ನು ನಡೆಸಿ, ಸೂಕ್ತ ತೀರ್ಮಾನ ಮಾಡಲು ಅಧಿಕೃತ ವಿವರಣೆಗಳನ್ನು ನೀಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರೈತರು ಎತ್ತಿರುವ ಈ ಪ್ರಶ್ನೆಗಳ ಬಗ್ಗೆ ಜಿಲ್ಲಾಡಳಿತ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಉನ್ನತ ಅಧಿಕಾರಿಗಳನ್ನು ಕರೆಸಿ, ಸ್ಪಷ್ಟನೆ ಕೊಡಿಸುವ ತನಕ ಯಾವುದೇ ಕಾರಣಕ್ಕೂ “ಎಕ್ಸ್‌ಪ್ರೆಸ್ ವೇ” ಕಾಮಗಾರಿಯನ್ನು ನಡೆಸಲು ಬಿಡುವುದಿಲ್ಲವೆಂದು ಹೋರಾಟ ಸಮಿತಿ ಮತ್ತು ರೈತ ಸಂಘವು ಎಚ್ಚರಿಕೆಯನ್ನು ನೀಡಿತು.

ಬೀದಿ ಬದಿಯಲ್ಲಿ ಅಕ್ರಮವಾಗಿ ಇಟ್ಟುಕೊಂಡಿರುವ ಸಣ್ಣ ಪೆಟ್ಟಿಗೆ ಅಂಗಡಿಯನ್ನು ಖಾಲಿ ಮಾಡಿಸಬೇಕಾದರೆ ಕಾನೂನನ್ನು ಪಾಲಿಸಬೇಕಾಗಿರುವ ಈ ದೇಶದಲ್ಲಿ ನೂರಾರು ವರ್ಷಗಳಿಂದ ಅಲ್ಲೇ ಹುಟ್ಟಿ ಭೂಮಿ ಒಡೆತನವನ್ನು ಹೊಂದಿ ದೇಶಕ್ಕೆ ಬೇಕಾಗಿರುವ ‘ಅನ್ನ’, ‘ಹಾಲು’, ‘ರೇಷ್ಮೆ’, ‘ತರಕಾರಿ’ ಇತ್ಯಾದಿಗಳನ್ನು ಬೆಳೆಯುತ್ತಾ ಮನೆ ಮಂದಿಯ ಭಾಗವಾಗಿರುವ ಒಬ್ಬ ರೈತನ ಭೂಮಿಯನ್ನು ‘ಅಭಿವೃದ್ಧಿ’ ಹೆಸರಿನಲ್ಲಿ ಕಿತ್ತುಕೊಳ್ಳುವಾಗ ಕನಿಷ್ಠ ಆ ರೈತನ ಜೊತೆ ಮಾತನಾಡಬೇಕೆನ್ನುವ ಸೌಜನ್ಯವೂ ಇಲ್ಲದಾಗಿದೆ. ಕಛೇರಿಗಳಿಂದ ದಾಖಲೆಗಳನ್ನು ಪಡೆದುಕೊಂಡು ಈ ಉದ್ದೇಶಕ್ಕಾಗಿ ನಿಮ್ಮ ನಿಮ್ಮ ಭೂಮಿಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ದಾಖಲೆಗಳನ್ನು ನೀಡಿ ಭೂಮಿ ಮಾಲೀಕರು ಪರಿಹಾರವನ್ನು ಪಡೆದುಕೊಳ್ಳಬಹುದು ಎನ್ನುವಂತಹ ರೈತರನ್ನು ಬೀದಿ ಪಾಲು ಮಾಡಲು ಹೊರಟಿರುವ ಸರ್ಕಾರಗಳ ಧೋರಣೆಗಳನ್ನು ಖಂಡಿಸಿದರು.

ಸರ್ಕಾರಗಳ ಈ ಧೋರಣೆಗಳು ಕೇವಲ ಸರ್ವಾಧಿಕಾರಿ ಮಾತ್ರವಲ್ಲ, ಅತ್ಯಂತ ಅನಾಗರೀಕವಾದದ್ದು. ಹಲವು ದಶಕಗಳಿಂದ ಹೋರಾಟಗಳು ನಡೆದ ಪ್ರತಿಫಲವಾಗಿ ರೈತರ ಹಿತ–ಕ್ಕೆ ಸ್ವಲ್ಪ ಹತ್ತಿರವಾಗಿರುವ ‘ಭೂಸ್ವಾಧೀನ ಕಾಯ್ದೆ–2013’ ಜಾರಿಯಲ್ಲಿದ್ದರೂ ಸಹ ಇದರ ಅಡಿಯಲ್ಲಿ ಭೂಸ್ವಾಧೀನಕ್ಕೆ ಹೋಗದೇ ಹಳೆಯ ರೈತ ವಿರೋಧಿ ಕಾಯ್ದೆಗಳ ಅಡಿಯಲ್ಲಿ ಭೂಸ್ವಾಧೀನಕ್ಕೆ ಹೊರಟಿರುವ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿದರು. ರೈತರು ಎತ್ತಿರುವ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡಬಹುದಾದ “ಭೂಸ್ವಾಧೀನ ಕಾಯ್ದೆ–2013’ರ ಅಡಿಯಲ್ಲಿ ಈ ಸ್ವಾಧೀನ ಪ್ರಕ್ರಿಯೆ ನಡೆಯಬೇಕೆಂದು ಒತ್ತಾಯಿಸಿದರು.

ಬೆಂಗಳೂರು–ಚೆನ್ನೈ ಮಧ್ಯೆ ಈಗಾಗಲೇ ಎರಡು ಸುಸಜ್ಜಿತ ರಾಷ್ಟ್ರೀಯ ಹೆದ್ದಾರಿಗಳು ಇರುವಾಗ ಇಡೀ ದೇಶದಲ್ಲಿ ಅತ್ಯಂತ ಸುಸಜ್ಜಿತ ಎನ್ನಲಾದ ರಸ್ತೆಯನ್ನು ಈ ಎರಡು ಮಹಾನ್ ನಗರಗಳ ಮಧ್ಯೆ ನಿರ್ಮಿಸಲು ಹೊರಟಿದ್ದಾರೆ. ಹೊಸಕೋಟೆ ತಾಲ್ಲೂಕಿನ ದಂಡುಪಾಳ್ಯದಿಂದ ಪ್ರಾರಂಭವಾಗುವ ಒಟ್ಟು 4 ಪಥಗಳ ಎಕ್ಸ್‌ಪ್ರೆಸ್ ವೇ ರಸ್ತೆಯು ತಮಿಳುನಾಡಿನ ಶ್ರೀಪೆರಂಬೂರಿನವರೆಗೆ ಒಟ್ಟು 375 ಕಿ.ಮೀ. ನಿರ್ಮಾಣವಾಗಲಿದೆ. ದೇಶದಲ್ಲಿ ಅತ್ಯಂತ ಸುಸಜ್ಜಿತ ರಸ್ತೆ ಎನ್ನಲಾದ ಈ ರಸ್ತೆಯನ್ನು ಜಪಾನ್ ನೆರವಿನಿಂದ ನಿರ್ಮಿಸಲಾಗುತ್ತಿದ್ದು, ಇದರ ನಿರ್ಮಾಣವನ್ನು ಸಹ ಜಪಾನ್ ದೇಶದ ಕಂಪನಿಗೆ ಗುತ್ತಿಗೆ ನೀಡಲಾಗಿದೆ. ಈ ರಸ್ತೆಗೆ ಹೊಸಕೋಟೆ ತಾಲ್ಲೂಕಿನ 275 ಎಕರೆ ಜಮೀನು ಬಿಟ್ಟರೆ ಉಳಿದೆಲ್ಲಾ ಭೂಮಿ ಕೋಲಾರ ಜಿಲ್ಲೆಯ ಮಾಲೂರು ಮತ್ತು ಬಂಗಾರಪೇಟೆ ತಾಲ್ಲೂಕಿನ ರೈತರದ್ದೇ ಆಗಿದೆ.

ಎಕ್ಸ್‌ಪ್ರೆಸ್ ವೇ ನಿರ್ಮಾಣವಾಗುವ ವಿಷಯ ಕಳೆದ ನಾಲ್ಕು ವರ್ಷಗಳಿಂದ ಸುದ್ದಿಯಲ್ಲಿತ್ತು. ಆದರೆ ಏಕಾಏಕಿ ಮೇ 4 ರಂದು ರೈತರಿಂದ ಭೂಮಿಯನ್ನು ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಿ ವಿಶೇಷ ಭೂಸ್ವಾಧೀನ ಅಧಿಕಾರಿಗಳು ಪತ್ರಿಕೆಯಲ್ಲಿ ಪ್ರಕಟಣೆ ನೀಡಿದ್ದಾರೆ. ಅಲ್ಲದೇ ಭೂಮಿಯನ್ನು ಗುರುತಿಸಿ, ಅದಕ್ಕೆ ಗಡಿ ಗುರುತು ಮಾಡುತ್ತಿದ್ದಾರೆ. ಜೊತೆಗೆ ಕೋಲಾರದಲ್ಲಿ ಕಛೇರಿಯನ್ನು ಆರಂಭಿಸಿರುವುದರಿಂದ ರೈತರು ಗೊಂದಲ ಮತ್ತು ಆತಂಕಕ್ಕೀಡಾಗಿದ್ದಾರೆ.

ಭೂಸ್ವಾಧೀನದ ಬಗ್ಗೆ ರೈತರಿಗೆ ಇರುವ ಅನೇಕ ಗೊಂದಲಗಳ ಬಗ್ಗೆ ಆಯಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿವಾರು ಸಂತ್ರಸ್ತ ರೈತರ ಸಭೆ ನಡೆಸಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಉನ್ನತ ಅಧಿಕಾರಿಗಳನ್ನು ಕರೆಸಿ ಸಂಪೂರ್ಣ ವಿವರಣೆ ಕೊಡಲು ವ್ಯವಸ್ಥೆ ಮಾಡಬೇಕು. ಭೂಸ್ವಾಧೀನಕ್ಕೆ ಒಳಪಟ್ಟಿರುವ ಭೂಮಿಯ ದಾಖಲಾತಿಗಳನ್ನು ಹೆಚ್ಚಿನ ಹಣ ಖರ್ಚು ಮಾಡಿ, ಮಧ್ಯವರ್ತಿಗಳ ಮೂಲಕ ಸರಿಪಡಿಸಲು ಹೊರಟಿರುವ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಕಂದಾಯ ಇಲಾಖೆಯ ವಿಶೇಷ ತಂಡ ರಚನೆ ಮಾಡಿ ಆಯಾ ಗ್ರಾಮಗಳಲ್ಲಿಯೇ ದಾಖಲೆಗಳನ್ನು ಸರಿಪಡಿಸಬೇಕು, ಇಡೀ ಭೂಸ್ವಾಧೀನ ಪ್ರಕ್ರಿಯೆಯನ್ನು ರೈತರ ಒಪ್ಪಿಗೆ ಪಡೆಯುವ ಅಂಶ ಮತ್ತು ರೈತರ ಹಿತ ಕಾಪಾಡುವ ‘ಭೂಸ್ವಾಧೀನ ಕಾಯ್ದೆ–2013’ ಅಡಿ ನಡೆಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿದರು.

ಭೂಮಿ ಕಳೆದುಕೊಳ್ಳುವ ಸಂತ್ರಸ್ತ ರೈತರ ಸಮಾವೇಶವನ್ನು ಕೆಜಿಎಫ್, ಬಂಗಾರಪೇಟೆ ಮತ್ತು ಮಾಲೂರು ವಿಧಾನಸಭಾ ಕ್ಷೇತ್ರವಾರು ನಡೆಸಿ ಹೋರಾಟ ಸಮಿತಿಗಳನ್ನು ರಚಿಸಲಾಗಿದೆ. ಸಮಸ್ಯೆ ಬಗೆಹರಿಯುವ ತನಕ ಹೋರಾಟವನ್ನು ಮುಂದುವರೆಸಲು ನಿರ್ಧರಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಟಿ.ಎಂ.ವೆಂಕಟೇಶ್, ಬಂಗಾರಪೇಟೆ ತಾಲ್ಲೂಕು ಅಧ್ಯಕ್ಷರಾದ ಪಿ.ಶ್ರೀನಿವಾಸ್, ಹೋರಾಟ ಸಮಿತಿ ಮುಖಂಡರಾದ ಜಯಸಿಂಹ, ಕೃಷ್ಣಪ್ಪ, ಚಂದ್ರಶೇಖರ್, ಮುನಿವೆಂಕಟೇಗೌಡ, ಗೋಪಾಲಕೃಷ್ಣ, ಚಿನ್ನಿ ವೆಂಕಟೇಶ್, ಕಲಾವಿದ ಸ್ವಾಮಿ, ಎಂ.ರಾಜಪ್ಪ, ಈಶ್ವರಾಚಾರಿ, ನವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ರಾಜಗೋಪಾಲಗೌಡ ಮತ್ತಿತರರು ವಹಿಸಿದ್ದರು.

– ಎಂ.ವಿಜಯಕೃಷ್ಣ ●

ಖಾಲಿ ಇರುವ 1 ಲಕ್ಷ ಶಿಕ್ಷಕ ಹುದ್ದೆ ಭರ್ತಿಗಾಗಿ, ಖಾಸಗಿ ಶಾಲಾ ಶಿಕ್ಷಕರ ವೇತನ ಹೆಚ್ಚಳಕ್ಕಾಗಿ ರಾಜ್ಯ ಸಮಾವೇಶ

ರಾಜ್ಯದಲ್ಲಿ ಡಿ.ಇಡಿ, ಬಿ.ಪಿ.ಇಡಿ, ಬಿ.ಇಡಿ, ಎಂ.ಇಡಿ, ಇ.ಎಂ.ಪಿ.ಇಡಿ ಮುಂತಾದ ಶಿಕ್ಷಣ ಪದವೀಧರರಾದ ಯುವಜನತೆ ವೃತ್ತಿಪರ ಶಿಕ್ಷಣ ಪದವಿಯನ್ನು ಪಡೆದು ನಿರುದ್ಯೋಗ ಅಥವಾ ಅಭದ್ರತೆಯ ಉದ್ಯೋಗವನ್ನು ಅನುಭವಿಸುವಂತಾಗಿದೆ. ರಾಜ್ಯ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 1 ಲಕ್ಷ ಶಿಕ್ಷಕರ ಹುದ್ದೆ ಖಾಲಿ ಇದ್ದು ಭರ್ತಿ ಮಾಡಿಕೊಳ್ಳುತ್ತಿಲ್ಲ. ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸುಮಾರು 10 ಸಾವಿರಕ್ಕೂ ಆಧಿಕ ಶಿಕ್ಷಕ ಹುದ್ದೆಗಳು ಖಾಲಿ ಇವೆ. ಬೋಧಕೇತರ ಹುದ್ದೆಗಳು 20 ಸಾವಿರಕ್ಕೂ ಹೆಚ್ಚು ಖಾಲಿ ಇವೆ. ಗುಲಾಮರಂತೆ ಶಿಕ್ಷಕ–ಉಪನ್ಯಾಸಕರನ್ನು ನಡೆಸಿಕೊಳ್ಳಲಾಗುತ್ತಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶಿಕ್ಷಣ ಖಾಸಗೀಕರಣದ ನೀತಿಯಿಂದಾಗಿ ಖಾಸಗಿ ಶಿಕ್ಷಣ ಸಂಸ್ಥೆಗಳು ಶೈಕ್ಷಣಿಕ ನೀತಿ ನಿರೂಪಕಗಳನ್ನು ಗಾಳಿಗೆ ತೂರಿವೆ. ಕೇವಲ ಲಾಭಕೋರತನಕ್ಕಾಗಿ ಮಾತ್ರ ಶಿಕ್ಷಣ ಸಂಸ್ಥೆಗಳನ್ನು ನಡೆಸುವಂತಹ ಪರಿಸ್ಥಿತಿ ಎದುರಾಗಿದೆ.

ಖಾಸಗಿ ಶಿಕ್ಷಣ ಸಂಸ್ಥೆಗಳು ಶಿಕ್ಷಕರಿಗೆ ಅತ್ಯಲ್ಪ ವೇತನ ನೀಡುವಂತೆ ರಾಜ್ಯ ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 30 ಸಾವಿರ ಅತಿಥಿ ಶಿಕ್ಷಕರನ್ನು ನೇಮಿಸಿಕೊಂಡು, ಮಾಸಿಕ ರೂ.5,500 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಾಗೂ ಪ್ರೌಢಶಾಲಾ ಶಿಕ್ಷಕರಿಗೆ ರೂ. 6,500 ಮಾತ್ರ ನೀಡಲಾಗುತ್ತಿದೆ. ಉಚ್ಚ ನ್ಯಾಯಾಲಯದ ನಿರ್ದೇಶನವನ್ನೂ ರಾಜ್ಯ ಸರ್ಕಾರ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳು ಉಲ್ಲಂಘಿಸಿವೆ.

ಈ ಹಿನ್ನಲೆಯಲ್ಲಿ ಎಲ್ಲಾ ವೃತ್ತಿಪರ ಶಿಕ್ಷಣ ಪದವೀಧರರು ಒಂದುಗೂಡಿ ಐಕ್ಯತೆಯಿಂದ ಸಂಘಟನೆಯನ್ನು ಹುಟ್ಟುಹಾಕಿದ್ದು ಶಿಕ್ಷಕರ ಉದ್ಯೋಗ ಭದ್ರತೆ ಮತ್ತು ವೇತನ ಹೆಚ್ಚಳಕ್ಕಾಗಿ ಚಳುವಳಿಯನ್ನು ರೂಪಿಸಲು ಕರ್ನಾಟಕ ರಾಜ್ಯ ವೃತ್ತಿಪರ ಶಿಕ್ಷಣ ಪದವೀಧರ ಸಂಘ ನಿರ್ಧರಿಸಲಿದೆ.

ಈ ಹಿನ್ನಲೆಯಲ್ಲಿ ಪ್ರಥಮ ಸಂಸ್ಥಾಪನೆ ರಾಜ್ಯ ಸಮಾವೇಶವನ್ನು ಜೂನ್.12, 2016 ಭಾನುವಾರ ಶಿವಮೊಗ್ಗದಲ್ಲಿನ ಕುವೆಂಪು ರಂಗಮಂದಿರದಲ್ಲಿ ಆಯೋಜಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಕಿಮ್ಮನೆ ರತ್ನಾಕರ್‌ರವರು ಉದ್ಘಾಟನೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಅಖಿಲ ಕರ್ನಾಟ ಸರ್ಕಾರಿ ನೌಕರರ ಒಕ್ಕೂಟದ ರಾಜ್ಯಾದ್ಯಕ್ಷರಾದ ಮಹದೇವಯ್ಯ ಮಠಪತಿಯವರು ಮತ್ತು ಕರ್ನಾಟಕ ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳ ಶಿಕ್ಷಕರ ಸಂಘದ ಶ್ರೀ ಬಸವರಾಜ್ ಗುರಿಕಾರ್, ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಬಿ.ರಾಜಶೇಖರಮೂರ್ತಿ ಸೇರಿದಂತೆ ಪ್ರಮುಖ ಶಿಕ್ಷಣ ತಜ್ಞರು, ಪ್ರಗತಿಪರ ಸಂಘಟನೆಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದು ಸಂಘಟನೆ ಅಧ್ಯಕ್ಷರಾದ ಯಲ್ಲಪ್ಪ ಎಂ., ಪ್ರಧಾನ ಕಾರ್ಯದರ್ಶಿ ಶ್ಯಾಂಸುಂದರ್, ಉಪಾಧ್ಯಕ್ಷರಾದ ಬಿ.ಬಸವರಾಜು, ಖಜಾಂಚಿ ಎಂ.ರಂಗಸ್ವಾಮಿ ತಿಳಿಸಿದ್ದಾರೆ.

ಹಕ್ಕೊತ್ತಾಯಗಳು

1. ಖಾಲಿ ಇರುವ 1 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು.
2. ಖಾಸಗಿ ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಖಾಸಗಿ ಶಿಕ್ಷಣ ಸಂಸ್ಥೆಗಳು ಸುಪ್ರೀಂ ಕೋರ್ಟಿನ ಆದೇಶದಂತೆ ಮಾಸಿಕ ವೇತನ ರೂ.13,650 ನೀಡಬೇಕು. ಜೊತೆ–ಗೆ ಪಿ.ಎಫ್ ಮತ್ತು ಇ.ಎಸ್.ಐ ವ್ಯವಸ್ಥೆಯನ್ನು ಕಡ್ಡಾಯವಾಗಿ ನೀಡಬೇಕು.
3. ಸರ್ಕಾರದ “ಜ್ಯೋತಿ ಸಂಜೀವಿನಿ ಯೋಜನೆ” ಯನ್ನು ವಿಸ್ತರಿಸಬೇಕು.
4. ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲಾ ಖಾಸಗಿ ಶಿಕ್ಷಣ ಸಂಸ್ಥೆಗಳು, ಡಿ.ಇಡಿ, ಬಿ.ಪಿ.ಇಡಿ, ಬಿ.ಇಡಿ, ಎಂ.ಪಿ.ಇಡಿ ಮತ್ತು ಎಂ.ಇಡಿ, ಪದವೀಧರ ಶಿಕ್ಷಕರನ್ನೇ ನೇಮಿಸಿಕೊಳ್ಳಬೇಕು.
5. ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಸಿ.ಇ.ಟಿ ಮೂಲಕವೇ ಭರ್ತಿ ಮಾಡಿಕೊಳಬೇಕು.

– ರಾಜಶೇಖರಮೂರ್ತಿ

●

PEÁV½ZÀAÁY

ಮೀಸಲಾತಿ ಸೌಲಭ್ಯವನ್ನೇ ತೆಗೆಯಬೇಕೆಂದು
ಕೆಲವರು ಅಭಿಪ್ರಾಯ ಪಡುತ್ತಿದ್ದಾರೆ.
ಮೀಸಲಾತಿ ಬೇಡ ಎನ್ನಲು ಇವರ್‍ಯಾರು?
ಮೀಸಲಾತಿ ಯಾರೋ ಕೊಟ್ಟ ದಾನವಲ್ಲ.
ಅದೊಂದು ಸಂವಿಧಾನಬದ್ಧ ಹಕ್ಕು.

– ನ್ಯಾ. ಗೋಪಾಲ ಗೌಡ
ಸುಪ್ರೀಂ ಕೋರ್ಟ್ ನ್ಯಾಯಾಧೀಶ

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಜಾಗತೀಕರಣದ ಬಗ್ಗೆ ಸುಳ್ಳು ಭ್ರಮೆಗಳನ್ನು ಇಟ್ಟುಕೊಳ್ಳುವ ಕಾಲವಿದಲ್ಲ. ಏಕೆಂದರೆ ಅದರ ಪರಿಣಾಮವನ್ನು ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಅನೇಕ ಯೂರೋಪಿಯನ್ ದೇಶಗಳಲ್ಲಿ ಕಂಡಿದ್ದೇವೆ. ಎಲ್ಲಾ ವಿದ್ವಾಂಸರು ಗುರುತಿಸಿದಂತೆ ಜಾಗತೀಕರಣದ ಪರಿಣಾಮವೆಂದರೆ ಮೊದಲ ಹಂತದಲ್ಲಿ G.D.P. ಯಲ್ಲಿ ಗಮನೀಯವಾದ ಹೆಚ್ಚಳ ಉಂಟಾಗುತ್ತದೆ. ಕೆಲವು ವರ್ಗಗಳ ಆದಾಯ ಕಲ್ಪನೆಯನ್ನು ಮೀರಿ ಬೆಳೆಯುತ್ತದೆ. ಐಷಾರಾಮೀ ಬದುಕಿನ ಥಳುಕು ಬಳಕುಗಳು ಕಣ್ಣು ಕೋರೈಸುತ್ತದೆ. ಈ ಭರಾಟೆಯಲ್ಲಿ ರೈತರು, ಕಾರ್ಮಿಕರು, ಬಡಜನರು ಅದೃಶ್ಯರಾದಂತೆ ಅನ್ನಿಸುತ್ತದೆ. ಆದರೆ ಜಾಗತೀಕರಣದ ಬಣ್ಣದ ಗುಳ್ಳೆ ಒಡೆದ ಕೂಡಲೇ ಕಾಣುವ ವಾಸ್ತವಗಳೆಂದರೆ ಅಪಾರವಾದ ಬಡತನ, ಹಸಿವು ಹಾಗೂ ಅಸಹಾಯಕತೆಗಳು. ಆದರೆ ಒಮ್ಮೆ ಅನುಷ್ಠಾನಕ್ಕೆ ಬಂದರೆ ಜಾಗತೀಕರಣದ ಹಿಂದಿನ ಬಂಡವಾಳ ಶಕ್ತಿಗಳು ತಮ್ಮ ಪ್ರಾಬಲ್ಯ ಬಿಟ್ಟುಕೊಡುವುದಿಲ್ಲ. ಆಗ ಬರ್ಬರವಾದ ಹಿಂಸೆಯ ಪರ್ವವು ಶುರುವಾಗುತ್ತದೆ.



ಜಾಗತೀಕರಣದ ಮಾಯಾಬಜಾರಿನಲ್ಲಿ ಗುಲಾಮಗಿರಿ

ನೆನ್ನೆ ದಿನ ಪತ್ರಿಕೆಗಳಲ್ಲಿ ಆಸ್ಟ್ರೇಲಿಯಾದ ವಾಕ್ ಫ್ರೀ ಸಂಸ್ಥೆಯು ಬಿಡುಗಡೆ ಮಾಡಿದ ವರದಿಯೊಂದು ಪ್ರಕಟವಾಗಿದೆ. ಈ ಸಂಸ್ಥೆಯು ಹಲವಾರು ವರ್ಷಗಳಿಂದ 'ಆಧುನಿಕ ಗುಲಾಮಗಿರಿ'ಯ ಬಗ್ಗೆ ವಿವಿಧ ದೇಶಗಳಿಂದ ಮಾಹಿತಿ ಸಂಗ್ರಹಿಸಿ ಅಂಕಿ ಸಂಖ್ಯೆಗಳನ್ನು ಬಿಡುಗಡೆ ಮಾಡುತ್ತ ಬಂದಿದೆ. ಆಧುನಿಕ ಜಗತ್ತಿಗೂ ಗುಲಾಮಗಿರಿಗೂ ಏನು ಸಂಬಂಧ ಎಂದು ಬಹುಪಾಲು ಜನ ಪ್ರತಿಕ್ರಿಯಿಸಬಹುದು. ಆದರೆ ಈ ಸಂಸ್ಥೆಯ ಪ್ರಕಾರ ಗುಲಾಮಗಿರಿಯ ಅನಂತ ಮುಖಗಳು ವಿಶ್ವದ ಎಲ್ಲಾ ದೇಶಗಳಲ್ಲಿವೆ. ಮಾನವ ಸಾಗಾಣಿಕೆ, ಸಾಲಗಳ ಹೊರೆ, ಲೈಂಗಿಕ ಕಾರ್ಯ ಇವೆಲ್ಲವೂ ಗುಲಾಮಗಿರಿಯ ಅಂಶಗಳೇ ಆಗಿವೆ. ಕನಿಷ್ಠ ಮಟ್ಟದ ಸ್ವಾತಂತ್ರ್ಯ ಹಾಗೂ ಘನತೆಯೂ ಇಲ್ಲದೇ, ಕೇವಲ ಬದುಕಿರುವುದಕ್ಕಾಗಿಯೇ ವಿಶ್ವದ ಜನಸಂಖ್ಯೆಯ ಬಹುಪಾಲು ಜನರು ಗುಲಾಮಗಿರಿಯನ್ನು ಮಾಡುತ್ತಿದ್ದಾರೆ. ಈ ಸಾಲಿನ ವರದಿಯ ಪ್ರಕಾರ ಗುಲಾಮಗಿರಿಯಲ್ಲಿ ಸಿಲುಕಿರುವ ಅತಿ ಹೆಚ್ಚು ಸಂಖ್ಯೆಯ ಜನರಿರುವುದು ಭಾರತದಲ್ಲಿ! ಅವರ ಒಟ್ಟು ಸಂಖ್ಯೆ ಅಂದಾಜು 1.8 ಕೋಟಿ.

ಈ ವರದಿಗೆ ಕೇಂದ್ರ ಸರಕಾರದ ಪ್ರತಿಕ್ರಿಯೆಯನ್ನು ಸುಲಭವಾಗಿ ಊಹಿಸಬಹುದು. "ಈ ಅಂಕಿಸಂಖ್ಯೆಗಳು ಕಾಲ್ಪನಿಕವಾಗಿವೆ. ಭಾರತವು ಈಗ ಒಳ್ಳೆಯ ದಿನಗಳನ್ನು ಕಾಣುತ್ತಿದೆ. ಒಂದಿಷ್ಟು ಸಂಖ್ಯೆಯ ಜನರು ಗುಲಾಮಗಿರಿಯಲ್ಲಿದ್ದರೆ ಅದಕ್ಕೆ ಕಾಂಗ್ರೆಸ್ ಕಾರಣ. ಭಾರತದ ಆರ್ಥಿಕ ಪ್ರಗತಿಯನ್ನು ಸಹಿಸಲಾರದ ಪಶ್ಚಿಮದ ಸಂಸ್ಥೆಗಳು ಇಂಥ ಕೃತಕ ವರದಿಗಳನ್ನು ತಯಾರಿಸುತ್ತವೆ"; ಇತ್ಯಾದಿ. ಆದರೆ ಇದು ಒಂದು ಸಂಸ್ಥೆಯ ವರದಿಯ ಪ್ರಶ್ನೆಯಲ್ಲ. ಜಾಗತಿಕ ಹಸಿವಿನ ಸೂಚ್ಯಂಕ, ಆರೋಗ್ಯ ಸೂಚ್ಯಂಕ ಇವೆಲ್ಲವು ಇಂಥದೇ ಪರಿಸ್ಥಿತಿಯನ್ನು ಸೂಚಿಸುತ್ತದೆ.

ಅಂದ ಹಾಗೆ ಈ ವರದಿ ಪ್ರಕಟವಾದ ಪತ್ರಿಕೆಗಳಲ್ಲಿ ಇನ್ನೊಂದು ವರದಿಯೂ ಇದೆ. ಅದರ ಪ್ರಕಾರ ಭಾರತದ G.D.P. (ರಾಷ್ಟ್ರೀಯ ಉತ್ಪನ್ನ) ಶೇ. 7.9ನ್ನು ತಲುಪಿದ್ದು ಭಾರತವು ವಿಶ್ವದ ಅತ್ಯಂತ ತ್ವರಿತ ಆರ್ಥಿಕತೆಯನ್ನು ಹೊಂದಿದೆ. (ಇದನ್ನು ಹಲವು ಅರ್ಥಶಾಸ್ತ್ರಜ್ಞರು ಪ್ರಶ್ನಿಸಿದ್ದಾರೆ. ಸರಕಾರದ ಅಂಕೆಸಂಖ್ಯೆಯೇ ಸರಿ ಎಂದಿಟ್ಟುಕೊಳ್ಳೋಣ) ಈ ಎರಡೂ ವಿರುದ್ಧ ವರದಿಗಳಲ್ಲಿ ಯಾವುದು ನಿಜ? ಇವೆರಡೂ ನಿಜ. ಏಕೆಂದರೆ ಇದು ಜಾಗತೀಕರಣವು ಸೃಷ್ಟಿಸುವ ಮಾಯಾ ಬಜಾರ್. ವಿಶ್ವದ ಯಾವ ರಾಷ್ಟ್ರಗಳು ಜಾಗತೀಕರಣವನ್ನು ಮುಕ್ತ ಮಾರುಕಟ್ಟೆಯ ಉದಾರ ಆರ್ಥಿಕತೆಯನ್ನು ಅಳವಡಿಸಿಕೊಂಡಿವೆಯೋ ಅಲ್ಲಿ ಇದೇ ವಿರೋಧಾಭಾಸವು ಕಾಣುತ್ತದೆ. ಅಂ-ದರೆ ಜಾಗತೀಕರಣದಿಂದಾಗಿ ಬಂಡವಾಳಶಾಹಿ ವರ್ಗ ಹಾಗೂ ಅದಕ್ಕೆ ಬೆಂಬಲವಾಗಿ ದುಡಿಯುವ ಶಿಕ್ಷಿತ ಮುಂಚೂಣಿ ವರ್ಗಗಳಿಗೆ ಹಿಂದೆ ಎಂದೂ ಇಲ್ಲದ ಸಂಪತ್ತು, ಐಷಾರಾಮಿಗಳು ಲಭ್ಯವಾಗುತ್ತಿವೆ. ಇಂಗ್ಲಿಷ್ ಶಿಕ್ಷಣ, ತಂತ್ರಜ್ಞಾನದಲ್ಲಿ ಪದವಿಗಳನ್ನು ಪಡೆದ ಮಧ್ಯಮ ವರ್ಗವು ಇಂದು ವಿಶ್ವದ ಬಲಾಢ್ಯ ವರ್ಗವಾಗಿದೆ. ಭಾರತದ ಬಂಡವಾಳಶಾಹಿಗೆ ಜಾಗತೀಕರಣದ ಹೆಸರಿನಲ್ಲಿ ಇಲ್ಲಿಯ ಕಾನೂನುಗಳನ್ನು ತಿದ್ದಿ, ಇಲ್ಲಿಯ ನೆಲ, ಜನ ಹಾಗೂ ರೈತ ಕಾರ್ಮಿಕರನ್ನು ಮಾರುತ್ತಿರುವ ರಾಜಕೀಯ ವರ್ಗವು ಸಂಪಾದಿಸುತ್ತಿರುವ ಅಕ್ರಮ ಸಂಪತ್ತನ್ನು ಊಹಿಸಲೂ ಸಾಧ್ಯವಿಲ್ಲ. ಆದರೆ ಈ ಫಲಾನುಭವಿ ವರ್ಗಗಳನ್ನು ಹೊರತುಪಡಿಸಿದರೆ ಬಹುಸಂಖ್ಯಾತ ಭಾರತೀಯರಿಗೆ ಜೀವನವು ಕರಾಳವಾದ ಗುಲಾಮಗಿರಿಯಾಗಿದೆ.

ಒಂದು ಕಡೆ ಜಾಗತೀಕರಣದ ಮೂಲ ಕರಾರಿಗೆ ತಕ್ಕಂತೆ ನಮ್ಮ ಪ್ರಭುತ್ವವು (state) ತನ್ನ ಸಾಮಾಜಿಕ ಹಾಗೂ ಸಮಾಜಕಲ್ಯಾಣದ ಜವಾಬ್ದಾರಿಯನ್ನು ಕಳಚಿಹಾಕಿದೆ. ಅಂದರೆ ಸಂಕಷ್ಟದಲ್ಲಿರುವ ರೈತರಿಗೆ ಕೃಷಿ ಸಬ್ಸಿಡಿಯನ್ನು ಕೊಡುವುದು, ಬೆಂಬಲ ಬೆಲೆಯನ್ನು ನಿಗದಿ ಮಾಡುವುದು, ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಕೊಡಿಸುವುದು, ಶಿಕ್ಷಣ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಮುಕ್ತ ಹಾಗೂ ಕಡಿಮೆ ಖರ್ಚಿನ ಸೌಲಭ್ಯಗಳನ್ನು ಒದಗಿಸುವುದು–

ಜಗತ್ತಿನಲ್ಲಿ ಗುಲಾಮಗಿರಿಯ ಪರಿಸ್ಥಿತಿಯಲ್ಲಿರುವ 4.6 ಕೋಟಿ ಜನರಲ್ಲಿ ಅತಿ ಹೆಚ್ಚು (1.8 ಕೋಟಿ) ಅಂದರೆ ಸುಮಾರು ಅರ್ಧದಷ್ಟು ಜನ ಭಾರತದಲ್ಲಿದ್ದಾರೆ. ಜನಸಂಖ್ಯೆಯ ಅತಿ ಹೆಚ್ಚು ಪ್ರಮಾಣದ (ಶೇ. 1.4) ಜನ ಗುಲಾಮಗಿರಿ ಪರಿಸ್ಥಿತಿಯಲ್ಲಿರುವ 5 ದೇಶಗಳಲ್ಲಿ ಭಾರತ ಇದ್ದು, 4ನೇ ಸ್ಥಾನ ಹೊಂದಿದೆ. ಗುಲಾಮಗಿರಿಗೆ ಜನ ಬಲಿಯಾಗುವ ಅಪಾಯದ ಬಗ್ಗೆ ಈ ಸಂಸ್ಥೆ ರೂಪಿಸಿದ ಸೂಚ್ಯಂಕದಲ್ಲಿ (ಇದು ಹೆಚ್ಚಿದ್ದಷ್ಟು ಅಪಾಯ ಹೆಚ್ಚು) 167 ದೇಶಗಳಲ್ಲಿ ಭಾರತ ಅತಿ ಹೆಚ್ಚು ಸೂಚ್ಯಂಕದಲ್ಲಿ 11ನೇ ಸ್ಥಾನ ಪಡೆದಿದೆ. ಹೊಲ ಗದ್ದೆಗಳಲ್ಲಿ, ತೋಟಗಳಲ್ಲಿ, ವೇಶ್ಯಾವಾಟಿಕೆಗಳಲ್ಲಿ, ಹೋಟೆಲುಗಳಲ್ಲಿ, ಇಟ್ಟಿಗೆ ಭಟ್ಟಿಗಳಲ್ಲಿ, ಕಲ್ಲು ಗಣಿಗಳಲ್ಲಿ, ಮನೆಗೆಲಸಗಳಲ್ಲಿ, ಬಲವಂತದ ಭಿಕ್ಷಾಟನೆಯಲ್ಲಿ ಪುಡಿಗಾಸು ಸಾಲ ತೀರಿಸಲು ಜನ ಭಾರತದಲ್ಲಿ ಜೀತದ ದುಡಿಮೆಗೆ, ಗುಲಾಮಗಿರಿಗೆ ಜನ ಬಲಿಯಾಗುತ್ತಿದ್ದಾರೆ ಎಂದು ವರದಿ ಹೇಳಿದೆ.

ಇವೇ ಮುಂತಾದ ಜವಾಬ್ದಾರಿಗಳನ್ನು ಅದು ಬಿಟ್ಟುಕೊಟ್ಟಿದೆ. ಆದರೆ ನಮ್ಮ ರಾಜಕೀಯ ವರ್ಗಕ್ಕೆ ಜನರ ಬಹುಮತದಿಂದ ಅಧಿಕಾರದಲ್ಲಿರುವುದು ಅನಿವಾರ್ಯವಾಗಿರುವುದರಿಂದ ಇದನ್ನು ಸಂಪೂರ್ಣವಾಗಿ ಮಾಡಲು ಆಗಿಲ್ಲ. ಎರಡು ವರ್ಷಗಳಲ್ಲಿ ನೋಡಿರುವಂತೆ ಬಲಪಂಥೀಯ ಸರಕಾರವು ತನ್ನ ಬಹುಮತದ ಅಧಿಕಾರ ಬಳಸಿಕೊಂಡು ಹೊಸ ಕಾನೂನುಗಳನ್ನು ಪಾಸುಮಾಡುತ್ತಿದೆ. ಇವು ಬಂಡವಾಳಶಾಹಿಯ ಪರವಾಗಿದ್ದು ರೈತ, ಕಾರ್ಮಿಕರ ವಿರುದ್ಧವಾಗಿವೆ. ಇದು ಕೇವಲ ಬಿ.ಜೆ.ಪಿ.ಯ ಧೋರಣೆಯಲ್ಲ. 1990ರಿಂದ ಈಚೆಗೆ ಎಲ್ಲಾ ಸರಕಾರಗಳು ಜಾಗತೀಕರಣದ ಪರವಾಗಿಯೇ ಕೆಲಸ ಮಾಡುತ್ತಿವೆ.

ವಿಶೇಷವೆಂದರೆ ಭಾರತದಲ್ಲಿ ಜಾಗತೀಕರಣವು ಇಲ್ಲಿಯ ಪ್ರಭುತ್ವ ಪೋಷಿತವಾದ, ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ನಡೆಯುತ್ತಿರುವ ಜಾಗತೀಕರಣವಾಗಿದೆ. ಇದನ್ನು ಅರ್ಥಮಾಡಿಕೊಳ್ಳಲು ಅಂಕಿಸಂಖ್ಯೆಗಳು ಬೇಕಾಗಿಲ್ಲ. ಬದುಕು ಎಷ್ಟು ದುಸ್ತರವಾಗಿದೆಯೆನ್ನುವುದು ಭಾರತದ ಬಹುಸಂಖ್ಯಾತ ಜನರಿಗೆ ದಿನನಿತ್ಯದ ನರಕದ ಅನುಭವವೇ ಆಗಿದೆ. ಮೊನ್ನೆ ಬೆಂಗಳೂರಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಗೆಳೆಯ ಚಂದ್ರಪೂಜಾರಿಯವರು ದಲಿತ ಅಭಿವೃದ್ಧಿ ಸೂಚ್ಯಂಕದ ಬಗ್ಗೆ ವಿವರವಾಗಿ ಮಾತನಾಡಿದರು. ಅಂದರೆ ಅಭಿವೃದ್ಧಿ ಸೂಚಕಗಳಲ್ಲಿ ಈ ವರೆಗೆ ಕೇವಲ ಆರ್ಥಿಕ ಅಂಶಗಳಿದ್ದರೆ ಈ ಸೂಚ್ಯಂಕದಲ್ಲಿ ಮನುಷ್ಯದ ಜೀವನಮಟ್ಟ ಸ್ವಾತಂತ್ರ್ಯ ಹಾಗೂ ಅನುಭವಗಳಿಗೂ ಸೇರಿದ ಅನೇಕ ಅಂಶಗಳಿವೆ. ಈ ಸೂಚ್ಯಂಕದ ಪ್ರಕಾರ ಕರ್ನಾಟಕದಂಥ ಅಭಿವೃದ್ಧಿ ಪರ ರಾಜ್ಯದ ಅನೇಕ ಪ್ರದೇಶಗಳಲ್ಲಿ ದಲಿತ ಸಮುದಾಯಗಳ ಅಭಿವೃದ್ಧಿ ಶೂನ್ಯವೆನ್ನಬಹುದಾಗಿದೆ. ನನ್ನ ದೃಷ್ಟಿಯಲ್ಲಿ ಇಂಥ ಪರಿಸ್ಥಿತಿಯು ಜಾಗತೀಕರಣದ ನೇರವಾದ ಪರಿಣಾಮವಾಗಿದೆ.

ಶಿಕ್ಷಣದ ಖಾಸಗೀಕರಣದಿಂದಾಗಿ ಬಂಡವಾಳಶಾಹಿ ಜಗತ್ತಿಗೆ ಬೇಕಾದ ಬಗೆಯ ಶಿಕ್ಷಣವನ್ನು ಪಡೆಯಲು ದಲಿತ ಮಕ್ಕಳು ಅಸಹಾಯಕರಾಗಿದ್ದಾರೆ. ತಾಂತ್ರಿಕ ಹಾಗೂ ವೈದ್ಯಕೀಯ ಶಿಕ್ಷಣವು ಮಧ್ಯಮವರ್ಗಕ್ಕೆ ನಿಲುಕದಂತೆ ಹಣದ ಜಗತ್ತಿಗೆ ಸೇರಿ-ಕೊಂಡಿದೆ. ಇನ್ನು ಹಳ್ಳಿಗಳಲ್ಲಿಯೇ ಇದ್ದು ನೆಮ್ಮದಿಯ ಜೀವನ ನಡೆಸುವುದು ಅಸಾಧ್ಯ. ಒಂದು ಕಡೆ ಭಾರತದ ಯಾವುದೇ ಪ್ರಭುತ್ವವು ಅಥವಾ ಆಡಳಿತವರ್ಗವು ದಲಿತರಿಗೆ ಭೂಮಿಯ ಒಡೆತನವನ್ನು ಕೊಡುವುದಿಲ್ಲ. ಈಗ ವಿದೇಶೀ ಕಂಪನಿಗಳಿಗಾಗಿ, ಆರ್ಥಿಕ ವಲಯಗಳಿಗಾಗಿ ಭೂಮಿಯನ್ನು ರೈತರಿಂದಲೂ ಕಬಳಿಸಲಾಗುತ್ತಿದೆ. ಹೀಗಾಗಿ ದಲಿತರಿಗಂತೂ ಭೂರಹಿತ ಕೃಷಿ ಕೂಲಿಕಾರರಾಗಿರುವುದೇ ಗತಿಯಾಗಿದೆ. ಕೂಲಿ ಮಾಡಿ ಬದುಕಬೇಕೆಂದರೂ ದಲಿತರ ಯಾವ ಏಳ್ಗೆಯನ್ನೂ ಸಹಿಸದ ಪ್ರಬಲ ಜಾತಿಗಳು ಅವರ ಮೇಲೆ ನಿರಂತರವಾದ ಹಿಂಸೆ ಹಾಗೂ ಅವಮಾನಗಳನ್ನು ಹೇರುತ್ತಲಿವೆ. ಶಿಕ್ಷಿತ ದಲಿತ ಯುವಕರಿಗೆ ನೌಕರಿಗಳೂ ಸಿಗುತ್ತಿಲ್ಲ. ಹೀಗಾಗಿ ಬೆಂಗಳೂರಿನಂಥ ಮಹಾನಗರಗಳಿಗೆ ವಲಸೆ ಹೋಗಿ ಅಲ್ಲಿಯ ಅಸಂಘಟಿತ ಕಾರ್ಮಿಕ ವಲಯವನ್ನು ಸೇರಿಕೊಳ್ಳುತ್ತಿದ್ದಾರೆ. ಇದು ಇನ್ನೂ ಭೀಕರವಾದ ಶೋಷಣೆಯ ಜಗತ್ತು. ಜಾಗತೀಕರಣದ ಪ್ರಧಾನ ತಂತ್ರವೆಂದರೆ ಕಾರ್ಮಿಕರಲ್ಲಿ ಸಂಘಟನೆ ಹಾಗೂ ಹಕ್ಕುಗಳ ಬಗೆಗಿನ ಎಚ್ಚರ ಇರದಂತೆ ನೋಡಿಕೊಳ್ಳುವುದು. ವಾಸ್ತವವೆಂದರೆ ಅಸಂಘಟಿತ ಕಾರ್ಮಿಕರ ಬಹುದೊಡ್ಡ ವರ್ಗವೊಂದು ಇಂದು ಹುಟ್ಟಿಕೊಂಡಿದೆ. ಆದರೆ ಅಭದ್ರತೆ, ನಿರಾಸೆಯ ಒತ್ತಡದಲ್ಲಿ ಈ ವರ್ಗವು ಬಲಪಂಥೀಯರ ಹುಸಿ ಸಿದ್ಧಾಂತಗಳಿಗೆ ಬಲಿಯಾಗುತ್ತಿದೆ. ಗುಜರಾತಿನ ಕೋಮು ಹಿಂಸೆಯಲ್ಲಿ ಹಾಗೂ ಬಲಪಂಥೀಯ ದೊಂಬಿಗಳಲ್ಲಿ ದಲಿತ ಯುವಕರು ಭಾಗಿಯಾಗಿದ್ದುದು ಎಲ್ಲರ ಆತಂಕಕ್ಕೆ ಕಾರಣವಾಗಿದೆ.

ಜಾಗತೀಕರಣದ ಬಗ್ಗೆ ಸುಳ್ಳು ಭ್ರಮೆಗಳನ್ನು ಇಟ್ಟುಕೊಳ್ಳುವ ಕಾಲವಿದಲ್ಲ. ಏಕೆಂದರೆ ಅದರ ಪರಿಣಾಮವನ್ನು ಲ್ಯಾಟಿನ್ ಅಮೇರಿಕನ್ ದೇಶಗಳಲ್ಲಿ ಅನೇಕ ಯೂರೋಪಿಯನ್ ದೇಶಗಳಲ್ಲಿ ಕಂಡಿದ್ದೇವೆ. ಎಲ್ಲಾ ವಿದ್ವಾಂಸರು ಗುರುತಿಸಿದಂತೆ ಜಾಗತೀಕರಣದ ಪರಿಣಾಮವೆಂದರೆ ಮೊದಲ ಹಂತದಲ್ಲಿ ಉ..ಆ.ಕ. ಯಲ್ಲಿ ಗಮನೀಯವಾದ ಹೆಚ್ಚಳ ಉಂಟಾಗುತ್ತದೆ. ಕೆಲವು ವರ್ಗಗಳ ಆದಾಯ ಕಲ್ಪನೆಯನ್ನು ಮೀರಿ ಬೆಳೆಯುತ್ತದೆ. ಐಷಾರಾಮೀ ಬದುಕಿನ ಥಳುಕು ಬಳಕುಗಳು ಕಣ್ಣು ಕೋರೈಸುತ್ತದೆ. ಈ ಭರಾಟೆಯಲ್ಲಿ ರೈತರು, ಕಾರ್ಮಿಕರು, ಬಡಜನರು ಅದೃಶ್ಯರಾದಂತೆ ಅನ್ನಿಸುತ್ತದೆ. ಆದರೆ ಜಾಗತೀಕರಣದ ಬಣ್ಣದ ಗುಳ್ಳೆ ಒಡೆದ ಕೂಡಲೇ ಕಾಣುವ ವಾಸ್ತವಗಳೆಂದರೆ ಅಪಾರವಾದ ಬಡತನ, ಹಸಿವು ಹಾಗೂ ಅಸಹಾಯಕತೆಗಳು. ಆದರೆ ಒಮ್ಮೆ ಅನುಷ್ಠಾನಕ್ಕೆ ಬಂದರೆ ಜಾಗತೀಕರಣದ ಹಿಂದಿನ ಬಂಡವಾಳ ಶಕ್ತಿಗಳು ತಮ್ಮ ಪ್ರಾಬಲ್ಯ ಬಿಟ್ಟುಕೊಡುವುದಿಲ್ಲ. ಆಗ ಬರ್ಬರವಾದ ಹಿಂಸೆಯ ಪರ್ವವು ಶುರುವಾಗುತ್ತದೆ. ಭಾರತದ ಸಂದರ್ಭದ ವಿಶೇಷತೆಯೆಂದರೆ ಈಗ ಜಾಗತೀಕರಣದ ಹಿಂದಿರುವ ಅಂತರ್‌ರಾಷ್ಟ್ರೀಯ ಬಂಡವಾಳದ ಬೆಂಬಲಕ್ಕೆ ತನ್ನ ರಾಜಕೀಯ ಅಧಿಕಾರದ ಬೆಂಬಲ ನೀಡುತ್ತಿರುವುದು ಹುಸಿ ರಾಷ್ಟ್ರೀಯತೆಯನ್ನು ಬಳಸಿಕೊಳ್ಳುತ್ತಿರುವ ಫ್ಯಾಸಿಸ್ಟ್ ರಾಜಕೀಯವಾಗಿದೆ. ಇದೊಂದು ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ. ಏಕೆಂದರೆ ಫ್ಯಾಸಿಸ್ಟ್ ರಾಜಕೀಯವು ಪ್ರಜೆಗಳ ಪ್ರತಿಭಟನೆಯನ್ನು ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಬ್ಬಾಳಿಕೆಯ ಮೂಲಕ ನಾಶಮಾಡುತ್ತದೆ. ಈಗ ವಿಶ್ವವಿದ್ಯಾನಿಲಯಗಳ ಮೇಲೆ ಇಂಥ ಪ್ರಯೋಗಗಳು ನಡೆದಿವೆ. ಇದು ಒಂದು ವೇಳೆ ಸಾಧ್ಯವಾದರೆ ಜಾಗತೀಕರಣದ ವಿರುದ್ಧ ಪ್ರತಿಭಟನೆಯೂ ಮಂದವಾಗಿ ಬಿಡುತ್ತದೆ.

ಇದಕ್ಕೆ ಪರಿಹಾರವೊಂದೇ. ಈ ಹಂತದಲ್ಲಿಯೇ ಜಾಗತೀಕರಣದ ವಿರುದ್ಧ ಹಾಗೂ ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳು ಹಾಗೂ ಹಕ್ಕುಗಳ ಪರವಾಗಿ ಹೋರಾಟಗಳನ್ನು ಬಲಪಡಿಸಬೇಕಾಗಿದೆ. ಈ ಹೋರಾಟಗಳಿಗೆ ಅವಶ್ಯಕವಾದ ರಾಜಕೀಯ ಪ್ರಜ್ಞೆಯನ್ನು ಬೆಳಸಬೇಕಿದೆ. ನಮ್ಮಲ್ಲಿ ಯಾರೂ ಇಂದು Comfort Zone ಒಂದರಲ್ಲಿ ನೆಮ್ಮದಿಯಿಂದ ಇರುವುದು ಸಾಧ್ಯವಿಲ್ಲ. ●

'ಗೋಮಾಂಸ'ವೂ ಬಿಜೆಪಿಯ ದ್ವೇಷ ರಾಜಕಾರಣವೂ

ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ದಾದ್ರಿ 'ಗೋಮಾಂಸ' ವಿಚಾರವನ್ನು ಮತ್ತೆ ವೋಟಿಗಾಗಿ ಬಳಸಲು ಬಿಜೆಪಿ ನಾಯಕತ್ವ ಹೊರಟಿರುವುದು ಸುಸ್ಪಷ್ಟವಾಗಿದೆ. ದಾದ್ರಿ ಪ್ರಕರಣ ನಡೆದ ಕೆಲವೇ ವಾರಗಳ ನಂತರ ನಡೆದ ಬಿಹಾರ ವಿಧಾನಸಭೆ ಚುನಾವಣೆಗಳಲ್ಲಿ ಇಂತಹ ಪ್ರಯತ್ನಕ್ಕೆ ಬಿಹಾರದ ಮತದಾರರು ಸೊಪ್ಪು ಹಾಕಲಿಲ್ಲ. ಚುನಾವಣೆಗಳು ಬರುತ್ತವೆ, ಹೋಗುತ್ತವೆ, ಆದರೆ ಇಂಥ ವಿಭಜನಕಾರಿ ಹಾಗೂ ವಿಚ್ಛಿದ್ರಕಾರಿ ತಂತ್ರಗಳು ಸಮಾಜದಲ್ಲಿ ಕೋಮುವಾದಿ ವಿಷವನ್ನು ಚುಚ್ಚಿ ತುಂಬಿಸಿ ದುರಂತಮಯ ಪರಿಣಾಮಗಳನ್ನು ಉಂಟು ಮಾಡುತ್ತವೆ. ಇಂತಹ ಕೃತ್ಯಗಳ ಪರಿಣಾಮಗಳನ್ನು ಮೋದಿ ಸರಕಾರ ಕ್ರಮೇಣ ಅನುಭವಿಸಬೇಕಾಗಿ ಬರಬಹುದು.



ಪ್ರಕಾಶ ಕಾರಟ್

ಉತ್ತರ ಪ್ರದೇಶದಲ್ಲಿ ಕೋಮುವಾದಿ ಧ್ರುವೀಕರಣಕ್ಕಾಗಿ ಭಾರತೀಯ ಜನತಾ ಪಕ್ಷ 'ಗೋಮಾಂಸ ರಾಜಕಾರಣ'ದಲ್ಲಿ ನಿರತವಾಗುತ್ತದೆ ಎನ್ನುವುದು ಇತ್ತೀಚಿನ ದಿನಗಳಲ್ಲಿ ಸ್ಪಷ್ಟವಾಗಿದೆ. ಮನೆಯಲ್ಲಿ ದನದ ಮಾಂಸ ಇಟ್ಟುಕೊಂಡು ಅದನ್ನು ತಿಂದ ಎಂಬ ಸುಳ್ಳು ಆರೋಪದ ಮೇಲೆ ಉತ್ತರ ಪ್ರದೇಶದ ದಾದ್ರಿಯ ಬಿಸಾರಾ ಗ್ರಾಮದಲ್ಲಿ ಮಹಮದ್ ಅಖ್ಲಾಕ್ ಎಂಬಾತನನ್ನು ಕೊಚ್ಚಿ ಕೊಲೆ ಮಾಡಲಾಗಿತ್ತು. ಅಖ್ಲಾಕ್ ಕೊಲೆ ಸಂಬಂಧ ಕೆಲವು ಬಿಜೆಪಿ ಕಾರ್ಯಕರ್ತರ ಸಹಿತ ಒಟ್ಟು 18 ಜನರನ್ನು ಬಂಧಿಸಲಾಗಿದ್ದು ವಿಚಾರಣೆ ನಡೆಯುತ್ತಿದೆ.

ಅಖ್ಲಾಕ್ ಮನೆಯಿಂದ ಸ್ವಲ್ಪ ದೂರದಲ್ಲಿ ಸಿಕ್ಕಿದ್ದ ಮಾಂಸದ ಸ್ಯಾಂಪಲ್ 'ಹಸು ಅಥವಾ ಅದರ ಸಂತತಿ'ಯ ಮಾಂಸ ಎನ್ನುವುದು ಸಾಬೀತಾಗಿದೆ ಎಂದು ಮಥುರಾದ ವಿಧಿವಿಜ್ಞಾನ ಪ್ರಯೋಗಾಲಯ ಕಳೆದ ವಾರ ನೀಡಿದ ವರದಿಯು, ಸಚಿವರ ಸಹಿತ ಬಿಜೆಪಿಯ ಮುಖಂಡರಿಂದ ಒಂದು ವ್ಯವಸ್ಥಿತ ಪ್ರಚಾರಕ್ಕೆ ಚಾಲನೆ ನೀಡಿದ್ದು ಅಖ್ಲಾಕ್ ಹತ್ಯೆಯಿಂದ ಗಮನವನ್ನು ಬೇರೆಡೆ ಸೆಳೆಯುವುದು ಅದರ ಉದ್ದೇಶವಾಗಿದೆ.

ಮಥುರಾ ಪ್ರಯೋಗಾಲಯದ ವರದಿಯನ್ನು ಬಹಿರಂಗಗೊಳಿಸಿದ ಸನ್ನಿವೇಶವೇ ದುರುದ್ದೇಶದಿಂದ ಕೂಡಿದೆ. ದಾದ್ರಿಯ ಸರಕಾರಿ ಪಶು ಆಸ್ಪತ್ರೆಯ ವೈದ್ಯರು ಆ ಮಾಂಸ 'ಮೇಕೆ ಅಥವಾ ಅದರ ಸಂತತಿಯದ್ದು' ಎಂದು ವರದಿ ನೀಡಿದ್ದರು. ಇದೀಗ ಮಥುರಾ ಪ್ರಯೋಗಾಲಯದ ವರದಿಯ ನಿಖರತೆಯನ್ನು ಸ್ವತಃ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಪ್ರಶ್ನಿಸಿದ್ದಾರೆ. ಮಥುರಾ ಪ್ರಯೋಗಾಲಯದ ಪರೀಕ್ಷೆಗೊಳಪಡಿಸಿದ ಮಾಂಸ ಅಖ್ಲಾಕ್ ಮನೆಯ ಫ್ರಿಜ್‌ನಿಂದ ಪಡೆದದ್ದಲ್ಲ, ಬದಲು ಹೊರಗಡೆ ಸಿಕ್ಕಿದ ಮಾಂಸದ್ದು. ಅದಕ್ಕಿಂತ ಹೆಚ್ಚಾಗಿ ಗೋಮಾಂಸವನ್ನು ಇಟ್ಟುಕೊಳ್ಳುವುದು ಕಾನೂನುಬಾಹಿರ ಎಂಬ ಕಾನೂನೇನೂ ಉತ್ತರ ಪ್ರದೇಶದಲ್ಲಿ ಇಲ್ಲ.

ಒಂದು ದನವನ್ನು ಕೊಂದು ಅದರ ಮಾಂಸವನ್ನು ಬಿಸಾರಾ ಗ್ರಾಮದ ಮುಸಲ್ಮಾನರಿಗೆ ಹಂಚಲಾಯಿತು ಎಂದು ವ್ಯವಸ್ಥಿತ ಅಪಪ್ರಚಾರ ನಡೆಸಲು ಮಥುರಾ ಲ್ಯಾಬ್ ವರದಿಯನ್ನು ಬಿಜೆಪಿ ಬಳಸಿಕೊಳ್ಳುತ್ತಿದೆ. ಬಿಜೆಪಿ ಸಂಸದ ಹಾಗೂ ಕಟ್ಟಾ ಹಿಂದೂ ಕೋಮುವಾದಿ ಯೋಗಿ ಆದಿತ್ಯನಾಥ ಗೋಹತ್ಯೆಗಾಗಿ ಅಖ್ಲಾಕ್ ಕುಟುಂಬದ ವಿರುದ್ಧ ಮೊಕದ್ದಮೆ ದಾಖಲು ಮಾಡಬೇಕೆಂದು ಒತ್ತಾಯಿಸಿದ್ದಾರೆ. ಅಖ್ಲಾಕ್ ಹತ್ಯೆ ಸಂಬಂಧ ಬಂಧಿಸಲಾಗಿರುವ ಹಿಂದೂಗಳು ಮುಗ್ಧರು ಎಂದೂ, ಅವರನ್ನು ಬಿಡುಗಡೆ ಮಾಡುವಂತೆಯೂ ಆತ ಒತ್ತಾಯಿಸಿದ್ದಾರೆ. ಲ್ಯಾಬ್ ವರದಿಯ ಸತ್ಯಾಸತ್ಯತೆಯನ್ನು ಪ್ರಶ್ನಿಸಿದ್ದಕ್ಕಾಗಿ ಕೇಂದ್ರದ ಸಂಸ್ಕೃತಿ ಸಚಿವ ಮಹೇಶ್ ಶರ್ಮಾ ಉತ್ತರ ಪ್ರದೇಶ ಮುಖ್ಯಮಂತ್ರಿಯನ್ನು ಟೀಕಿಸಿದ್ದಾರೆ. ಮುಜಫರ್‌ನಗರ ಗಲಭೆಗಳಲ್ಲಿ ಪಾತ್ರವಹಿಸಿರುವ ಕುಖ್ಯಾತಿಯ ಇನ್ನೊಬ್ಬ ಕೇಂದ್ರ ಮಂತ್ರಿ ಸಂಜೀವ್ ಬಲ್ಯಾನ್, ಹತ್ಯೆ ಮಾಡಲಾದ ದನದ ಮಾಂಸವನ್ನು ಯಾರೆಲ್ಲಾ ತಿಂದರು ಎಂದು ಪತ್ತೆ ಹಚ್ಚಲು ತನಿಖೆ ನಡೆಸಬೇಕೆಂದು ಆಗ್ರಹಿಸಿದ್ದಾರೆ!

ನಿಷೇಧಾಜ್ಞೆ ಇದ್ದರೂ ಬಿಸಾರಾ ಗ್ರಾಮದಲ್ಲಿ ಜೂನ್ ಆರರಂದು ಒಂದು ಮಹಾ ಪಂಚಾಯತ್ ನಡೆಯಿತು. ಬಿಜೆಪಿ ಮತ್ತು ಶಿವಸೇನೆಯ ಸ್ಥಳೀಯ ಮುಖಂಡರೂ ಇದ್ದ ಈ ಸಭೆ ಅಖ್ಲಾಕ್ ಕುಟುಂಬದ ವಿರುದ್ಧ 20 ದಿನಗಳೊಳಗಾಗಿ ಮೊಕದ್ದಮೆ ದಾಖಲಿಸಬೇಕೆಂದು ಆಗ್ರಹಿಸಿತು. ಒಂದು ವೇಳೆ ಕೇಸ್ ದಾಖಲಿಸದಿದ್ದರೆ 'ಸಾರ್ವಜನಿಕ ಆಕ್ರೋಶವನ್ನು' ನಿಯಂತ್ರಿಸಲು ಸಾಧ್ಯವಾಗದು ಎಂದೂ ಆ ಸಭೆ ಘೋಷಿಸಿತು. ದನವನ್ನು 'ಕೊಂದವರು' ನಿಜವಾದ ಕ್ರಿಮಿನಲ್‌ಗಳು, ದನ ಕೊಂದವನನ್ನು 'ಕೊಲೆ ಮಾಡಿದವರು' ಅಲ್ಲ ಎಂಬುದು ಈ ಮಹಾ ಪಂಚಾಯತ್ ಮುಂದಿಟ್ಟ ತರ್ಕವಾಗಿದೆ!

ಸಂಜೀವ್ ಬಲ್ಯಾನ್‌ರ ಪ್ರಚೋದನಕಾರಿ ಹೇಳಿಕೆಯನ್ನು ಖಂಡಿಸಲು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ನಿರಾಕರಿಸಿದ್ದಾರೆ. ಬಲ್ಯಾನ್ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದಾಗ, ಮಥುರಾ ಲ್ಯಾಬ್ ವರದಿಯ ಆಧಾರದಲ್ಲಿ ಬಲ್ಯಾನ್ ಹಾಗೆ ಹೇಳಿರಬಹುದು ಎಂಬುದು ಷಾ ಉತ್ತರವಾಗಿತ್ತು.

ದಾದ್ರಿ 'ಗೋಮಾಂಸ' ವಿಚಾರವನ್ನು ಕೋಮು ಧ್ರುವೀಕರಣಕ್ಕೆ ಬಳಸಲು ಬಿಜೆಪಿ ನಾಯಕತ್ವ ಹೊರಟಿರುವುದು ಸುಸ್ಪಷ್ಟವಾಗಿದೆ. ಉತ್ತರ ಪ್ರದೇಶ ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು ಅದನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಬಳಗ ಸಿನಿಕತನದ ಪ್ರಯತ್ನಗಳನ್ನು ಮಾಡುತ್ತಿದೆ. ದಾದ್ರಿ ಪ್ರಕರಣ ನಡೆದ ಕೆಲವೇ ವಾರಗಳ ನಂತರ ನಡೆದ ಬಿಹಾರ ವಿಧಾನಸಭೆ ಚುನಾವಣೆಗಳಲ್ಲಿ ಗೋಹತ್ಯೆ ಮತ್ತು ಗೋಮಾಂಸದ ವಿಚಾರವನ್ನು ಬಳಸಿಕೊಳ್ಳಲು ಬಿಜೆಪಿ ಯತ್ನಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಂಥ ವಿಚ್ಛಿದ್ರಕಾರಿ ಪ್ರಯತ್ನಕ್ಕೆ ಬಿಹಾರದ ಮತದಾರರು ಸೊಪ್ಪು ಹಾಕಲಿಲ್ಲ ಎನ್ನುವುದು ಬೇರೆ ಸಂಗತಿ. ಇಂಥ ವಿಭಜನಕಾರಿ ಹಾಗೂ ವಿಚ್ಛಿದ್ರಕಾರಿ ತಂತ್ರಗಳು ಚುನಾವಣೆಗಳ ಮೇಲೆ ಪರಿಣಾಮ ಬೀರುವುದು ಮಾತ್ರವೇ ಅಲ್ಲದೆ ಅವುಗಳು ಸಮಾಜದಲ್ಲಿ ಕೋಮುವಾದಿ ವಿಷವನ್ನು ಚುಚ್ಚಿ ತುಂಬಿಸಿ ದುರಂತಮಯ ಪರಿಣಾಮಗಳನ್ನು ಉಂಟು ಮಾಡುತ್ತವೆ. ಅವುಗಳು ಜಾರ್ಖಂಡ್‌ನ ಲಾತೆಹರ್‌ನಲ್ಲಿ ಒಬ್ಬ 13 ವರ್ಷದ ಬಾಲಕನೂ ಸೇರಿದಂತೆ ಇಬ್ಬರು ದನದ ವ್ಯಾಪಾರಿಗಳನ್ನು ಹತ್ಯೆ ಮಾಡಿದಂಥ ಹೇಯ ಅಪರಾಧಗಳಿಗೆ ಅವಕಾಶ ಮಾಡಿಕೊಡುತ್ತವೆ.

ಕೇಂದ್ರ ಮಂತ್ರಿಗಳು ಹಾಗೂ ಆಡಳಿತ ಪಕ್ಷದ ನಾಯಕರ ದ್ವೇಷ ಭಾಷಣಗಳು ಹಾಗೂ ಕೋಮು ಭಾವನೆಗಳನ್ನು ಕೆರಳಿಸುವ ಕೃತ್ಯಗಳ ಪರಿಣಾಮಗಳನ್ನು ಮೋದಿ ಸರಕಾರ ಕ್ರಮೇಣ ಅನುಭವಿಸಬೇಕಾಗಿ ಬರಬಹುದು. ಚುನಾವಣೆಗಳು ಬರುತ್ತವೆ, ಹೋಗುತ್ತವೆ; ಆದರೆ ಜನರನ್ನು ವಿಭಜಿಸಲು, ಜನರ ಜೀವಗಳನ್ನು ಅಪಾಯಕ್ಕೆ ತಳ್ಳಲು ಹಾಗೂ ಶಾಂತಿ-ಸೌಹಾರ್ದತೆಯನ್ನು ಹಾಳುಗೆಡವಲು ಬಿಜೆಪಿಯು ಸರಕಾರಿ ಅಧಿಕಾರವನ್ನು ಹೇಗೆ ಬಳಸಿಕೊಂಡಿತು ಎನ್ನುವುದರ ಬಗ್ಗೆ ಜನರು ತೀರ್ಪು ನೀಡುತ್ತಾರೆ.

ಅನುವಾದ: ವಿಶ್ವ

ಭಾರತದ ಸ್ವತಂತ್ರ ನಿಲುವನ್ನು ತೊರೆದ ಮೋದಿ ಸರಕಾರ

ಭಾರತ-ಅಮೆರಿಕಾ ಜಂಟಿ ಹೇಳಿಕೆಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಅಮೆರಿಕಾ ಭೇಟಿಯಲ್ಲಿ ಒಂದು 50 ಪರಿಚ್ಛೇದಗಳ ಭಾರತ-ಅಮೆರಿಕಾ ಜಂಟಿ ಹೇಳಿಕೆಯನ್ನು ಹೊರಡಿಸಲಾಗಿದೆ. 'ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಭಾರತ: 21ನೇ ಶತಮಾನದಲ್ಲಿ ಬಹುಕಾಲ ಬಾಳುವ ಜಾಗತಿಕ ಭಾಗೀದಾರರು' ಎಂಬ ಶಿರೋನಾಮೆಯ ಈ ಹೇಳಿಕೆ ಅಮೆರಿಕಾದ ಜಾಗತಿಕ ಸಮರವ್ಯೂಹಗಳ ಒಂದು ಆಯಕಟ್ಟಿನ ಕಿರಿಯ ಪಾಲುದಾರ ಎಂಬ ಪಾತ್ರವೇ ಭಾರತಕ್ಕೆ ಗಟ್ಟಿ ಎಂದು ಸಾರಿರುವ ಹೇಳಿಕೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟೀಕಿಸಿದೆ. ಈ ಹೇಳಿಕೆಯಲ್ಲಿ ಹಲವು ಪ್ರಶ್ನೆಗಳು ಏಳುತ್ತವೆ. ಅವನ್ನೆಲ್ಲ ಭಾರತದ ಸಂಸತ್ತಿನಲ್ಲಿ ಯಾವುದೇ ಚರ್ಚೆ ನಡೆಸದೆ ನಿರ್ಧರಿಸಲಾಗಿದೆ ಎಂದು ಅದು ಆಕ್ಷೇಪ ವ್ಯಕ್ತಪಡಿಸಿದೆ.

ಈ ಒಪ್ಪಂದ ದ್ವಿಪಕ್ಷೀಯ ಸಂಬಂಧಗಳ ಮತ್ತು ಒಂದು ಜಾಗತಿಕ ಭಾಗೀದಾರಿಕೆಯ ಸುಮಾರಾಗಿ ಎಲ್ಲ ಅಂಶಗಳನ್ನು ಒಳಗೊಂಡಿದ್ದು, ಭಾರತ ತನ್ನ ಬಹುಕಾಲದ ಸ್ವತಂತ್ರ ವಿದೇಶಾಂಗ ಧೋರಣೆಯನ್ನು ಕೈಬಿಟ್ಟಿದೆ ಮತ್ತು ತನ್ನನ್ನು ಅಮೆರಿಕನ್ ಜಾಗತಿಕ ಸಮರ ವ್ಯೂಹಗಳ ಸೆರಗಿಗೆ ಭದ್ರವಾಗಿ ಗಂಟು ಹಾಕಿಕೊಂಡಿರುವುದಾಗಿ ಸಾರಿದೆ.

ಈ ಒಪ್ಪಂದದಲ್ಲಿ ಹಲವಾರು ಅಂಶಗಳು ಇವೆ: ವಾತಾವರಣ ಬದಲಾವಣೆ ಮತ್ತು ಪ್ಯಾರಿಸ್ ಘೋಷಣೆಯನ್ನು ಜಾರಿಗೆ ತರುವ ಭಾರತದ ಬದ್ಧತೆ, ಬೌದ್ಧಿಕ ಆಸ್ತಿ ಹಕ್ಕುಗಳ ವಿಷಯದಲ್ಲಿ ಎರಡೂ ದೇಶಗಳ ಸಮಾನ ಹಿತಗಳು ಎನ್ನುತ್ತ ಅಮೆರಿಕನ್ ಧ್ಯೇಯೋದ್ದೇಶಗಳ ಅನುಮೋದನೆ, ನಾಗರಿಕ ಪರಮಾಣು ಸಹಕಾರ ಮತ್ತು ಇನ್ನೂ ಮಹತ್ವದ ರಕ್ಷಣಾ ಒಪ್ಪಂದಗಳು ಇತ್ಯಾದಿ. ಹತ್ತು ಪರಿಚ್ಛೇದಗಳು ರಕ್ಷಣಾ ಸಂಬಂಧಿ ಪ್ರಶ್ನೆಗಳ ಬಗ್ಗೆಯೇ ಇವೆ.

ಸಮರ ಸಾಗಾಣಿಕೆ ವಿನಿಮಯ ಒಪ್ಪಂದ ಮನವಿ ಪತ್ರ:

ಇದು ಈ ಹಿಂದಿನ ಸಮರ ಸಾಗಾಣಿಕೆ ಬೆಂಬಲ ಒಪ್ಪಂದದ ಹೊಸ ಹೆಸರು. ಇದು ಜಂಟಿ ತರಬೇತಿಯಲ್ಲಿ ಎರಡೂ ದೇಶಗಳ ಮಿಲಿಟರಿಗಳಿಗೆ ಪರಸ್ಪರರ ಸಮರ ಸಾಗಾಣಿಕೆ ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ನೀಡುವ ಒಪ್ಪಂದ. ಅಮೆರಿಕನ್ ವಿಮಾನ ಪಡೆ ಜಗತ್ತಿನ ಯಾವುದೇ ಭಾಗದಲ್ಲಿ ಮಿಲಿಟರಿ ಹಸ್ತಕ್ಷೇಪದ ಸಾಹಸಕ್ಕಿಳಿದರೆ ಅವರ ಯುದ್ಧ ವಿಮಾನಗಳಿಗೆ ನಮ್ಮ ವೈಮಾನಿಕ ನೆಲೆಗಳಲ್ಲಿ ಇಂಧನ ತುಂಬಿಸಿಕೊಳ್ಳಲು ಅವಕಾಶ ನೀಡುವುದು ಇತ್ಯಾದಿ ಇದರಲ್ಲಿ ಬರುತ್ತವೆ.

ಬಹಳಷ್ಟು ಅನಿವಾಸಿ ಭಾರತೀಯರು ಇರುವ ಪಶ್ಚಿಮ ಏಶ್ಯಾದಲ್ಲಿ ಅಮೆರಿಕಾ/ನಾಟೋ ಮಿಲಿಟರಿ ಹಸ್ತಕ್ಷೇಪ ನಡೆದರೆ, ಈ ಒಪ್ಪಂದ ಭಾರತದ ವಿದೇಶಾಂಗ ಧೋರಣೆಯ ಮೇಲೂ ಮತ್ತು ಅಲ್ಲಿ ಕೆಲಸ ಮಾಡುತ್ತಿರುವ ಭಾರತೀಯರಿಗೆ ಸಂಬಂಧಪಟ್ಟಂತೆಯೂ ಗಂಭೀರ ಪರಿಣಾಮಗಳನ್ನು ಬೀರುವಂತದ್ದು. ಇದರಿಂದ ನಮ್ಮ ಸ್ವತಂತ್ರ ವಿದೇಶಾಂಗ ಧೋರಣೆಯನ್ನೂ ಕೈಬಿಟ್ಟಂತಾಗುತ್ತದೆ ಮತ್ತು ಪಶ್ಚಿಮ ಏಶ್ಯ ಮತ್ತು ಕೊಲ್ಲಿ ದೇಶಗಳೊಡನೆ ಇರುವ ನಮ್ಮ ದ್ವಿಪಕ್ಷೀಯ ಸಂಬಂಧಗಳನ್ನು ಕೂಡ ಕೈಬಿಟ್ಟಂತಾಗುತ್ತದೆ ಎಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ.

ಏಶ್ಯ-ಶಾಂತಸಾಗರ,ಹಿಂದೂ ಮಹಾಸಾಗರ ಪ್ರದೇಶದಲ್ಲಿ ಆದ್ಯತೆಯ ಭಾಗೀದಾರರು

ಇದು ದಕ್ಷಿಣ ಏಶ್ಯಾದ ದೇಶಗಳೊಂದಿಗೆ ಭಾರತದ ಸಂಬಂಧಗಳ ಮೇಲೆ ಅಪಾಯಕಾರಿ ಪರಿಣಾಮಗಳನ್ನು ಬೀರುವಂತದ್ದು. ಈಗ ಏಶ್ಯ-ಶಾಂತಸಾಗರ ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭಾರತದ ಹಿತಾಸಕ್ತಿಗಳು ಅಮೆರಿಕಾದ ಹಿತಾಸಕ್ತಿಗಳಿಗೆ ಮತ್ತು 'ಚೀನಾವನ್ನು ತಡೆದಿಡುವ' ಅಮೆರಿಕನ್ ಸಮರವ್ಯೂಹದ ಗುರಿಗೆ ಸಮ ಎಂದು ಭಾವಿಸಲಾಗುವುದು. **ಈ ಮೂಲಕ ಈ ದೇಶಗಳೊಂದಿಗೆ ಉತ್ತಮ ನೆರೆಹೊರೆ ಸಂಬಂಧಗಳನ್ನು ಬೆಳೆಸುವ ಭಾರತದ ದೀರ್ಘಕಾಲದ ಧೋರಣೆಯನ್ನು ಮತ್ತು 'ಪೂರ್ವದತ್ತ ನೋಟ'ದ ಧೋರಣೆಯನ್ನೂ ಕೈಬಿಟ್ಟಂತೆಯೇ.** ಈ ಪ್ರದೇಶದಲ್ಲಿ ಭಾರತ ಯಾರ ವಿರುದ್ಧ ಅಮೆರಿಕಾದ ಆದ್ಯತೆಯ ಭಾಗೀದಾರನಾಗುತ್ತದೆ ಎಂಬ ಪ್ರಶ್ನೆಗೆ ಉತ್ತರಿಸಬೇಕಾಗುತ್ತದೆ.

ಪ್ರಧಾನ ರಕ್ಷಣಾ ಭಾಗೀದಾರ

ಈ ಜಂಟಿ ಒಪ್ಪಂದದಲ್ಲಿ ಭಾರತಕ್ಕೆ ಅಮೆರಿಕಾ ತನ್ನ ಪ್ರಧಾನ ರಕ್ಷಣಾ ಭಾಗೀದಾರ ಎಂಬ ಸ್ಥಾನಮಾನ ಕೊಟ್ಟಿದೆ. ಈ ಭಾಗೀದಾರಿಕೆಯ ಬದ್ಧತೆಗಳೇನು ಎಂದು ಪ್ರಶ್ನಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇವೆಲ್ಲ ಪ್ರಧಾನ ಪ್ರಶ್ನೆಗಳು, ಈ ಬಿಜೆಪಿ ನೇತೃತ್ವದ ಮೋದಿ ಸರಕಾರ ಇವನ್ನೆಲ್ಲ ಭಾರತದ ಸಂಸತ್ತಿನಲ್ಲಿ ಯಾವುದೇ ಚರ್ಚೆ ನಡೆಸದೆ ನಿರ್ಧರಿಸುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದೆ.

ನಾಗರಿಕ ಪರಮಾಣು ಸಹಕಾರ

2.8ಲಕ್ಷ ಕೋಟಿ ರೂ.ತೆತ್ತು ಅನಗತ್ಯವಾಗಿ ಆರು ವೆಸ್ಟಿಂಗ್‌ಟನ್ ರಿಯಾಕ್ಟರುಗಳ ಖರೀದಿ

ಆಂಧ್ರಪ್ರದೇಶದ ಕೊವ್ವಾಡದಲ್ಲಿ ಸ್ಥಾಪಿಸಲು ಆರು ವೆಸ್ಟಿಂಗ್‌ಟನ್ ಪರಮಾಣು ರಿಯಾಕ್ಟರ್‌ಗಳನ್ನು ಖರೀದಿಸಲಾಗುತ್ತಿದೆ. ಇದೊಂದು ವೆಚ್ಚದಾಯಕವಾದ ಅಸಮರ್ಥ ಸಾಹಸವಾಗಲಿದೆ ಎಂದು ಪೊಲಿಟ್‌ಬ್ಯುರೊ ಎಚ್ಚರಿಸಿದೆ. ಇದು ಕೇವಲ ಅಮೆರಿಕಾದೊಂದಿಗೆ ಪರಮಾಣು ವ್ಯವಹಾರದ ಶರತ್ತನ್ನು ಈಡೇರಿಸಲಿಕ್ಕಾಗಿಯಷ್ಟೇ ಇದನ್ನು ಖರೀದಿಸಲಾಗುತ್ತಿದೆ. ಜೈತಪುರದಲ್ಲಿ ಸ್ಥಾಪಿಸಲಾಗುವ ಫ್ರೆಂಚ್ ಕಂಪನಿ ಅರೇವಾ ರಿಯಾಕ್ಟರುಗಳಂತೆಯೇ ಈ ಎಪಿ 1000 ರಿಯಾಕ್ಟರುಗಳೂ ವಿಪರೀತ ಖರ್ಚಿನವು ಆಗಿರುತ್ತವೆ. ಈ ಆರು ರಿಯಾಕ್ಟರುಗಳಿಗೆ ಕನಿಷ್ಟ 2.8ಲಕ್ಷ ಕೋಟಿ ರೂ.ಗಳು ಖರ್ಚಾಗಬಹುದೆಂದು ಅಂದಾಜು ಮಾಡಲಾಗಿದೆ. ಇಂತಹ ವಿಪರೀತ ಖರ್ಚಿನ ರಿಯಾಕ್ಟರುಗಳಿಂದ ಉತ್ಪಾದಿಸುವ ವಿದ್ಯುತ್ತಿನ ಖರ್ಚನ್ನು ಭರಿಸಲು ಸಾಧ್ಯವಾಗದಂತಹ ಪರಿಸ್ಥಿತಿ ಉಂಟಾಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಅಲ್ಲದೆ ಎಲ್ಲ ಆರೂ ರಿಯಾಕ್ಟರುಗಳನ್ನು ಒಂದೇ ಕಡೆ ಸ್ಥಾಪಿಸುವುದು ಸುರಕ್ಷತೆಯ ದೃಷ್ಟಿಯಿಂದಲೂ ಸರಿಯಾದ ಕ್ರಮವಲ್ಲ. ಅಲ್ಲದೆ ಈ ವೆಸ್ಟಿಂಗ್‌ಟನ್ ವ್ಯವಹಾರವನ್ನು ಭಾರತದ ಪರಮಾಣು ಬಾಧ್ಯತೆ ಕಾನೂನು ಅನ್ವಯವಾಗದ ರೀತಿಯಲ್ಲಿ ಪರಮಾಣು ಪೂರೈಕೆದಾರರ ಬಾಧ್ಯತೆ ಇಲ್ಲದಂತೆ ಮಾಡಿ ಕುದುರಿಸಲಾಗುತ್ತಿದೆ. ವಿಮಾ ಭದ್ರತೆ ಮತ್ತು ಬಾಧ್ಯತೆಯನ್ನು ಭಾರತದ ಸಾರ್ವಜನಿಕರು ರಾಷ್ಟ್ರೀಕೃತ ವಿಮಾ ಕಂಪನಿಗಳ ಮೂಲಕ ಹೊರಬೇಕಾಗಿದೆ.

ಈ ವಿಷಯದಲ್ಲಿ ಇನ್ನೂ ಅಂತಿಮ ಕಾಂಟ್ರಾಕ್ಟ್ ಒಪ್ಪಂದವಾಗಿಲ್ಲವಾದ್ದರಿಂದ ಈ ವಿಪರೀತ ಖರ್ಚಿನ , ಕಾರ್ಯಸಾಧ್ಯವಲ್ಲದಂತಹ ರಿಯಾಕ್ಟರುಗಳ ಖರೀದಿಯನ್ನು ರದ್ದು ಮಾಡಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ. ನಮ್ಮ ಜನತೆಯ ಕಲ್ಯಾಣ ಮತ್ತು ಸಮೃದ್ಧಿಯನ್ನು ಬಲಿಗೊಟ್ಟು ಅಮೆರಿಕನ್ ಕಾರ್ಪೊರೇಟ್‌ಗಳಿಗೆ ಸೂಪರ್ ಲಾಭಗಳನ್ನು ಒದಗಿಸಲು ಭಾರತಕ್ಕೆ ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಎಲ್ಲ ಪ್ರಶ್ನೆಗಳನ್ನು ಸಾರ್ವಜನಿಕ ಪರೀಕ್ಷಣೆಗೆ ತೆರೆಯಬೇಕು, ಮತ್ತು ಸಂಸತ್ತಿನಲ್ಲಿ ಚರ್ಚಿಸಬೇಕು ಎಂದು ಒತ್ತಾಯಿಸಿದೆ.

ಭಾರತದ ವಿದೇಶಾಂಗ ಧೋರಣೆಯಲ್ಲಿ, ಸ್ವತಂತ್ರ ರಕ್ಷಣಾ ಸಾಮರ್ಥ್ಯಗಳನ್ನು ಬೆಳೆವಣಿಗೆ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಇಂತಹ ದೊಡ್ಡ ಬದಲಾವಣೆಗೆ ಅವಕಾಶ ಕೊಡಲು ಸಾಧ್ಯವಿಲ್ಲ ಎಂದು ಅದು ಹೇಳಿದೆ.





ರಕ್ತದ ಬಣ್ಣ ಕೆಂಪಾಗಿರುವರೆಗೆ ಯಾರಿಗೂ ಕೆಂಬಾವುಟವನ್ನು ಅಳಿಸಲು ಸಾಧ್ಯವಿಲ್ಲ : ಯೆಚುರಿ

ಕೆಂಬಾವುಟವನ್ನೂ ಕಮ್ಯುನಿಸ್ಟ್ ಪಕ್ಷವನ್ನೂ ಅಳಿಸಲು ಸಾಧ್ಯವಿಲ್ಲ. ಎಲ್ಲಿಯವರೆಗೆ ಜನರ ರಕ್ತದ ಬಣ್ಣ ಕೆಂಪಾಗಿರುತ್ತದೋ, ಅಲ್ಲಿಯವರೆಗೂ ಕೆಂಬಾವುಟ ಮತ್ತು ಕಮ್ಯುನಿಸ್ಟ್ ಪಕ್ಷ ಇರುತ್ತದೆ. ಬಂಡವಾಳಶಾಹಿಗೆ ನಿಜವಾದ ಪರ್ಯಾಯ ಎಡಪಕ್ಷಗಳು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಘೋಷಿಸಿದರು. ಅವರು ಐದು ಎಡಪಕ್ಷಗಳು – ಸಿಪಿಐ, ಸಿಪಿಐ(ಎಂ), ಎಸ್.ಯು.ಸಿ.ಐ.(ಸಿ), ಸಿಪಿಐ(ಎಂ.ಎಲ್.)ಲಿಬರೇಶನ್ – ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಏರ್ಪಡಿಸಿದ್ದ ರ್‍ಯಾಲಿಯನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು. ಕೇಂದ್ರದಲ್ಲಿ ಬಿಜೆಪಿ ಸರಕಾರದ 2 ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ 3 ವರ್ಷಗಳ ದುರಾಡಳಿತ ಹಾಗೂ ಜನ–ವಿರೋಧಿ ನೀತಿಗಳಿಗೆ ಪ್ರತಿಭಟನೆ ಸೂಚಿಸಿ ಎಡ ಪರ್ಯಾಯ ರೂಪಿಸುವುದು ರ್‍ಯಾಲಿಯ ಉದ್ದೇಶವಾಗಿತ್ತು.

ಬಿಜೆಪಿ ಸರಕಾರದ ನೀತಿಗಳ ಮೇಲೆ ದಾಳಿ ಮಾಡುತ್ತಾ ಶ್ರೀಮಂತರಿಗೆ 15 ಲಕ್ಷ ಕೋಟಿ ರಿಯಾಯಿತಿ ಕೊಡುವ ಸರಕಾರ, ಅನ್ನದಾತರಿಗೆ ಭೀಕರ ಬರ ಇದ್ದರೂ ನಯಾಪೈಸೆಯನ್ನೂ ನೀಡಿಲ್ಲ. ಪ್ರಧಾನಿ ಮೋದಿ ಭಾರತ ಶೇ. 7.9 ದರದಲ್ಲಿ ಅಭಿವೃದ್ಧಿ ಹೊಂದುತ್ತಿದೆ ಎಂದು ಕೊಚ್ಚಿಕೊಳ್ಳುತ್ತಿದ್ದಾರೆ. ಇದು ಸುಳ್ಳು. ಕೃಷಿ ಕ್ಷೇತ್ರದಲ್ಲಿ ಕೇವಲ ಶೇ. 2.3, ಕೈಗಾರಿಕಾ ಕ್ಷೇತ್ರದಲ್ಲಿ ಶೇ. 1.2 ಬೆಳವಣಿಗೆ, ಉತ್ಪಾದನಾ ವಲಯದಲ್ಲಿ ಶೇ. 1.1ರಷ್ಟು ಹಿನ್ನಡೆ ಇರುವಾಗ ಶೇ. 7.9 ಅಭಿವೃದ್ಧಿ ಎಲ್ಲಿಂದ ಬರುತ್ತದೆ ಎಂದು ಕಾ. ಯೆಚುರಿ ಪ್ರಶ್ನಿಸಿದರು. ಕಾಂಗ್ರೆಸ್ ಮತ್ತು ಬಿಜೆಪಿ ಒಂದೇ ನಾಣ್ಯದ ಎರಡು ಮುಖಗಳು. ಅದೇ ಜನವಿರೋಧಿ ನೀತಿಗಳನ್ನು ಎರಡೂ ಪಕ್ಷಗಳು ಅನುಸರಿಸುತ್ತಿವೆ. ಕೇಂದ್ರ ಸರಕಾರದಲ್ಲಿ ಎಡ ಪಕ್ಷಗಳ ನೇತೃತ್ವದಲ್ಲಿ ಸರಕಾರ ರಚನೆಯಾದಾಗ ಮಾತ್ರ ದೇಶದ ಪರಿಸ್ಥಿತಿ ಬದಲಾಗಲು ಸಾಧ್ಯ. ಪರ್ಯಾಯ ರಾಜಕಾರಣವೆಂದರೆ ದೇಶದ ಆರ್ಥಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನೀತಿಗಳು ಸಂಪೂರ್ಣವಾಗಿ ಜನ–ಪರವಾಗಿ ಬದಲಾಗಬೇಕಿದೆ.



ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಜನತೆಯನ್ನು ಉದ್ದೇಶಿಸಿ ಮಾತನಾಡುತ್ತಿರುವುದು

ಇಂತಹ ಎಡ ಪರ್ಯಾಯವನ್ನು ಕಟ್ಟಲು ಕರ್ನಾಟಕದಲ್ಲಿ ಸಮಯ ಸಂದರ್ಭ ಪ್ರಶಸ್ತವಾಗಿದೆ. ಇಂತಹ ಪರ್ಯಾಯ ರಾಜ್ಯದಲ್ಲಿ ಮತ್ತು ದೇಶದಲ್ಲಿ ಮೂಡಿ ಬರುತ್ತದೆ ಎಂದು ಕಾ. ಯೆಚುರಿ ಆಶಿಸಿದರು. ಇದಕ್ಕಿಂತ ಮೊದಲು ಕಾ. ಜಿ.ವಿ.ಶ್ರೀರಾಮರೆಡ್ಡಿ ಅವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ರ್‍ಯಾಲಿಯ ಉದ್ದೇಶವನ್ನು ವಿವರಿಸಿದರು. ಕೋಮುವಾದಿ ಹಾಗೂ ಜನ–ವಿರೋಧಿ ನೀತಿಗಳಿಂದ ಮುಕ್ತವಾದ ಸೆಕ್ಯುಲರ್ ಹಾಗೂ ಪ್ರಜಾಸತ್ತಾತ್ಮಕ ಪರ್ಯಾಯ ನೀತಿಗಳು ಹಾಗೂ ಪರ್ಯಾಯ ರಾಜಕಾರಣ ರೂಪಿಸಲು ಎಡ ಪಕ್ಷಗಳು ಈ ಸಮಾವೇಶಗಳು ಮತ್ತು ರ್‍ಯಾಲಿಯನ್ನು ಸಂಘಟಿಸಿವೆ ಎಂದು ಅವರು ವಿವರಿಸಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಸುಧಾಕರ ರೆಡ್ಡಿ ಅವರು ಮಾತನಾಡುತ್ತಾ, 300 ಕಾರ್ಪೊರೇಟ್ ಗಳಿಗೆ ಅಚ್ಛೇ ದಿನ್ ಬಂದಿದೆ. ಆದರೆ 120 ಕೋಟಿ ಜನರಿಗೆ 'ಬುರೇ ದಿನ್' ಬಂದಿದೆ ಎಂದು ಹೇಳಿದರು. ಜೂನ್ 4 ರಂದು ಯೋಜಿಸಲಾಗಿದ್ದ ಪೋಲಿಸ್ ಪ್ರತಿಭಟನೆಯನ್ನು ಬೆಂಬಲಿಸುತಾ, ಅದನ್ನು ರಾಜ್ಯದ ಕಾಂಗ್ರೆಸ್ ಸರಕಾರ ಎಸ್ಮಾ ಬಳಸಿ ದಮನಮಾಡಿದ್ದನ್ನು ಕಟುವಾಗಿ ಟೀಕಿಸಿದರು. ಎಸ್.ಯು.ಸಿ.ಐ.(ಸಿ) ಪೊಲಿಟ್ ಬ್ಯುರೊ ಸದಸ್ಯ ಕಾ. ಕೃಷ್ಣ ಚಕ್ರವರ್ತಿ ಮಾತನಾಡುತ್ತಾ ಸ್ವಯಂ–ಸ್ಫೂರ್ತ ಹೋರಾಟಗಳಿಂದಲೇ ಸಮಾಜದ ಕ್ರಾಂತಿಕಾರಿ ಬದಲಾವಣೆ ಸಾಧ್ಯವಿಲ್ಲ. ಅದಕ್ಕೆ ಕ್ರಾಂತಿಕಾರಿ ಸಿದ್ಧಾಂತ ಮತ್ತು ಧೋರಣೆ ಹೊಂದಿರುವ ಕ್ರಾಂತಿಕಾರಿ ಪಕ್ಷದ ಅಗತ್ಯವಿದೆ ಎಂಬ ಲೆನಿನರ ಮಾತುಗಳನ್ನು ನೆನೆಸಿಕೊಂಡರು. ಸಿಪಿಐ(ಎಂ.ಎಲ್.)–ಲಿಬರೇಶನ್ ನ ಪೊಲಿಟ್ ಬ್ಯುರೊ ಸದಸ್ಯ ಕಾ. ಸ್ವಪನ್ ಮುಖರ್ಜಿ ಮೊದಲಿಗೆ ಬೆಂಗಳೂರಿನ ಮಹಿಳಾ ಗಾರ್ಮೆಂಟ್ ಕಾರ್ಮಿಕರ ಧೀರೋದಾತ್ತ ಹೋರಾಟಕ್ಕೆ ಅವರನ್ನು ಅಭಿನಂದಿಸುತ್ತಾ, ಅವರ ಆಕ್ರೋಶ ಭರಿತ ಹೋರಾಟದ ಎದುರು ಮೋದಿ ಸರಕಾರ ಪಿ.ಎಫ್. ಕಾನೂನು ತಿದ್ದುಪಡಿಗಳಿಂದ ಹಿಂಜರಿಯಬೇಕಾಯಿತು. ಭಾರತದ ಇಡೀ ಕಾರ್ಮಿಕ ವರ್ಗ ಮೋದಿ ಸರಕಾರ ತರಬಯಸಿರುವ ಕಾರ್ಮಿಕ ಕಾನೂನುಗಳಿಗೆ ಕಾರ್ಮಿಕ–ವಿರೋಧಿ ತಿದ್ದುಪಡಿಗಳ ವಿರುದ್ಧ ಆಕ್ರೋಶ ಭರಿತವಾಗಿದೆ. ಇದು ಸೆಪ್ಟೆಂಬರ್ 2ರ ಸಾರ್ವತ್ರಿಕ ಮುಷ್ಕರದಲ್ಲಿ ವ್ಯಕ್ತವಾಗಲಿದ್ದು ಮೋದಿ ಸರಕಾರ ಪುನಃ ಹಿಂಜರಿಯಬೇಕಾಗುತ್ತದೆ ಎಂದು ಎಚ್ಚರಿಸಿದರು. ಮೋದಿ ಸರಕಾರದ ನೀತಿಗಳನ್ನು ಟೀಕಿಸುತ್ತಾ ಸಿಪಿಐ ನಾಯಕ ಕಾ. ಸಿದ್ಧನಗೌಡ ಪಾಟೀಲರು ಮೋದಿ ಸರಕಾರ ಆರಂಭಿಸಿರುವುದು 'ವಿಕಾಸ ಪರ್ವ ಅಲ್ಲ, ವಿನಾಶ ಪರ್ವ' ಎಂದರು. ಕೊನೆಯಲ್ಲಿ ಸಿಪಿಐ ರಾಜ್ಯ ಕಾರ್ಯದರ್ಶಿ ಕಾ. ಲೋಕೇಶ್ ಅವರು ಕಾರ್ಮಿಕರ, ರೈತರ, ಬಡವರ, ಮಹಿಳೆಯರ, ದಲಿತರ, ವಿದ್ಯಾರ್ಥಿ–ಯುವಜನರ 7 ಅಂಶಗಳ ಹಕ್ಕೊತ್ತಾಯಗಳನ್ನು ಮಂಡಿಸಿದರು. ಅದನ್ನು ಬೆಂಬಲಿಸಿ ಪ್ರತಿ ಪಕ್ಷಗಳ ಪ್ರತಿನಿಧಿಯೊಬ್ಬರು ಮಾತನಾಡಿದರು. ಸಿಪಿಐ(ಎಂ)ನ ಕಾ. ವರಲಕ್ಷ್ಮಿ ಮತ್ತು ಎಸ್.ಯು.ಸಿ.ಐ(ಸಿ)ನ ಡಾ. ಉಮಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರ್‍ಯಾಲಿಯ ಮೊದಲು ಸಾವಿರಾರು ಸಂಖ್ಯೆಯಲ್ಲಿ ರಾಜ್ಯಗಳ ಮೂಲೆಗಳಿಂದ ಬಂದಿದ್ದ ಎಡ ಪಕ್ಷಗಳ ಕಾರ್ಯಕರ್ತರು ಬೆಂಬಲಿಗರು ಸಿಟಿ ರೈಲ್ವೇ ಸ್ಟೇಶನಿನಿಂದ ಫ್ರೀಡಂ ಪಾರ್ಕಿನವರೆಗೆ ಆಕರ್ಷಕ ಮೆರವಣಿಗೆ ನಡೆಸಿದರು. ಇದಕ್ಕಿಂತ ಮೊದಲು 20ಕ್ಕೂ ಹೆಚ್ಚು ಜಿಲ್ಲಾ ಮತ್ತು ತಾಲ್ಲೂಕು ಸಮಾವೇಶಗಳನ್ನು ನಡೆಸಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದ ಜಾಥಾಗಳನ್ನು ಸಹ ಸಂಘಟಿಸಲಾಗಿತ್ತು. ಈ ಸಫಲ ರಾಜ್ಯ ಮಟ್ಟದ ರ್‍ಯಾಲಿ ರಾಜ್ಯದಲ್ಲಿ ಎಡ ಪರ್ಯಾಯ ಕಟ್ಟುವತ್ತ ನಿರ್ಣಾಯಕ ಹೆಜ್ಜೆಯಾಗಲಿದೆ ಎಂಬ ಆಶಾಭಾವನೆ ಮೂಡಿಸಿದೆ. ●



ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡುತ್ತಿರುವುದು



ಹಿರಿಯ ಮುಖಂಡ ಬಿ.ಮಾಧವರಿಗೆ ಹೃದಯಸ್ಪರ್ಶಿ ಸನ್ಮಾನ

ಬಿ.ಮಾಧವ ಅವರು ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದವರು. ಭಾರತಿಯ ಜೀವವಿಮಾ ನೌಕರರಾಗಿದ್ದ ಅವರು ಮೊದಲು ವಿಮಾ ನೌಕರರ ಸಂಘವನ್ನು ಉಡುಪಿಯಲ್ಲಿ ಕಟ್ಟುತ್ತಿರುವಾಗಲೇ ಕಾರ್ಮಿಕ ಸಂಘಗಳ ಕಮ್ಯೂನಿಸ್ಟ್ ಚಳುವಳಿಯ ಸಂಪರ್ಕ ಬೆಳೆಸಿಕೊಂಡವರು. ಮಣಿಪಾಲದಲ್ಲಿ ಮುದ್ರಣ ಕಾರ್ಮಿಕರ ಸಂಘಟನೆಗೆ ಧೀರ ನಾಯಕತ್ವ ನೀಡಿದವರು. ಮಂಗಳೂರಿಗೆ ವರ್ಗಾವಣೆಯಾಗಿ ಬಂದು, ಕಾರ್ಮಿಕ ಸಂಘಟನೆಗಳಿಗೆ ಮಾರ್ಗದರ್ಶನ ನೀಡಿದವರು. ಭಾರತೀಯ ಜೀವ ವಿಮಾ ನಿಗಮದ ನೌಕರಿಯಿಂದ ಸ್ವಯಂ ನಿವೃತ್ತಿ ಹೊಂದಿ ಸಂಪೂರ್ಣವಾಗಿ ಸಿಐಟಿಯು ಹಾಗೂ ಸಿಪಿಐ(ಎಂ) ಪಕ್ಷದಲ್ಲಿ ಸಕ್ರಿಯರಾದವರು. ಹಂಚಿನ ಕಾರ್ಖಾನೆ ಕಾರ್ಮಿಕ ಸಂಘ, ದ.ಕ.ಜಿಲ್ಲಾ ಬೀಡಿ ಫೆಡರೇಶನ್‌ನಲ್ಲಿ ಅಧ್ಯಕ್ಷರಾಗಿ ಮುಂದೆ ಬೀಡಿ ಕಾರ್ಮಿಕರ ರಾಜ್ಯ ಹಾಗೂ ರಾಷ್ಟ್ರ ಸಂಘಟನೆಗಳಿಗೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದವರು. ಸಿಐಟಿಯುನಲ್ಲಿ ಜಿಲ್ಲಾ ಮುಖಂಡತ್ವ ದಿಂದ ರಾಜ್ಯ ಸಮಿತಿ ಅಧ್ಯಕ್ಷತೆ–ಗೆ ಮುನ್ನಡೆದವರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಅಲ್ಲದೆ ಸುಮಾರು 10 ವರ್ಷಗಳ ಕಾಲ ದ.ಕ.ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿದ್ದರು.

ಉದ್ಘಾಟನಾ ಸಮಾರಂಭದಲ್ಲಿ ವೇದಿಕೆಯಲ್ಲಿ ಉಪಸ್ಥಿತರಿದ್ದ ಬಿ.ಮಾಧವ ಅವರನ್ನು ಉದ್ಘಾಟನಾ ಭಾಷಣದ ಬಳಿಕ ವೇದಿಕೆಯಲ್ಲಿದ್ದ ಮುಖಂಡರು ಶಾಲು, ಹಾರ, ಫಲತಾಂಬೂಲ ನೀಡಿ ಸನ್ಮಾನಿಸಿದರು. ಅದೊಂದು ಹೃದಯಸ್ಪರ್ಶಿ ಸನ್ನಿವೇಶವಾಗಿತ್ತು.

ನಡುಗುವ ಕೈಯಲ್ಲಿ ಮೈಕ್ ಹಿಡಿದು ಬಿ.ಮಾಧವ ಅವರು ಸನ್ಮಾನಕ್ಕೆ ಉತ್ತರಿಸಿದರು. ತನ್ನನ್ನು ಕರೆಸಿ ಸನ್ಮಾನಿಸಿದಕ್ಕೆ ಕೃತಜ್ಞತೆ ಸಲ್ಲಿಸಿದರು. ದೇಶವನ್ನು ಆಳುತ್ತಿರುವ ಕಾಂಗ್ರೆಸ್ಸಾಗಲೀ, ಬಿಜೆಪಿಯಾಗಲೀ ಎಂದಿಗೂ ಕಾರ್ಮಿಕ ಪರವಿಲ್ಲ. ಅವು ಬಂಡವಾಳಶಾಹಿಪರ ಪಕ್ಷಗಳು. ಅದರಲ್ಲೂ ಇವತ್ತು ಆಡಳಿತದಲ್ಲಿರುವ ಬಿಜೆಪಿ ಫ್ಯಾಸಿಸ್ಟ್ ನಿಲುವಿನ ಪಕ್ಷ. ಕಾರ್ಮಿಕ ವರ್ಗ ಈ ಆಳ್ವಿಕೆಯನ್ನು ದೃಢವಾಗಿ ಎದುರಿಸಬೇಕೆಂದು ಅವರು ಕರೆ ನೀಡಿದರು. ●





ವಾಸುದೇವ್ ಉಚ್ಚಿಲ್

15ನೇ ದ.ಕ. ಸಿಐಟಿಯು ಜಿಲ್ಲಾ ಸಮ್ಮೇಳನ

ದಕ್ಷಿಣ ಕನ್ನಡ ಕಾರ್ಮಿಕರ ಸಂಘಟನೆಯ ಪರಿಸ್ಥಿತಿ

(ಸಮ್ಮೇಳನದ ವರದಿಯ ಆಯ್ದ ಭಾಗಗಳು)



ಜಿಲ್ಲೆಯಲ್ಲಿ ಹಿಂದಿನ ಪರಂಪರಾಗತ ಕೈಗಾರಿಕೆಗಳಾದ ಹಂಚು, ಗೋಡಂಬಿ, ಅಡಿಕೆ ಸಂಸ್ಕರಣ ಇತ್ಯಾದಿ ಕೈಗಾರಿಕೆಗಳು ಹಲವು ವರ್ಷಗಳಿಂದ ಕುಸಿಯುತ್ತಾ ಬಂದಿವೆ. ಅದರಲ್ಲೂ ಮುಖ್ಯವಾಗಿ ಜಿಲ್ಲೆಯ ಪ್ರಮುಖ ಕೈಗಾರಿಕೆಯಾಗಿದ್ದ ಹಂಚು ಕೈಗಾರಿಕೆ ತೀರಾ ಕುಸಿದಿದ್ದು, ಹೆಚ್ಚಿನ ಕಾರ್ಖಾನೆಗಳು ಬಂದ್ ಆಗಿ ಬೆರಳೆಣಿಕೆಯಷ್ಟು ಕಾರ್ಖಾನೆಗಳು ಮಾತ್ರ ಉಳಿದಿವೆ. ಜಿಲ್ಲೆಯ ದೊಡ್ಡ ಸಂಖ್ಯೆಯ ಕಾರ್ಮಿಕರಿಗೆ ಉದ್ಯೋಗ ನೀಡುತ್ತಿರುವ ಬೀಡಿ ಕೈಗಾರಿಕೆ-ಯು ಧೂಮಪಾನ ನಿಷೇಧದಂತಹ ಬೆದರಿಕೆಗಳು ಎದುರಾಗುತ್ತಿರುವ ಈ ಸಂದರ್ಭದಲ್ಲಿ ಈ ಕೈಗಾರಿಕೆ-ಯ ಭವಿಷ್ಯವು ಅನಿಶ್ಚಿತವಾಗಿದೆ. ದೊಡ್ಡ ಗೋಡಂಬಿ ಕೈಗಾರಿಕೆಗಳು ಹಿಂದೆಯೇ ಮುಚ್ಚಿದ್ದು, ಇತ್ತೀಚೆಗೆ ಸಣ್ಣ ಸಣ್ಣ ಕಾರ್ಖಾನೆಗಳು ಗ್ರಾಮಾಂತರದಲ್ಲಿ ಹೊಸದಾಗಿ ಬಂದರೂ ಕೂಡಾ ಕಾರ್ಮಿಕರನ್ನು ದುಡಿಸಿ ಸವಲತ್ತುಗಳನ್ನು ವಂಚಿಸುತ್ತಿವೆ.

ಮುದ್ರಣ ಕೈಗಾರಿಕೆಯಲ್ಲಿ ಆಧುನೀಕರಣ ಬಂದ ಮೇಲೆ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಸಾರಿಗೆ ರಂಗದಲ್ಲಿ ಹಿಂದೆ ಖಾಸಗಿ ಮಾಲಕತ್ವದಲ್ಲಿ ದೊಡ್ಡ ಸಂಸ್ಥೆಗಳಿದ್ದರೆ, ಈಗ ವ್ಯಕ್ತಿ ಮೂಲಕತ್ವದಲ್ಲಿ ಸಾರಿಗೆ ಸಂಸ್ಥೆಗಳು ನಡೆಯುತ್ತಿವೆ. ಇಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಕೆಲಸದ ಮತ್ತು ಸವಲತ್ತುಗಳ ಭದ್ರತೆಯ ಸಮಸ್ಯೆ ಎದುರಾಗಿದೆ. ಇತ್ತೀಚಿನ ವರ್ಷಗಳಲ್ಲಿ ಜಿಲ್ಲೆಯಲ್ಲಿ ಬೆಳೆದು ಬಂದಿರುವ ಕೈಗಾರಿಕೆ ಎಂದರೆ ಅದು ಕಟ್ಟಡ ನಿರ್ಮಾಣ. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ದೊಡ್ಡ ಸಂಖ್ಯೆಯ ಕಾರ್ಮಿಕರು ದುಡಿಯುತ್ತಿದ್ದಾರೆ. ಆದರೆ ಅವರು ಬಹುತೇಕ ಜನ ಸಂಘಟಿತರಾಗಿರುವುದಿಲ್ಲ. ಜಿಲ್ಲೆಯಲ್ಲಿ ಇಂಡಸ್ಟ್ರಿಯಲ್ ಎಸ್ಟೇಟ್‌ಗಳಲ್ಲಿ ಆರಂಭದಲ್ಲಿ ಇದ್ದ ಸಣ್ಣ ಸಣ್ಣ ಕೈಗಾರಿಕೆಗಳು ಈಗ ಮುಚ್ಚಿವೆ. ನವಮಂಗಳೂರು ಬಂದರ್, ರೈಲ್ವೇ ಇತ್ಯಾದಿ ಇದ್ದರೂ ಜಿಲ್ಲೆಯಲ್ಲಿ ದೊಡ್ಡ ಸಂಖ್ಯೆಯ ಕಾರ್ಮಿಕರಿಗೆ ಉದ್ಯೋಗ ಕೊಡುವ ಬೃಹತ್ ಕೈಗಾರಿಕೆಗಳು ಇನ್ನೂ ಬಂದಿಲ್ಲ. ಇದರಿಂದಾಗಿ ಜಿಲ್ಲೆಯಲ್ಲಿ ನಿರುದ್ಯೋಗ ಸಮಸ್ಯೆ ಗಂಭೀರವಾಗಿ ಉಳಿದಿದೆ.

ಜಿಲ್ಲೆಯ ಕಾರ್ಮಿಕ ಸಂಘಟನೆಗಳ ಪೈಕಿ ಸಿಐಟಿಯುಗೆ ಸದಸ್ಯತ್ವದಲ್ಲಿ ಪ್ರಥಮ ಸ್ಥಾನ ಇದ್ದರೂ ಇಡೀ ಜಿಲ್ಲೆಯ ಕಾರ್ಮಿಕರ ಸಂಖ್ಯೆಯನ್ನು ಪರಿಗಣಿಸಿದಲ್ಲಿ ಏನೇನೂ ಅಲ್ಲ. ಸಿಐಟಿಯು ಸದಸ್ಯತ್ವವು ಅಸಂಘಟಿತ ರಂಗದಲ್ಲಿಯೇ ಸೀಮಿತವಾಗಿದೆ. ಘನ ಕೈಗಾರಿಕಗಳಾದ ಎನ್‌ಎಂಪಿಟಿ, ಎಂಆರ್‌ಪಿಎಲ್, ಎಂಸಿಎಫ್, ಲೆಮಿನಾ ಸಂಸ್ಥೆಗಳಲ್ಲಿ ಬಲಪಂಥೀಯ ಕಾರ್ಮಿಕ ಸಂಘಟನೆಗಳಾದ ಇಂಟಕ್, ಬಿಎಂಎಸ್, ಎಚ್‌ಎಂಎಸ್ ಸಂಘಟನೆಗಳ ಪ್ರಾಬಲ್ಯ ಇದೆ. ಮಾತ್ರವಲ್ಲದೆ ಇಲ್ಲಿರುವ ಗುತ್ತಿಗೆ ಕಾರ್ಮಿಕರು ಕೂಡಾ ಅವರ ನಿಯಂತ್ರಣದಲ್ಲಿಯೇ ಇದ್ದಾರೆ. ಅಸಂಘಟಿತ ವಲಯದ ಇತರ ರಂಗಗಳಲ್ಲಿ ಸಿಐಟಿಯು, ಎಐಟಿಯುಸಿ ಮತ್ತು ಬಿಎಂಎಸ್ ಪ್ರಾಬಲ್ಯ ಇದೆ. ಸಿಐಟಿಯುವಿನ 14 ಬೀಡಿ ಸಂಘಗಳಿದ್ದು, ಬೀಡಿ ಕಾರ್ಮಿಕರಲ್ಲಿ 54 ಸಾವಿರ ಸದಸ್ಯತ್ವ ಇದೆ. ಇತ್ತೀಚೆಗೆ ಕಟ್ಟಡ ಕಾರ್ಮಿಕ ರಂಗದಲ್ಲಿ ಆದ್ಯತೆ ನೀಡಿ ಸಂಘಟನೆ ಕಟ್ಟಲಾಗಿದ್ದು, ಕಾನೂನುಬದ್ಧ ಸವಲತ್ತುಗಳನ್ನು ತರಲಾಗಿದ್ದರೂ, ಸಂಘಟನಾತ್ಮಕವಾಗಿ ನಿಗದಿಗೊಳಿಸಲಾಗಿದ್ದ ಹತ್ತುಸಾವಿರ ಸದಸ್ಯತ್ವವನ್ನು ಮುಟ್ಟಲು ಯಶಸ್ವಿಯಾಗಿಲ್ಲ; 5 ಸಾವಿರ ಸದಸ್ಯತ್ವದ ಆಸುಪಾಸಿನಲ್ಲಿಯೇ ಇದೆ.

ವಿಶೇಷವಾಗಿ ಕಾಳಜಿವಹಿಸಿ ವಿಸ್ತರಣೆಗೊಂಡಿರುವ ರಂಗಗಳು– ಬಿಸಿಯೂಟ, ಬೀದಿ ಬದಿ ವ್ಯಾಪಾರಿಗಳು, ಹಮಾಲಿ ಕಾರ್ಮಿಕರು, ಗ್ರಾಮ ಪಂಚಾಯತ್ ನೌಕರರು, ಬಿಎಸ್‌ಎನ್‌ಎಲ್ ಹಾಗೂ ಮೆಸ್ಕಂ ಗುತ್ತಿಗೆ ಕಾರ್ಮಿಕ ವಿಭಾಗ ಮಾತ್ರವಲ್ಲದೆ ಸಾರಿಗೆ ವಿಭಾಗದ ಆಟೋ ರಿಕ್ಷಾ ಚಾಲಕರು.

ಸಾವಿರಾರು ಸಂಖ್ಯೆಯಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ದುಡಿಯುವ ನರ್ಸಿಂಗ್ ಹಾಗೂ ಇತರ ಕಾರ್ಮಿಕರು, ಬಸ್‌ಗಳಲ್ಲಿ ದುಡಿಯುವ ನೌಕರರು, ಗುತ್ತಿಗೆ ಕಾರ್ಮಿಕ ವಿಭಾಗ, ಸೆಕ್ಯುರಿಟಿ ಕಾರ್ಮಿಕರು, ಮನೆಕೆಲಸಗಾರರು, ಅಂಗಡಿ ಮುಗ್ಗಟ್ಟುಗಳಲ್ಲಿ ದುಡಿಯುವ ಕಾರ್ಮಿಕರು ಇವರನ್ನು ಸಂಘಟಿಸಲು ಪ್ರಯತ್ನ ಮುಂದುವರಿಸಬೇಕಾಗಿದೆ.

ಜಿಲ್ಲಾ ಸಿಐಟಿಯು ಸಮಿತಿಯ ವ್ಯಾಪ್ತಿಯಲ್ಲಿ ಉಳ್ಳಾಲ, ಬೆಳ್ತಂಗಡಿ, ಮಂಗಳೂರು ನಗರ, ಗುರುಪುರ, ಮೂಡಬಿದ್ರಿ, ಬಂಟ್ವಾಳಗಳಲ್ಲಿ ವಲಯ ಸಮಿತಿಗಳು ಕಾರ್ಯ ನಿರ್ವಹಿಸುತ್ತಿವೆ. ಸುಳ್ಯ ಮತ್ತು ಪುತ್ತೂರು ತಾಲೂಕುಗಳಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳಿದ್ದರೂ ಇನ್ನಷ್ಟೇ ವಲಯ ಸಮಿತಿ ರಚಿಸಿಕೊಳ್ಳಬೇಕಾಗಿದೆ.

ಸುಮಾರು 50 ಸಾವಿರ ಸದಸ್ಯರುಳ್ಳ 14 ಸಂಘಟನೆಗಳನ್ನೊಳಗೊಂಡ ದ.ಕ.ಜಿಲ್ಲಾ ಬೀಡಿ ವರ್ಕರ್ಸ್ ಫೆಡರೇಶನ್ 100ಕ್ಕೆ 99 ಭಾಗ ಮಹಿಳಾ ಕಾರ್ಮಿಕರನ್ನೊಳಗೊಂಡ ಸಂಘಟನೆ. ಕಳೆದ ಸಿಐಟಿಯು ಸಮ್ಮೇಳನದಿಂದೀಚೆಗಿನ ಮೂರುವರೆ ವರ್ಷಗಳ ಅವಧಿಯಲ್ಲಿ ಸ್ಕಾಲರ್‌ಶಿಪ್ ಬಗ್ಗೆ, ಬಾಕಿ ತುಟ್ಟಿಭತ್ತೆ ಬಗ್ಗೆ ಹೋರಾಟಗಳನ್ನು ಮಾಡಿದ್ದಲ್ಲದೆ, 2015 ರಿಂದ ಕೇಂದ್ರ ಸರಕಾರ ಅನುಷ್ಠಾನಕ್ಕೆ ತರುತ್ತಿರುವ ಕೋಟ್ಪಾ ಕಾಯಿದೆ ಹಿಂತೆಗೆಯಬೇಕೆಂದು ಆಗ್ರಹಿಸಿ, ಇಲ್ಲವೇ ಪರ್ಯಾಯ ಉದ್ಯೋಗ ಬೀಡಿ ಕಾರ್ಮಿಕರಿಗೆ ನೀಡಬೇಕೆಂದು ಆಗ್ರಹಿಸಿ ತೀವ್ರ ಥರದ ಹೋರಾಟಗಳನ್ನು ನಡೆಸುತ್ತಿದೆ. ಬೀಡಿ ಉದ್ಯಮ ರದ್ದಾಗಲಿದೆ ಎಂಬ ಭಯ ಕಾರ್ಮಿಕರಲ್ಲಿ ಹುಟ್ಟಿದ್ದು, ಕಳೆದೆರಡು ವರ್ಷಗಳಿಂದ ಬೀಡಿ ಕಾರ್ಮಿಕ ಸಂಘಟನೆಯ ಸದಸ್ಯತ್ವವೂ ಸ್ವಲ್ಪ ಇಳಿಮುಖವಾಗಿದೆ.

ಮೂರು ವರ್ಷಗಳ ಹಿಂದೆ 3,500 ಸದಸ್ಯತ್ವದಿಂದ ಆರಂಭವಾದ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಸಂಘಟನೆ ಸದಸ್ಯತ್ವ ಕಳೆದೆರಡು ವರ್ಷಗಳಲ್ಲಿ 5000 ಕ್ಕೆ ಏರಿಕೆಯಾಗಿದೆ. ಸದಸ್ಯತ್ವದಲ್ಲಿ ಎರಡನೇ ಸಂಘಟನೆ ಇದಾಗಿದ್ದರೂ, ಇದರ ದುಪ್ಪಟ್ಟು ಸದಸ್ಯತ್ವ ಗುರಿ ಈಗಾಗಲೇ ತಲುಪಬೇಕಿತ್ತು. ಕಾರ್ಮಿಕ ಇಲಾಖಾ ಕಚೇರಿಯಲ್ಲಿ ಸಾಕಷ್ಟು ಸಿಬ್ಬಂದಿ ನೇಮಕ ಮಾಡದಿರುವ ಸರಕಾರದ ನೀತಿಯಿಂದಾಗಿ ಕಾರ್ಮಿಕರಿಗೆ ಸೌಲಭ್ಯಗಳು ಸಕಾಲದಲ್ಲಿ ತಲುಪುವಲ್ಲಿ ವಿಳಂಬವಾಗುತ್ತಿದೆ. ಮಂಗಳೂರು ನಗರ, ಉಳ್ಳಾಲ, ಮೂಡಬಿದ್ರಿ, ಬೆಳ್ತಂಗಡಿ, ಸುಳ್ಯಗಳಲ್ಲಿ ವಲಯ ಸಮಿತಿಗಳು ಕೆಲಸ ಮಾಡುತ್ತಿವೆ. ಗುರುಪುರ, ಬಂಟ್ವಾಳ, ಪುತ್ತೂರುಗಳಲ್ಲಿ ವಲಯ ಸಮಿತಿ ರಚಿಸಬೇಕಿದೆ. ಮುಂದಿನ ದಿನಗಳಲ್ಲಿ ಸಿಐಟಿಯು ಅಡಿಯಲ್ಲಿ ಮುಂಚೂಣಿಯಲ್ಲಿ ನಿಲ್ಲಬಲ್ಲ ಈ ಸಂಘಟನೆಯನ್ನು ಬೆಳೆಸುವ ಅಗತ್ಯ ಇದೆ.

1000 ಕ್ಕೂ ಮೀರಿ ಸದಸ್ಯತ್ವ ಹೊಂದಿರುವ ಅಕ್ಷರದಾಸೋಹ ಕಾರ್ಮಿಕರ ಜಿಲ್ಲಾ ಸಂಘಟನೆ ಸದಸ್ಯತ್ವದಲ್ಲಿ ಮೂರನೇ ಸ್ಥಾನದಲ್ಲಿದೆ. ಜಿಲ್ಲಾ ಮಟ್ಟದಲ್ಲಿ ತಾಲೂಕು ಮಟ್ಟದಲ್ಲಿ ಬೇಡಿಕೆಗಳಿಗಾಗಿ ಒತ್ತಾಯಿಸಿ ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದಾರೆ. ತಾಲೂಕು ಮಟ್ಟದ ಸಂಘಟನೆಗಳು ಇನ್ನಷ್ಟೇ ರಚನೆಯಾಗಬೇಕಿದೆ.

ಅಂಗನವಾಡಿ ನೌಕರರ ಸಂಘಟನೆಯಲ್ಲಿ ಸದಸ್ಯತ್ವ ಮೂರು ತಾಲೂಕುಗಳಲ್ಲಿ ಸ್ವಲ್ಪ ಮಟ್ಟಿಗಿದೆ. ಆದರೆ ಅಷ್ಟೇ ಮಂದಿ ಸಂಘಟನೆಯ ರಾಜ್ಯ ಸಮಿತಿ ಕರೆಯ ಮೇರೆಗೆ 2016 ಫೆಬ್ರವರಿ 2 ರಿಂದ ಫೆಬ್ರವರಿ 11ರ ವರೆಗೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಹಮಾಲಿ ಕಾರ್ಮಿಕರಲ್ಲಿ ಹಲವಾರು ವಿಭಾಗದ ಕಾರ್ಮಿಕರ ಹೋರಾಟ ವೇತನ ಏರಿ-ಕೆಗಾಗಿ ನಡೆದಿರುತ್ತದೆ; ಸಂಧಾನ ನಡೆದು ಕಾರ್ಮಿಕರು ಉತ್ತಮ ವೇತನ ಪಡೆಯುವಂತಾಗಿದೆ. ಸುಮಾರು 700 ಕಾರ್ಮಿಕರಿರುವ ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ಕಾರ್ಮಿಕರು ವೇತನ ಪರಿಷ್ಕರಣೆಗಾಗಿ ನಡೆಸಿದ ಹೋರಾಟಗಳಲ್ಲಿ ಲೆಮಿನಾ ಫೌಂಡ್ರಿಸ್ ನಿಟ್ಟೆ, ಕೆನರಾ ವರ್ಕ್‌ಶಾಪ್ ಮತ್ತರು ಚಿರಮಿತ್ ಸಂಸ್ಥೆಗಳಲ್ಲಿ ವೇತನ ಹೆಚ್ಚಳ ಪಡೆಯಲಾಗಿದೆ. ಅಖಿಲ ಭಾರತ ಮುಷ್ಕರಗಳಲ್ಲೂ ಟ್ರಾನ್ಸ್‌ಪೋರ್ಟ್ ಮತ್ತು ಇಂಜಿನಿಯರಿಂಗ್ ಕಾರ್ಮಿಕರು ಭಾಗವಹಿಸಿದ್ದಾರೆ. ಆಟೋ ರಿಕ್ಷಾ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು, ಮೆಸ್ಕಾಂ ಗುತ್ತಿಗೆ ನೌಕರರು, ಗ್ರಾಮ ಪಂಚಾಯತ್ ನೌಕರರು, ಇತರೇ ಗುತ್ತಿಗೆ ಕಾರ್ಮಿಕರ ಹೋರಾಟಗಳಿಗೆ ಕಳೆದ ಅವಧಿಯಲ್ಲಿ ಸಿಐಟಿಯು ನೇತೃತ್ವ ನೀಡಿದೆ.

ಬೀದಿ ಬದಿ ವ್ಯಾಪಾರಿಗಳು ಮಂಗಳೂರಿನಲ್ಲಿ ಸಂಘ ರಚಿಸಿ ನಡೆಸಿದ ಹೋರಾಟವು ಈ ಅವಧಿಯಲ್ಲಿ ಎದ್ದು ಕಾಣುವಂಥದ್ದು. ಸಂಘವನ್ನು ಇನ್ನೂ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲು ಸಾಧ್ಯವಾಗಿಲ್ಲ. ಹೋರಾಟದ ಫಲವಾಗಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಟೌನ್‌ವೆಂಡರ್ಸ್ ಕಮಿಟಿ ರಚನೆಯಾಗಿದ್ದು ಸಂಘದ 8 ಮಂದಿ ಪ್ರತಿನಿಧಿಗಳು ಇದ್ದಾರೆ. ಪಾಲಿಕೆಯಿಂದ ಬೀದಿ ಬದಿ ವ್ಯಾಪಾರಿಗಳು ಗುರುತು ಚೀಟಿ ಪಡೆಯುತ್ತಿದ್ದಾರೆ.

ಬೀಡಿ ಮತ್ತು ಇತರ ಸಂಸ್ಥೆಗಳಲ್ಲಿ ದುಡಿಯುತ್ತಿರುವ ಪ್ರಾವಿಡೆಂಟ್ ಫಂಡ್ ಸದಸ್ಯರಾಗಿರುವ ನಿವೃತ್ತ ಕಾರ್ಮಿಕರಿಗೆ ಕನಿಷ್ಟ ಜೀವನಾವಶ್ಯಕ ಪಿಂಚಣಿ ಖಾತರಿಗಾಗಿ ಆಗ್ರಹಿಸಿ ಇಪಿಎಫ್ ಪಿಂಚಣಿದಾರರ ಸಂಘವನ್ನು ರಾಜ್ಯದಲ್ಲಿ ಮೊತ್ತಮೊದಲ ಬಾರಿಗೆ ದ.ಕ.ಜಿಲ್ಲೆಯಲ್ಲೇ ಸಂಘಟಿಸಲಾಯಿತು. ಜಿಲ್ಲೆಯ ಸಂಘಟನೆ ಬೇರೆ ಬೇರೆ ರಾಜ್ಯಗಳಲ್ಲಿ ರಚಿಸಿಕೊಂಡಿದ್ದ ಸಂಘಗಳೊಂದಿಗೆ ಹೋರಾಡಿದ್ದರಿಂದ ಸರಕಾರ ಕನಿಷ್ಟ ಪಿಂಚಣಿಯನ್ನು ರೂ.1000 ನಿಗದಿಗೊಳಿಸಿದೆ. ಪಿಂಚಣಿ ಹೆಚ್ಚಳ ಹಾಗೂ ಇತರ ಬೇಡಿಕೆಗಳನ್ನು ಸಂಘವು ಮುಂದಿಡುತ್ತಿದ್ದು, ಈ ಸಂಘವನ್ನು ಮಧ್ಯವರ್ತಿ ಸಮಿತಿಗಳು ರಚಿಸಿ ಸಕ್ರಿಯಗೊಳಿಸಬೇಕಾಗಿದೆ.

ಹಲವು ಉದ್ಯಮದ ಕಾರ್ಮಿಕರು ಒಂದೇ ಗ್ರಾಮದಲ್ಲಿ ಇಲ್ಲವೇ ನಗರದ ಒಂದೇ ವಾರ್ಡಿನಲ್ಲಿ ವಾಸವಾಗಿರುತ್ತಾರೆ. ಈ ನಿಟ್ಟಿನಲ್ಲಿ ಎಲ್ಲಾ ಸಂಘಟನೆಗಳ ಪ್ರತಿನಿಧಿಗಳು ಇರುವ ಹಾಗೆ ಸಿಐಟಿಯು ಗ್ರಾಮ ಸಮಿತಿಗಳನ್ನೂ, ವಾರ್ಡ್ ಸಮಿತಿಗಳನ್ನೂ ರಚಿಸಬೇಕಾಗಿದೆ.

(ಇತರ ವಿವರಗಳು ಪುಟ 16 ರಲ್ಲಿ)


ನಿರ್ಣಯಗಳು

ಸಿಐಟಿಯು ದ.ಕ.ಜಿಲ್ಲಾ ಸಮ್ಮೇಳನವು ಕೆಲವು ಮುಖ್ಯ ನಿರ್ಣಯಗಳನ್ನು ಕೈಗೊಂಡಿದೆ–

* ಬೀಡಿ ಕಾರ್ಮಿಕರ ಉದ್ಯೋಗವನ್ನೇ ಕಿತ್ತುಕೊಳ್ಳಲಿರುವ ಕೋಟ್ಪಾ ಕಾಯಿದೆಯನ್ನು ಕೇಂದ್ರ ಸರಕಾರ ಹಿಂತೆಗೆದುಕೊಳ್ಳಬೇಕು. ಜ್ಯಾರಿ ಮಾಡುವುದೇ ಆದರೆ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಒದಗಿಸಬೇಕು.
* ಕಟ್ಟಡ ಕಾರ್ಮಿಕರಿಗೆ ರಾಜ್ಯ ಕಲ್ಯಾಣ ಮಂಡಳಿಯಿಂದ ಸಿಗತಕ್ಕ ಸವಲತ್ತುಗಳನ್ನು ಸರಕಾರ ನೀಡಬೇಕು.
* ಸಪ್ಟೆಂಬರ್ 2 ರಂದು ಹಮ್ಮಿಕೊಂಡಿರುವ ಅಖಿಲ ಭಾರತ ಮುಷ್ಕರವನ್ನು ಕಾರ್ಮಿಕರು ಯಶಸ್ವಿಗೊಳಿಸಲು
* ನಿವೇಶನ ರಹಿತರು ನಿವೇಶನ ನೀಡಬೇಕೆಂದು ಆಗ್ರಹಿಸುತ್ತಿರುವ ಹೋರಾಟಕ್ಕೆ ಬೆಂಬಲ.
* ಪೋಲೀಸರ ಬೇಡಿಕೆಗಳಿಗೆ ಸ್ಪಂದಿಸಿ ಅವನ್ನು ಈಡೇರಿಸಲು ಕರೆ
* ರೂ.18 ಸಾವಿರ ಕನಿಷ್ಟ ಕೂಲಿಗೆ ಆಗ್ರಹ
* ದ.ಕ.ಜಿಲ್ಲೆಯಲ್ಲಿ ಖಾಸಗಿ ಸಾರಿಗೆ ಸಿಬ್ಬಂದಿಗಳಿಗೆ ಸೂಕ್ತ ವೇತನ ಇತರೆ ಭತ್ತೆಗಳಲ್ಲದೆ ಕೇಂದ್ರ ಬಸ್ ನಿಲ್ದಾಣಗಳಲ್ಲಿ ವಿಶ್ರಾಂತಿ ಭವನ ನಿರ್ಮಿಸಬೇಕು.
* ಅಕ್ಷರ ದಾಸೋಹ ನೌಕರರಿಗೆ ವೇತನ ಹೆಚ್ಚಳ ಹಾಗೂ ಸಾಮಾಜಿಕ ಭದ್ರತೆಗಾಗಿ ಆಗ್ರಹ
* ಕಾರ್ಮಿಕ ಇಲಾಖೆಗೆ ಸ್ವಂತ ಕಟ್ಟಡ ಕಾರ್ಮಿಕ ಭವನ ಸರಕಾರ ನಿರ್ಮಿಸಬೇಕು.
* ಎತ್ತಿನಹೊಳೆ ಯೋಜನೆಗೆ ವಿರೋಧ ಖಂಡಿಸಿ, ದ.ಕ. ನದಿಗಳಿಗೆ ಕಿಂಡಿ ಅಣೆಕಟ್ಟುಗಳನ್ನು ಕಟ್ಟುವ ಸಮಗ್ರ ನೀರು ಯೋಜನೆ ರೂಪಿಸಲು ಆಗ್ರಹಿಸಿ.
* ಪಿಎಫ್ ಪಿಂಚಣಿದಾರರ ಪಿಂಚಣಿಯನ್ನು ಮಾಸಿಕ ರೂ. 3000 ಕ್ಕೇರಿಸಬೇಕು.
* ಇಎಸ್‌ಐ ಯನ್ನು ಬಲಪಡಿಸಲು ಸಿಬ್ಬಂದಿ ಪರಿಕರ ಒದಗಿಸಬೇಕು.
* ಬೀದಿ ಬದಿ ವ್ಯಾಪಾರಸ್ಥರಿಗೆ ಮಂಗಳೂರು ಮಹಾನಗರ ಪಾಲಿಕೆಯು ಸೂಕ್ತ ವೆಂಡಿಂಗ್ ಝೋನ್‌ಗಳನ್ನು ಗುರುತಿಸಿ ಪರ್ಯಾಯ ವ್ಯವಸ್ಥೆ ಒದಗಿಸಬೇಕು.
* ಅಂಗನವಾಡಿ ನೌಕರರ ಗೌರವಧನ ಹೆಚ್ಚಿಸಬೇಕು.

ತೀರ್ಥಹಳ್ಳಿ ವಾಮನಭಟ್ ಲಾಲ್ ಸಲಾಮ್

ಕೆ. ಪ್ರಭಾಕರನ್



ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಕಮ್ಯೂನಿಷ್ಟ್ ಚಳುವಳಿಯ ನೇತಾರರೂ ಆಗಿದ್ದ ತೀರ್ಥಹಳ್ಳಿ ಕಾ| ವಾಮನಭಟ್‌ರವರು ದಿನಾಂಕ 5–6–2016ರಂದು ಗುರುವಾರ ತಮ್ಮ 92ನೇಯ ಇಳಿವಯಸ್ಸಿನಲ್ಲಿ ಶಿವಮೊಗ್ಗದ ತಮ್ಮ ಸ್ವಗೃಹದಲ್ಲಿ ಮಧ್ಯಾಹ್ನ 3.30ಕ್ಕೆ ನಿಧನರಾಗಿದ್ದಾರೆ. ಅವರು ಪತ್ನಿ ಶ್ರೀಮತಿ ಸುಕನ್ಯ ವಿ ಭಟ್‌ರವರನ್ನೂ ಮೂವರು ಗಂಡುಮಕ್ಕಳನ್ನೂ ಅಸಂಖ್ಯಾತ ಸಂಗಾತಿಗಳನ್ನೂ ಅಗಲಿದ್ದಾರೆ. ಅವರ ಮೂವರು ಗಂಡುಮಕ್ಕಳಲ್ಲಿ ಹಿರಿಯರಿಬ್ಬರೂ ಅಮೇರಿಕದಲ್ಲೂ ಕಿರಿಯ ಮಗ ಶಿವಮೊಗ್ಗದಲ್ಲೇ ಡಾಕ್ಟರ್‌ವೃತ್ತಿಯಲ್ಲೂ ಸೇವೆ ಸಲ್ಲಿಸುತ್ತಿದ್ದಾರೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕು ಅರವತ್ತರ ದಶಕದಲ್ಲಿ ರೈತಹೋರಾಟ ಹಾಗೂ ಕಮ್ಯೂನಿಷ್ಟ್ ಚಳುವಳಿಯ ಪ್ರಮುಖ ಕೇಂದ್ರವಾಗಿತ್ತು. ಆರಂಭದಲ್ಲಿ ರೈತಚಳುವಳಿಗಳಲ್ಲಿ ಸಕ್ರಿಯವಾಗಿ ಇತರೆ ಸಂಗಾತಿಗಳೊಂದಿಗೆ ಭಾಗವಹಿಸಿ ಸಣ್ಣರೈತರ, ಗೇಣಿದಾರರ ಬಡಬೀಡಿ ಕಾರ್ಮಿಕರ ಹಾಗೂ ಇತರೆ ಕೂಲಿ ಕಾರ್ಮಿಕರ ಪರವಾಗಿ ಭೂಮಾಲಕರ ವಿರುದ್ಧ ಪ್ರಬಲ ಹೋರಾಟ ನಡೆಸಿ ಹೋರಾಟದ ಕಿಚ್ಚನ್ನು ಹಚ್ಚಿದ್ದರು. ಇವರ ಹಾಗೂ ಇವರ ಇತರೆ ಸಂಗಾತಿಗಳ ಹೋರಾಟದ ಫಲವಾಗಿ ಇಂದು ಅನೇಕ ಅಂದಿನ ಗೇಣಿದಾರರು ಭೂಮಿಯ ಒಡೆತನ ಪಡೆದುಕೊಂಡು ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ. ಬೀಡಿ ಕಾರ್ಮಿಕರು ಸರ್ಕಾರ ನಿಗದಿ ಪಡಿಸಿದ ಕನಿಷ್ಠ ಕೂಲಿಯ ಲಾಭ ಪಡೆದುಕೊಂಡಿದ್ದಾರೆ. ಕಮ್ಯೂನಿಷ್ಟ್ ಚಳುವಳಿಯ ಭಾಗವಾಗಿ ಇವರು ನಡೆಸಿದ ರೈತ ಹೋರಾಟವು ಶಿವಮೊಗ್ಗ ಜಿಲ್ಲೆಯ ಇತರೆ ಭಾಗಗಳಿಗೂ ವ್ಯಾಪಿಸಿತ್ತು ಹಾಗೂ ಚಳುವಳಿಯನ್ನು ಜಿಲ್ಲೆಯಲ್ಲಿ ಜೀವಂತವಾಗಿಡಲು ತೀರ್ಥಹಳ್ಳಿಯ ಹೋರಾಟಗಳು ಪ್ರಮುಖ ಕಾರಣವಾಯಿತು. ಇವರ ಹೋರಾಟದ ಮಜಲುಗಳು ರೋಚಕತೆಯಿಂದ ಕೂಡಿದ್ದು ನಮ್ಮ ಇಂದಿನ ಯುವಪೀಳಿಗೆಗೆ ಮಾರ್ಗದರ್ಶನ ಹಾಗೂ ಪ್ರೇರಣೆ ನೀಡುವಂತಾಹದ್ದಾಗಿರುತ್ತದೆ.

ತೀರ್ಥಹಳ್ಳಿ ವಾಮನಭಟ್ ಇದು ಇವರ ಪೂರ್ಣನಾಥೇಯ. ಇವರು ದಿನಾಂಕ 1–12–1925ರಲ್ಲಿ ತೀರ್ಥಹಳ್ಳಿ ತಾಲೂಕಿನ ಕೌರಿಹಕ್ಲು ಎಂಬ ಗ್ರಾಮದಲ್ಲಿ ಜನಿಸಿದರು. ಇವರು ತಮ್ಮ ಎಸ್‌ಎಸ್‌ಎಲ್‌ಸಿ ವರೆಗಿನ ವಿದ್ಯಾಭ್ಯಾಸವನ್ನು ತೀರ್ಥಹಳ್ಳಿಯಲ್ಲೆ ಮುಗಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಇಲ್ಲದಿದ್ದರಿಂದ ತೀರ್ಥಹಳ್ಳಿಯಲ್ಲಿ ಆರಂಭದಲ್ಲಿ ಪ್ರಿಂಟಿಂಗ್ ಪ್ರೆಸ್ ಹಾಗೂ ನಂತರದ ದಿನಗಳಲ್ಲಿ ಸ್ಟುಡಿಯೋವನ್ನೂ ಆರಂಭಿಸಿ ತಮ್ಮ ವೃತ್ತಿ–ಜೀವನ ಪ್ರಾರಂಭಿಸಿದರು. ಪ್ರೆಸ್ಸಿಗೂ ಸ್ಟುಡಿಯೋಗೂ ಬರುವ ಗ್ರಾಮೀಣ ಭಾಗದ ಬಡರೈತರೂ ಗೇಣಿದಾರರೂ ಕೂಲಿ ಕಾರ್ಮಿಕರೂ ಬೀಡಿ ಕಾರ್ಮಿಕರೂ ಇವರುಗಳ ಸಂಪರ್ಕದಿಂದ ಬಡಜನತೆಯ ಸಮಸ್ಯೆಗಳನ್ನು ಹತ್ತಿರದಿಂದ ತಿಳಿಯಲು ಸಾಧ್ಯವಾಯಿತು. ಕಾ| ವಾಮನ ಭಟ್‌ರವರ ಬಗ್ಗೆ ಹೇಳಬೇಕಾದರೆ ಶಿವಮೊಗ್ಗ ಜಿಲ್ಲೆಯ ರೈತಚಳುವಳಿ ಹಾಗೂ ಕಮ್ಯೂನಿಷ್ಟ್ ಚಳುವಳಿಗಳ ಬಗ್ಗೆ ಹೇಳಲೇಬೇಕಾಗುತ್ತದೆ. ಇತರೆ ಸಂಗಾತಿಗಳೊಂದಿಗೆ ಅವರು ನಡೆಸಿದ ರೈತ ಚಳುವಳಿ ಕಾರ್ಮಿಕ ಚಳುವಳಿ ಹಾಗೂ ಕಮ್ಯೂನಿಷ್ಟ್ ಚಳುವಳಿಗಳು ಜಿಲ್ಲೆಯಲ್ಲಿ ನಡೆದ ಚರಿತ್ರಾರ್ಹ ಚಳುವಳಿಗಳ ಭಾಗವೇ ಆಗಿರುತ್ತದೆ.

ಅರವತ್ತರ ದಶಕದಲ್ಲಿ ಶಿವಮೊಗ್ಗದಲ್ಲಿ ಕಮ್ಯೂನಿಷ್ಟ್ ಚಳುವಳಿ ರೂಪುಗೊಳ್ಳ ತೊಡಗಿತ್ತು. ತೀರ್ಥಹಳ್ಳಿ ತಾಲೂಕಿನಲ್ಲಿ ರೈತಸಂಘದ ನೇತೃತ್ವದಲ್ಲಿ ಗೇಣಿದಾರರ ಪರವಾಗಿ ಹೋರಾಟದ ಸೂಚನೆಗಳನ್ನು ಕಾಣಬಹುದಾಗಿತ್ತು. ಶಿವಮೊಗ್ಗದಲ್ಲಿ ಜಿಲ್ಲಾ ಕಾರ್ಯದರ್ಶಿಯಾಗಿದ್ದ ದಿವಂಗತ ಕಾ| ಚಂದು ಕುಟ್ಟಿಯವರ ನೇತೃತ್ವದಲ್ಲಿ ಕಮ್ಯೂನಿಷ್ಟ್ ಪಕ್ಷ ಸಂಘಟನಾತ್ಮಕವಾಗಿ ಕಾರ್ಯರೂಪಕ್ಕೆ ಇಳಿದಿತ್ತು. ಇದೇ ಸಂದರ್ಭದಲ್ಲಿ ತೀರ್ಥಹಳ್ಳಿ ಮೂಲದ ಯುವ ವಕೀಲರಾದ ಕಾ| ಅಪ್ಪಣ್ಣ ಹೆಗಡೆ, ಕಾ| ಕೆ ಎಂ ಶ್ರೀನಿವಾಸ ಗೌಡರು ಜೊತೆಯಾಗಿ ರೈತರನ್ನು, ಮುಖ್ಯವಾಗಿ ಸಂಕಟಕ್ಕೊಳಗಾದ ಗೇಣಿದಾರರನ್ನು ಸಂಘಟಿಸಿ ಗೂಂಡಗಿರಿ ಮಾಡುತ್ತಿದ್ದ ಭೂಮಾಲಕರ ವಿರುದ್ಧ ಹೋರಾಟಕ್ಕೆ ಅಣಿಗೊಳಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಈ ರೈತಸಂಘದ ಸಂಪರ್ಕಕ್ಕೆ ಕಾ| ವಾಮನಭಟ್‌ರವರೂ ಬಂದು ಸಂಘವನ್ನು ಗಟ್ಟಿಗೊಳಿಸಿದರು. ಇವರು ತೀರ್ಥಹಳ್ಳಿಯ ಪೇಟೆಯಲ್ಲಿ ಫೋಟೋ ಸ್ಟುಡಿಯೋ ಹಾಗೂ ಪ್ರಿಂಟಿಂಗ್ ಪ್ರೆಸ್ ನಡೆಸುತ್ತಿದ್ದರಿಂದ ಇಲ್ಲಿಗೆ ಬರುತ್ತಿದ್ದ ಸಾರ್ವಜನಿಕರ ಸಂಪರ್ಕದಿಂದಾಗಿ ಬಡರೈತರ ಗೇಣಿದಾರರ ಸಂಕಟಗಳ ಅರಿವು ಪಡೆದು ಸಂಘಟನೆಯ ಅವಶ್ಯಕತೆ ಹಾಗೂ ಅನಿವಾರ್ಯತೆಗಳನ್ನು ಕಂಡುಕೊಂಡರು.

1957ರ ಸಾರ್ವತ್ರಿಕ ಚುನಾವಣೆಯಲ್ಲಿ ಕೇರಳದಲ್ಲಿ ಪ್ರಪಂಚದ ಚುನಾವಣಾ ರಾಜಕೀಯದ ಇತಿಹಾಸದಲ್ಲೇ ಪ್ರಥಮವಾಗಿ ಇ.ಎಂ.ಎಸ್. ನಂಬೂದರಿಪಾಡ್‌ರವರ ನೇತೃತ್ವದಲ್ಲಿ ಕಮ್ಯೂನಿಷ್ಟ್ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಇದು ಜಿಲ್ಲೆಯಾದ್ಯಂತ ವಿದ್ಯುತ್ ಸಂಚಲನ ಉಂಟುಮಾಡಿತು, ಇದರಿಂದ ಸ್ಫೂರ್ತಿಗೊಂಡ ಕಾ| ಅಪ್ಪಣ್ಣ ಹೆಗಡೆ, ಕಾ| ಶ್ರೀನಿವಾಸ ಗೌಡ, ಕಾ| ಚಂದುಕುಟ್ಟಿ, ಕಾ| ವಾಮನ ಭಟ್ ಮತ್ತಿತರ ಸಂಗಾತಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಹಾಗೂ ವಿಶೇಷವಾಗಿ ತೀರ್ಥಹಳ್ಳಿ ತಾಲೂಕಿನಲ್ಲಿ ಕಮ್ಯೂನಿಷ್ಟ್ ಚಳುವಳಿಯನ್ನು ತೀವ್ರಗೊಳಿಸುವುದರಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನಂತರ ಶಿವಮೊಗ್ಗದ ಮತ್ತೋರ್ವ ಯುವ ವಕೀಲ ಕಾ| ಜಿ ಎಸ್ ನಾಗರಾಜ್‌ರವರೂ ಈ ಕಮ್ಯೂನಿಷ್ಟ್ ಚಳುವಳಿಗಳಲ್ಲಿ ಭಾಗವಹಿಸ ತೊಡಗಿದರು ಹಾಗೂ ತೀರ್ಥಹಳ್ಳಿ ತಾಲೂಕಿನಲ್ಲಿ ಸಂಘಟನೆಗೆ ಹೆಚ್ಚಿನ ಬಲ ತುಂಬಿಕೊಡುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು.

ಆರಂಭದಲ್ಲಿ ತೀರ್ಥಹಳ್ಳಿಯಲ್ಲಿ ಸೋಷಲಿಷ್ಟ್ ಪಕ್ಷದ ಪ್ರಭಾವ ಸಾಕಷ್ಟಿತ್ತು. ಆದರೂ ಕಾ| ಶ್ರೀನಿವಾಸ ಗೌಡ, ಕಾ| ಅಪ್ಪಣ್ಣ ಹೆಗಡೆ, ಇವರುಗಳು ಸುಮ್ಮನೆ ಕೂರದೆ ರೈತಸಂಘದ ಚಟುವಟಿಕೆಗಳನ್ನು ಚುರುಕುಗೊಳಿಸುತ್ತಲೇ ಇದ್ದರು. ಇವರಿಗೆ ಬೆನ್ನೆಲುಬಾಗಿ ನಿಂತವರು ಕಾ| ವಾಮನಭಟ್‌ರವರು. ನಂತರ ಕಾ| ಅಪ್ಪಣ್ಣ ಹೆಗಡೆ ಹಾಗೂ ಕಾ| ಶ್ರೀನಿವಾಸ ಗೌಡರು ಶಿವಮೊಗ್ಗೆಯ ವಕೀಲಿ ವೃತ್ತಿಯನ್ನು ತ್ಯಜಿಸಿ ರೈತರ ಗೇಣಿದಾರರ ಸಂಘಟನೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡರು. ಆಗ ಕಾ| ವಾಮನಭಟ್ಟರು, ಕಾ| ಷೇಕ್ ಆಹಮ್ಮದ್‌ರವರು ಹಾಗೂ ಇನ್ನಿತರ ಸಂಗಾತಿಗಳು ಸಂಘಟನಾತ್ಮಕವಾಗಿ ಒಂದುಗೂಡಿ ತೀರ್ಥಹಳ್ಳಿಯಲ್ಲಿ ಕಾ| ಅಪ್ಪಣ್ಣ ಹೆಗಡೆಯವರ ಸಲಹೆಯಂತೆ ಮತ್ತು ಅವರ ಸಹಕಾರದಿಂದ ಪ್ರಬಲವಾದ ರೈತಸಂಘಟನೆಯನ್ನು ಹುಟ್ಟು ಹಾಕಿದರು. ಸಂಘಟನೆಯ ಮೂಲಕ ರೈತರ ಗೇಣಿದಾರರ ಸಮಸ್ಯೆಗಳಿಗೆ ಸ್ಪಂದಿಸಿ ಹೋರಾಟದ ಮೂಲಕ ಪರಿವಾರ ಕಂಡುಕೊಳ್ಳುವಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಗೇಣಿದಾರರಿಗೆ ನ್ಯಾಯಯುತವಾಗಿ ಮತ್ತು ಕಾನೂನು ರೀತ್ಯ ಗೇಣಿಯನ್ನು ಭೂಮಾಲಕರಿಗೆ ಪಾವತಿಸಲು ಸೂಕ್ತ ಸಲಹೆಗಳನ್ನೂ ನೀಡಲಾಯಿತು. ಕಾನೂನು ಜ್ಯಾರಿಯಲ್ಲಿ ಸೂಕ್ತ ರಕ್ಷಣೆಗಳನ್ನು ಒದಗಿಸಲಾಯಿತು. ಈ ಮಧ್ಯೆ ಭೂಮಾಲಕರಿಂದ ದಬ್ಬಾಳಿಕೆಗಳನ್ನು ಎದುರಿಸಬೇಕಾಯಿತು. ಆದರೆ ಸಂಘಟಿತ ರೈತಸಂಘದ ಹೋರಾಟದ ಮೂಲಕ ದಬ್ಬಾಳಿಕೆಗಳನ್ನು ಹತ್ತಿಕ್ಕಲಾಯಿತು. ಅನೇಕ ಅಹಿತಕರ ಘಟನೆಗಳು ಸಂಘರ್ಷಗಳು ನಡೆದು ಇಡೀ ಜಿಲ್ಲೆಯ ಹಾಗೂ ರಾಜ್ಯದ ಗಮನ ಸೆಳೆಯುವಲ್ಲಿ ಯಶಸ್ಸು ಪಡೆಯಿತು.

ದೇವರಾಜ ಅರಸು ಸರ್ಕಾರ ಭೂಸುಧಾರಣೆಯನ್ನು ಜಾರಿಗೊಳಿಸಿದಾಗ ಗೇಣಿದಾರರ ಪರವಾಗಿ ಕಾ| ವಾಮನಭಟ್ಟರು, ಕಾ| ಶ್ರೀನಿವಾಸ ಗೌಡರು, ಹಾಗೂ ಕಾ| ಅಪ್ಪಣ್ಣ ಹೆಗಡೆರವರು ಪ್ರಮುಖ ಪಾತ್ರವಹಿಸಿ, ನ್ಯಾಯಾಲಯ ಮತ್ತು ಟ್ರಿಬ್ಯೂನಲ್‌ಗಳಿಗೆ ಗೇಣಿದಾರ ಪರವಾಗಿ ಹಾಜರಾಗಿ ಗೇಣಿದಾರರನ್ನು ಭೂಮಿಯ ಒಡೆಯರನ್ನಾಗಿಸಲು ಸತತವಾಗಿ ಶ್ರಮಿಸಿದರು. ಭೂಮಾಲಕರ ದಬ್ಬಾಳಿಕೆ ಹಾಗೂ ಸರ್ಕಾರದ ಪರವಾಗಿ ಕಾರ್ಯನಿರ್ವಹಿಸ ಬೇಕಾದ ಪಟೇಲರೂ ಶ್ಯಾನುಬೋಗರು ಶ್ರೀಮಂತ ಭೂಮಾಲಕರ ಪರವಾಗಿ ಕೆಲಸಮಾಡಿ ಪಹಣಿ ಹಾಗೂ ಅಳತೆಯಲ್ಲಿ ಮೋಸ ಮಾಡುವ ಪ್ರಯತ್ನದ ವಿರುದ್ಧ ನೇರವಾದ ಹೋರಾಟ ಹಾಗೂ ಕಾನೂನು ರೀತ್ಯ ಹೋರಾಟ ಕೈಗೊಳ್ಳಬೇಕಾಯಿತು. ಈ ಎಲ್ಲ ಹೋರಾಟಗಳ ಮುಂಚೂಣಿಯಲ್ಲಿ ಇತರ ನೇತಾರರೊಂದಿಗೆ ಕಾ| ವಾಮನಭಟ್ಟರು ಬೆನ್ನೆಲುಬಾಗಿ ನಿಂತು ಸಂಘಟನೆಗೆ ಶಕ್ತಿ ತುಂಬಿದರು.

ಒಮ್ಮೆ ಕುಡುಮಲ್ಲಿಗೆ ಗ್ರಾಮದ ಭೂಮಾಲಕರ ಗೂಂಡಗಳು ಲಾರಿಯಲ್ಲಿ ನೇತಾರರ ಮೇಲೆ ಹಲ್ಲೆ ನಡೆಸಲು ಬಂದಿದ್ದರು. ಆಗ ಅದರ ಸುಳಿವನ್ನು ಅರಿತ ಗುಂಪಿನಲ್ಲಿದ್ದ ಕಾ| ವಾಮನಭಟ್ಟರು ಒಮ್ಮೆ ಜೋರಾಗಿ ಗುಡುಗಿದರು. ಬಹುಶಃ ಹೆಚ್ಚಿನ ಸಂಖ್ಯೆಯಲ್ಲಿ ರೈತರಿದ್ದಾರೆಂದು ತಿಳಿದು ಬಂದ ಗೂಂಡಗಳು ಹೆದರಿ ಬಂದ ಲಾರಿಯಲ್ಲೇ ಓಡಿಹೋದ ಬಗ್ಗೆ ಕಾ| ಶ್ರೀನಿವಾಸ ಗೌಡರು ಈಗಲೂ ನೆನಪಿಸಿಕೊಳ್ಳುತ್ತಾರೆ.

ಕಾ| ವಾಮನಭಟ್ಟರು ನಡೆಸುತ್ತಿದ್ದ ಪ್ರಿಂಟಿಂಗ್ ಪ್ರೆಸ್ ಹಾಗೂ ಸ್ಟುಡಿಯೋಗಳು ಸಂಘಟನೆಯ ಕಛೇರಿಯಾಗಿ ಕಾರ್ಯನಿರ್ವಹಿಸುತ್ತಿದ್ದು ಪ್ರಮುಖ ನಿರ್ಧಾರಗಳನ್ನು ಇಲ್ಲಿ ತೆಗೆದುಕೊಳ್ಳಲಾಗುತ್ತಿತ್ತು. ಸಭೆಗೆ ಬರುವ ಅತಿಥಿಗಳಿಗೆ ಭಟ್ಟರ ಮನೆಯಿಂದಲೇ ಚಹಾ–ಕಾಫಿ ಸರಬರಾಜಾಗುತ್ತಿತ್ತು. ಈ ಬಗ್ಗೆ ಶ್ರೀಮತಿ ಸುಕನ್ಯ ಭಟ್ಟರು ಯಾವುದೆ ಬೇಸರ ವ್ಯಕ್ತಪಡಿಸದೆ ಸಂತೋಷದಿಂದಲೇ ಸಂಘಟನೆಯ ಬಗ್ಗೆ ಸಹಕರಿಸುತ್ತಿದ್ದರು.

1968–69 ರಲ್ಲಿ ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯ ಸಮ್ಮೇಳನವನ್ನು ತೀರ್ಥಹಳ್ಳಿಯಲ್ಲಿ ನಡೆಸುವಷ್ಟು ಪ್ರಭಾವಿ ಸಂಘಟನೆಯಾಗಿ ತೀರ್ಥಹಳ್ಳಿ ರೈತಸಂಘಟನೆ ಬೆಳೆದಿತ್ತು. ಆ ಸಮ್ಮೇಳನವನ್ನು ಅಂದಿನ ಲೋಕಸಭೆಯ ವಿರೋಧಪಕ್ಷದ ನಾಯಕರಾದ ಕಾ| ಎ.ಕೆ. ಗೋಪಾಲನ್ ಉದ್ಘಾಟಿಸಿದ್ದರು. ಈ ಬೃಹತ್ ಸಮ್ಮೇಳನವನ್ನು ಆಯೋಜಿಸುವಲ್ಲಿ ಕಾ| ವಾಮನಭಟ್, ಕಾ| ಅಪ್ಪಣ್ಣ ಹೆಗಡೆ, ಕಾ| ಶ್ರೀನಿವಾಸ ಗೌಡ, ಕಾ| ಜಿ ಎಸ್ ನಾಗರಾಜ್, ಕಾ| ಚಂದುಕುಟ್ಟಿ ಮುಂತಾದ ಸಂಗಾತಿಗಳು ಪ್ರಮುಖ ಪಾತ್ರವಹಿಸಿದ್ದರು.

ಪಕ್ಷ ಹಾಗೂ ಸಂಘಟನೆಯ ಅಭೂತಪೂರ್ವ ಬೆಳವಣಿಗೆಯಿಂದಾಗಿ, 1972ರ ಕರ್ನಾಟಕ ವಿಧಾನಸಭಾ ಚುನಾವಣೆಗೆ ತೀರ್ಥಹಳ್ಳಿ ಕ್ಷೇತ್ರದಿಂದ ಕಾ| ಅಪ್ಪಣ್ಣ ಹೆಗಡೆಯವರನ್ನು ಪಕ್ಷದ ವತಿಯಿಂದ ಸ್ಪರ್ಧೆಗಿಳಿಸಿದಾಗ ಕಾ| ವಾಮನಭಟ್, ಶ್ರೀನಿವಾಸ ಗೌಡ ಮುಂತಾದವರು ಹೆಚ್ಚಿನ ಶ್ರಮವಹಿಸಿ ಚುನಾವಣಾ ಪ್ರಚಾರಕ್ಕೆಗೊಂಡರು. ಕಮ್ಯೂನಿಷ್ಟ್ ಪಕ್ಷ ಹಾಗೂ ಸೋಷಲಿಷ್ಟ್ ಪಕ್ಷಗಳ ನಡುವೆ ಪ್ರಬಲ ಪೈಪೋಟಿ ನಡೆದು ಕೇವಲ ಎರಡು ಸಾವಿರ ವೋಟುಗಳ ಅಂತರದಲ್ಲಿ ಕಾ} ಅಪ್ಪಣ್ಣ ಹೆಗಡೆಯವರು, ಸೋಷಲಿಷ್ಟ್ ಪಕ್ಷದ ಕೋಣಂದೂರು ಲಿಂಗಪ್ಪರವರ ಎದುರು ಸೋಲಬೇಕಾಯಿತು. ಈ ಸಂದರ್ಭದಲ್ಲಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ವ್ಯವಸ್ಥಿತ ಪಿತೂರಿ ಹಾಗೂ ಅಪಪ್ರಚಾರ ನಡೆಸಿ ಕಮ್ಯೂನಿಷ್ಟರನ್ನು ಗೆಲ್ಲಿಸಿದರೆ ಆಪತ್ತು ಎನ್ನುವ ದೋರಣೆಯನ್ನು ಮತದಾರರ ನಡುವೆ ಕ್ಷೇತ್ರದ ತುಂಬ ಹರಡಲಾಗಿತ್ತು.


ಈ ಚುನಾವಣಾ ಸಂದರ್ಭದಲ್ಲಿ ಕಾ| ಎ.ಕೆ.ಜಿ, ಕಾ| ಇ.ಎಂ.ಎಸ್. ರವರು ಬೃಹತ್ ಚುನಾವಣಾ ಪ್ರಚಾರಸಭೆಗಳಲ್ಲಿ ಭಾಗವಹಿಸಿ ಅವಿಸ್ಮರಣೀಯ ಘಟನೆಗಳನ್ನಾಗಿ ಪರವರ್ತಿಸಿದ್ದರು. ಇಡೀ ತೀರ್ಥಹಳ್ಳಿ ತಾಲೂಕು ಕೆಂಪಾಗಿತ್ತು. ಈ ಸಂದರ್ಭಗಳಲ್ಲಿ ಕಾ| ವಾಮನಭಟ್, ಕಾ| ಶ್ರೀನಿವಾಸ ಗೌಡ, ಹಾಗೋ ಇನ್ನಿತರ ಸಂಗಾತಿಗಳು ಪ್ರಮುಖ ಪಾತ್ರವಹಿಸಿದ್ದನ್ನು ತೀರ್ಥಹಳ್ಳಿ ಸಾರ್ವಜನಿಕರು ಈಗಲೂ ನೆನಪಿಸಿಕೊಳ್ಳುತ್ತಾರೆ.

ಈ ಚುನಾವಣೆಯ ನಂತರ ರೈತ ಸಂಘಟನೆ ಹಾಗೂ ಪಕ್ಷದ ಬೆಳವಣಿಗೆ ಕುಂಟುತ್ತಾ ಸಾಗಿತು. ಕೆಲವು ನಾಯಕರು ತೀರ್ಥಹಳ್ಳಿ ಬಿಟ್ಟು ಬೇರೆ ಬೇರೆ ಕಾರಣಗಳಿಂದಾಗಿ ಶಿವಮೊಗ್ಗ ಹಾಗೂ ಬೇರೆ ನಗರಗಳಿಗೆ ಹೋಗಿ ಸೇರಿಕೊಂಡರು. ಎರಡನೆಯ ಹಂತದ ನಾಯಕರು ಬೆಳೆಯದಿರುವ ಕಾರಣ ಸಂಘಟನೆ ದುರ್ಬಲಗೊಳ್ಳುತ್ತಾ ಹೋಯಿತು.

ತೀರ್ಥಹಳ್ಳಿ ಕಮ್ಯೂನಿಷ್ಟ್ ಚಳುವಳಿ ಹಾಗೂ ರೈತಚಳುವಳಿಯ ಪ್ರಮುಖ ರೂವಾರಿಯಾಗಿದ್ದ ಕಾ| ವಾಮನಭಟ್ಟರು ಉಗ್ರ ಬಾಷಣಕಾರರಾಗಿದ್ದರು ಎಂಬುದನ್ನು ಕಾ| ಶ್ರೀನಿವಾಸ ಗೌಡರು, ಕಾ| ಶಿವಶಂಕರ್ ಈಗಲೂ ನೆನಪಿಸಿಕೊಳ್ಳುತ್ತಾರೆ. ಅವರ ಭಾಷಣ ಕೇಳಿದವರು ರೋಮಾಂಚನಗೊಂಡು ಚಳುವಳಿಯ ಪ್ರೇರಣೆ ಪಡೆದುಕೊಳ್ಳುತ್ತಿದ್ದರು. ಮಾತ್ರವಲ್ಲ ಅವರೊಬ್ಬ ಧೈರ್ಯಶಾಲಿ ಸಂಗಾತಿಯಾಗಿದ್ದರು. ಇವರಿಗೆ ಸ್ವಂತ ಕೆಲಸ ಸಂಘಟನೆಯ ಕೆಲಸ ಎಂಬ ಯಾವುದೆ ಭೇದಭಾವವಿರಲಿಲ್ಲ ಎನ್ನುವುದು ಅವರ ಸಂಗಾತಿಗಳಿಂದ ತಿಳಿದು ಬರುತ್ತದೆ. ಅವರು ಬೀಡಿ ಕಾರ್ಮಿಕರ ಸಂಘಟನೆಯಲ್ಲೂ ಪ್ರಮುಖ ಪಾತ್ರವಹಿಸಿ ಬೀಡಿಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಪರವಾಗಿ ಹೋರಾಟ ನಡೆಸಿದ್ದರ ಬಗ್ಗೆ ಸಂಗಾತಿಗಳು ನೆನಪಿಸಿಕೊಳ್ಳುತ್ತಾರೆ. ಸಂಘಟನೆಗೆ ಬೇಕಾದ ಕರಪತ್ರಗಳು ಪೋಸ್ಟರುಗಳು ಹಾಗೂ ಇತರೆ ಪ್ರಚಾರ ಸಾಮಗ್ರಿಗಳು ಕಾ| ವಾಮನಭಟ್ಟರ ಜವಾಬ್ದಾರಿಯ ವಿಷಯವಾಗಿತ್ರು. .

ಅಸಮಾನತೆ ಅಳಿಯಬೇಕು, ಜಮೀನ್ದಾರಿ ಪದ್ಧತಿ ಅಳಿಯಬೇಕು ಸಮಾನತೆಯ ಸಮಾಜ ಅಸ್ಥಿತ್ವಕ್ಕೆ ಬರಬೇಕು ಎನ್ನುವ ವಾಮನಭಟ್ಟರ ಕನಸುಗಳು ಇನ್ನೂ ಹಾಗೆಯೇ ಉಳಿದು ಕೊಂಡಿದೆ. ಸುಮಾರು 2001 ರ ಸಮಯಕ್ಕೆ ತಮ್ಮ ಇಳಿವಯಸ್ಸಿನಿಂದಾಗಿ ತೀರ್ಥಹಳ್ಳಿ ಬಿಟ್ಟು ಶಿವಮೊಗ್ಗಕ್ಕೆ ತಮ್ಮ ಮಕ್ಕಳ ಸುಪರ್ದಿನಲ್ಲಿರಲು ಬರಬೇಕಾಯಿತು, 2013 ರ ವರೆಗೆ ಸಾಮಾನ್ಯ ಆರೋಗ್ಯ ಕಾಯ್ದುಕೊಂಡಿದ್ದ ಕಾ| ವಾಮನಭಟ್ಟರು ನಂತರ ಅವರ ಆರೋಗ್ಯದಲ್ಲಿ ಹೆಚ್ಚಿನ ಸುಧಾರಣೆ ಕಾಣದೆ ಸಮತಾವಾದ ಅನುಷ್ಠಾನಕ್ಕಾಗಿ ನಡೆಸಿದ ಅವರ ಉಗ್ರ ಭಾಷಣಕ್ಕೆ ತೆರೆ ಬೀಳುವಂತಾಯಿತು. ಅವರ ಮಾತುಗಳು ನಿಂತು ಹೋಗಿದ್ದವು. ಅವರ ಮನಸಿನಾಳದಲ್ಲಿದ್ದ ಅಸಮಾನತೆಯ ಕೊರಗು ಅವರನ್ನು 6–5–2016 ರ ಮಧ್ಯಾಹ್ನದವರೆಗೂ ಕಾಡಿರಲೇಬೇಕು. ■

ಕ್ಯಾಸ್ಟ್ರೋ ಕಥೆ



14

ಮೂಲ: ಇಗ್ನೇಶಿಯಸ್ ರಾಮೋನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಜುಲೈ 4, 1776 ರಂದು ನಡೆದ ಫಿಲಡೆಲ್ಫಿಯಾ ಅಧಿವೇಶನದ ಸ್ವಾತಂತ್ರ್ಯ ಘೋಷಣೆಯ ಒಂದು ಪ್ಯಾರಾದಲ್ಲಿ ಈ ಹಕ್ಕನ್ನು ಸೊಗಸಾಗಿ ಚಿತ್ರಿಸಲಾಗಿದೆ, 'ಈ ಸತ್ಯಗಳನ್ನು ಸ್ವಯಂ ವೇದ್ಯವೆಂದು ನಾವು ಎತ್ತಿ ಹಿಡಿಯುತ್ತೇವೆ, ಎಲ್ಲಾ ಮನುಷ್ಯರು ಸಮಾನವಾಗಿ ಸೃಷ್ಟಿಸಲ್ಪಟ್ಟಿದ್ದಾರೆ, ತಮ್ಮ ಸೃಷ್ಟಿಕರ್ತನಿಂದ ಸಂಪನ್ನವಾದ ಜೀವನ, ಸ್ವಾತಂತ್ರ್ಯ ಮತ್ತು ಸಂತೋಷದ ಬೆನ್ನಟ್ಟುವಿಕೆಯಂತಹ ತಮ್ಮಿಂದ ಬೇರ್ಪಡಿಸಲಾಗದ ನಿರ್ದಿಷ್ಟವಾದ ಹಕ್ಕುಗಳನ್ನು ಇವರು ಹೊಂದಿದ್ದಾರೆ. ಈ ಹಕ್ಕುಗಳನ್ನು ಕಾಪಾಡಲು, ಆಳ್ವಿಕೆಗೊಳಪಟ್ಟ ಜನರಿಂದ ಪಡೆದು-ಕೊಂಡ ನ್ಯಾಯಬದ್ಧ ಅಧಿಕಾರಗಳಿಂದ ಜನರ ನಡುವೆ ಸರ್ಕಾರಗಳನ್ನು ಸ್ಥಾಪಿಸಲಾಗಿದೆ; ಈ ಉದ್ದೇಶಗಳ ಈಡೇರಿಕೆಗೆ ಯಾವುದೇ ರೀತಿಯ ಸರ್ಕಾರವು ವಿನಾಶಕಾರಿ ಆದ ಸಂದರ್ಭದಲ್ಲಿ, ಅದನ್ನು ಬದಲಾಯಿಸಲು ಅಥವಾ ಕಿತ್ತು ಹಾಕಲು ಮತ್ತು ಹೊಸದೊಂದು ಸರ್ಕಾರವನ್ನು ನೇಮಿಸಲು, ಮತ್ತು ಅಂತಹ ಸರ್ಕಾರವು ತಮ್ಮ ಸುರಕ್ಷೆ ಮತ್ತು ಸಂತೋಷವನ್ನು ಸರಿಯಾಗಿ ಕಾಪಾಡಬಲ್ಲದೆಂದು ತಮಗೆನಿಸುವ ರೀತಿಯಲ್ಲಿ ಅದರ ಅಧಿಕಾರಗಳನ್ನು ಸಂಘಟಿಸುವ ಮತ್ತು ಅಂತಹ ತತ್ವಗಳ ಆಧಾರದಲ್ಲಿ ಅದರ ಅಡಿಪಾಯವನ್ನು ಹಾಕುವುದು ಜನರ ಹಕ್ಕಾಗಿದೆ.'

ಬಂಡಾಯ ಕರ್ತವ್ಯ

'ಸರ್ಕಾರವು ಜನತೆಯ ಹಕ್ಕುಗಳನ್ನು ಉಲ್ಲಂಘಿಸಿದಾಗ, ಬಂಡಾಯವು ಅವರಿಗೆ ಅತ್ಯಂತ ಪವಿತ್ರ ಹಕ್ಕಾಗುತ್ತದೆ ಮತ್ತು ಅನಿವಾರ್ಯ ಕರ್ತವ್ಯವಾಗುತ್ತದೆ' ಎಂದು ಪ್ರಸಿದ್ಧವಾದ ಮಾನವ ಹಕ್ಕುಗಳ ಫ್ರೆಂಚ್ ಘೋಷಣೆಯು ಈ ತತ್ವವನ್ನು ಮುಂದಿನ ಜನಾಂಗಕ್ಕೆ ನೀಡಿದೆ.

ನಾನು ನನ್ನ ವಾದವನ್ನು ಕೊನೆಗೊಳಿಸುತ್ತೇನೆ ಆದರೆ ಆರೋಪಿಯನ್ನು ಬಿಡುಗಡೆ ಮಾಡಿ ಎಂದು ವಕೀಲರು ಸಾಮಾನ್ಯವಾಗಿ ಕೇಳುವ ಹಾಗೆ ಕೊನೆಗೊಳಿಸುವುದಿಲ್ಲ. ಈಗಾಗಲೇ ಪೈನ್ಸ್ ದ್ವೀಪದ ಅವಮಾನಕರ ಜೈಲುಗಳಲ್ಲಿ ನನ್ನ ಸಂಗಾತಿಗಳು ನರಳುತ್ತಿರುವಾಗ ನಾನು ನನಗಾಗಿ ಸ್ವಾತಂತ್ರ್ಯವನ್ನು ಕೇಳುವುದಿಲ್ಲ. ಅವರ ಕಷ್ಟಗಳನ್ನು ಹಂಚಿಕೊಳ್ಳಲು ನನ್ನನ್ನೂ ಅಲ್ಲಿಗೆ ಕಳುಹಿಸಿ. ಅಧ್ಯಕ್ಷನೊಬ್ಬ ಕ್ರಿಮಿನಲ್ ಮತ್ತು ಕಳ್ಳನಾಗಿರುವ ಗಣರಾಜ್ಯದಲ್ಲಿ ಪ್ರಾಮಾಣಿಕ ಜನ ಸಾಯಬೇಕು ಅಥವಾ ಜೈಲಿನಲ್ಲಿರಬೇಕು ಎಂಬ ವಿಚಾರ ಅರ್ಥವಾಗುವಂತಹುದೇ. ... ... ನನಗೆ ನೀಡುವ, ಹೇಡಿತನದ ಬೆದರಿಕೆಗಳು ಮತ್ತು ಕ್ರೌರ್ಯಗಳಿಂದ ತುಂಬಿದ ಶಿಕ್ಷೆ, ಎಂದಿಗೂ ಯಾರಿಗೂ ನೀಡದಷ್ಟು ಕಠಿಣವಾಗಿರುತ್ತದೆ ಎಂಬುದು ನನಗೆ ಗೊತ್ತು. ಆದರೆ 70 ಜನ ನನ್ನ ಸಂಗಾತಿಗಳ ಪ್ರಾಣವನ್ನು ತೆಗೆದುಕೊಂಡ ಹೀನಾಯ ಪೀಡಕನ ರೋಷದ ಬಗ್ಗೆ ನನಗೆ ಹೇಗೆ ಭಯವಿಲ್ಲವೋ ಹಾಗೆ ಜೈಲುಗಳೆಂದರೆ ನನಗೆ ಭಯವಿಲ್ಲ. ಆರೋಪವನ್ನು ಸ್ಥಿರಗೊಳಿಸಿ. ಅದೇನೂ ಮುಖ್ಯವಲ್ಲ. ಇತಿಹಾಸ ನನ್ನನ್ನು ಮುಕ್ತಗೊಳಿಸುತ್ತದೆ".

ಪೈನ್ಸ್ ದ್ವೀಪಗಳಲ್ಲಿ ಎರಡು ವರ್ಷ ನೆರೆವಾಸ ಅನುಭವಿಸಿದ ನಂತರ ಫಿಡೆಲ್ ಮೆಕ್ಸಿಕೋಗೆ ದೇಶಾಂತರ ಹೊರಟರು. ಅಲ್ಲಿ ಫಿಡೆಲ್ ತನ್ನ ಅತ್ಯಂತ ಪ್ರೀತಿಪಾತ್ರನಾದ ಚೆ'ನನ್ನು ಮೊದಲ ಬಾರಿಗೆ ಭೇಟಿಯಾದರು. ಫಿಡೆಲ್ ಮೆಕ್ಸಿಕೋಗೆ ಬರುವಷ್ಟರಲ್ಲಿ ಚೆ ಜೊತೆ ರಾಲ್ ಕ್ಯಾಸ್ಟ್ರೊ ಸ್ನೇಹ ಬೆಳೆದಿತ್ತು. ಅಲ್ಲಿದ್ದ ಕ್ಯೂಬನ್ ಗುಂಪು ಚೆ'ನನ್ನು ತುಂಬಾ ಇಷ್ಟಪಡುತ್ತಿತ್ತು. ಚೆ ಜೊತೆ ಫಿಡೆಲ್‌ರ ಮೊದಲ ಭೇಟಿ ಮೆಕ್ಸಿಕೋ ನಗರದಲ್ಲಿ ಕ್ಯೂಬನ್ ಸ್ನೇಹಿತ ಮರಿಯಾ ಅಂತೋನಿಯೋ ಗೋನ್ಸಾಲೆಜ್ ಮನೆಯಲ್ಲಿ ನಡೆಯಿತು. ಫಿಡೆಲ್ ಮೆಕ್ಸಿಕೋಗೆ ಬರುವಷ್ಟರಲ್ಲಿ ಚೆ ಜೊತೆ ರಾಲ್ ಕ್ಯಾಸ್ಟ್ರೊ ಸ್ನೇಹ ಬೆಳೆದಿತ್ತು. ಅಲ್ಲಿದ್ದ ಕ್ಯೂಬನ್ ಗುಂಪು ಚೆ'ನನ್ನು ತುಂಬಾ ಇಷ್ಟಪಡುತ್ತಿತ್ತು. ಚೆ ಜೊತೆ ಫಿಡೆಲ್‌ರ ಮೊದಲ ಭೇಟಿ ಮೆಕ್ಸಿಕೋ ನಗರದಲ್ಲಿ ಕ್ಯೂಬನ್ ಸ್ನೇಹಿತ ಮರಿಯಾ ಅಂತೋನಿಯೋ ಗೋನ್ಸಾಲೆಜ್ ಮನೆಯಲ್ಲಿ ನಡೆಯಿತು. ರಾಷ್ಟ್ರೀಯ ವಿಮೋಚನೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಗಾಗಿನ ಹೋರಾಟವನ್ನು ನಡೆಸುತ್ತಿದ್ದ ಫಿಡೆಲ್ ಮತ್ತು ಅವರ ತಂಡದ ಉದ್ದೇಶವನ್ನು ಗಮನಿಸಿದ ಚೆ ಇವರೊಂದಿಗೆ ತಕ್ಷಣವೇ ಸೇರಿಕೊಂಡರು.



ಚೆಗೆವಾರ - ಫಿಡೆಲ್ ಭೇಟಿ

ವಿಚಾರಣೆಯು ಫಿಡೆಲ್ ಮತ್ತು ಗೆಳೆಯರಿಗೆ ಜೈಲುಶಿಕ್ಷೆಯನ್ನು ವಿಧಿಸಿತು. ಫೈನ್ಸ್ ದ್ವೀಪದ ಜೈಲುಗಳಲ್ಲಿ ಎರಡು ವರ್ಷ ಸೆರೆವಾಸ ಕಳೆದು ಬಿಡುಗಡೆ ಹೊಂದಿದ ಇವರು ನಂತರ ಮೆಕ್ಸಿಕೋಗೆ ಪ್ರಯಾಣ ಬೆಳೆಸಿದರು.

ಮೆಕ್ಸಿಕೊದಲ್ಲಿ ಫಿಡೆಲ್

ಪೈನ್ಸ್ ದ್ವೀಪಗಳಲ್ಲಿ ಎರಡು ವರ್ಷ ನೆರೆವಾಸ ಅನುಭವಿಸಿದ ನಂತರ ಫಿಡೆಲ್ ಮೆಕ್ಸಿಕೋಗೆ ದೇಶಾಂತರ ಹೊರಟರು. ಅಲ್ಲಿ ಫಿಡೆಲ್ ತನ್ನ ಅತ್ಯಂತ ಪ್ರೀತಿಪಾತ್ರನಾದ ಚೆ'ನನ್ನು ಮೊದಲ ಬಾರಿಗೆ ಭೇಟಿಯಾದರು. ಹೆಚ್ಚಿನ ಜನರಿಗೆ ಚೆ ಅರ್ಜೆಂಟೈನಾದಲ್ಲಿ ಓದುತ್ತಿದ್ದಾಗ ಮಾಡಿದ ಮೋಟರ್‌ಸೈಕಲ್ ಪ್ರವಾಸ ಸಾಹಸಗಳ ಬಗ್ಗೆ, ಆ ದೇಶದ ಒಡಲಾಳವನ್ನು ಹೊಕ್ಕು ಬಂದ ಪ್ರವಾಸದ ಬಗ್ಗೆ, ನಂತರ ಬೊಲಿವಿಯಾ, ಚಿಲಿ, ಪೆರು, ಮತ್ತಿತ್ತರ ದೇಶಗಳ ಪ್ರವಾಸಗಳ ಬಗ್ಗೆ ತಿಳಿದಿದೆ. 1951 ರಲ್ಲಿ ಬೊಲಿವಿಯಾದಲ್ಲಿ ಮಿಲಿಟರಿ ಕ್ಷಿಪ್ರ ದಂಗೆಯ ನಂತರ 1952ರಲ್ಲಿ ಬಹಳ ಬಲಿಷ್ಟವಾದ ಕಾರ್ಮಿಕ ಮತ್ತು ಕೂಲಿಕಾರರ ಚಳುವಳಿ ನಡೆದಿತ್ತು. ಬೊಲಿವಿಯಾಕ್ಕೆ ಭೇಟಿ ನೀಡಿದಾಗ ಇದರ ಪರಿಣಾಮ ಚೆ ಮೇಲೆ ತೀವ್ರವಾಗಿ ಆಗಿತ್ತು.

ಚೆ ವೈದ್ಯಕೀಯ ಪದವಿ ಪಡೆಯುವುದಕ್ಕೆ ಮೊದಲು ತನ್ನ ಸ್ನೇಹಿತ ಅಲ್ಬರ್ಟೋ ಗ್ರನ್ಯಾಡೋ ಜೊತೆ ಸುತ್ತುವಾಗ ಹಲವಾರು ಅಸ್ಪತ್ರೆಗಳಿಗೆ ಭೇಟಿ ನೀಡಿದ್ದರು. ಅಮೇಜ಼ಾನ್ ಪ್ರದೇಶದಲ್ಲಿ ಕುಷ್ಟರೋಗದ ವೈದ್ಯನಾಗಿ ಸೇವೆ ಸಲ್ಲಿಸಿದರು. ಲ್ಯಾಟಿನ್ ಅಮೇರಿಕಾದ ತುಂಬೆಲ್ಲಾ ಸುತ್ತಾಡಿದಾಗ ಶ್ರಮಿಕರನ್ನು ಹೀನಾಯವಾಗಿ ದುಡಿಸುತ್ತಿದ್ದ ಅಲ್ಲಿಯ ಚುಕ್ವಿಕಮಾಟದ ತಾಮ್ರದ ಗಣಿಗಳಿಗೆ ಭೇಟಿ ನೀಡಿದರು, ಅಟಕಾಮ ಮರುಭೂಮಿಯನ್ನು ದಾಟಿದರು. ಪೆರುವಿನ ಮಾಚು ಪಿಚ್ಚುವಿನ ಅವಶೇಷಗಳನ್ನು ಕಂಡರು, ಟಿಟಿಕಾಮ ಸರೋವರವನ್ನು ದೋಣಿಯಲ್ಲಿ ದಾಟಿದರು, ಹೀಗೆ ಹೋದಲ್ಲೆಲ್ಲಾ ಚೆ ಅಲ್ಲಿನ ಮೂಲನಿವಾಸಿ ಜನರನ್ನು ಭೇಟಿ ಮಾಡಿದರು, ಅವರೊಂದಿಗೆ ಚರ್ಚಿಸಿದರು, ಅವರ ಬಗ್ಗೆ ಆಸಕ್ತಿ ಮೂಡಿಸಿಕೊಂಡರು. ಅಲ್ಲಿಂದ ಗ್ವಾಟೆಮಾಲಕ್ಕೆ ತೆರಳಿದರು.

ಗ್ವಾಟೆಮಾಲದ ಅಧ್ಯಕ್ಷ ಜಾಕೋಬ್ ಅರ್ಬೆಂಜ್ ಆಗ ಅತ್ಯಂತ ಪ್ರಗತಿಪರವಾದ ಸುಧಾರಣೆಗಳನ್ನು ಜಾರಿ ಮಾಡುತ್ತಿದ್ದ ಕಾಲವದು. ಆಗ ಅತ್ಯಂತ ಪ್ರಮುಖವಾದ ಕಾರ್ಷಿಕ ಸುಧಾರಣೆಗಳು ನಡೆಯುತ್ತಿದ್ದವು ಅಮೇರಿಕದ ಬಹುರಾಷ್ಟ್ರೀಯ ಬೃಹತ್ ಕಂಪನಿಗಳ ಹಿಡಿತದಲ್ಲಿದ್ದ ಬಾಳೆಹಣ್ಣು ಪ್ಲಾಂಟೇಷನ್ನುಗಳ ಭೂಮಿಯನ್ನು ಅರ್ಬೆಂಜ್ ಸರ್ಕಾರ ಕಾಂಪೆಸಿನೋರಿಗೆ (ಕೃಷಿಕೂಲಿಕಾರರಿಗೆ) ಹಂಚುತ್ತಿತ್ತು. ಇದನ್ನು ತೀವ್ರವಾಗಿ ವಿರೋಧಿಸುತ್ತಿದ್ದ ಅಮೇರಿಕ ಸಂಯುಕ್ತ ಸಂಸ್ಥಾನದ ಬೆಂಬಲವನ್ನು ಪಡೆದು ಗ್ವಾಟೆಮಾಲದ ಮಿಲಿಟರಿಯು ಕ್ಷಿಪ್ರಕ್ರಾಂತಿಯನ್ನು ನಡೆಸಿತು. ಇದರಿಂದ ಭೂಮಿ ಹಂಚಿಕೆ ಕಾರ್ಯ ನಿಂತು ಹೋಯಿತು. ಆಗಿನ ಪರಿಸ್ಥಿತಿ ಹೇಗಿತ್ತೆಂದರೆ ಭೂಸುಧಾರಣೆ ಕಾನೂನಿನ ಬಗ್ಗೆ ಯಾರೇ ಮಾತನಾಡಿದರೂ ಅವರನ್ನು ತಕ್ಷಣವೇ 'ಕಮ್ಯುನಿಸ್ಟ್' ಎಂದು ಬ್ರಾಂಡ್ ಮಾಡಲಾಗುತ್ತಿತ್ತು. (ಈಗಲೂ ಇದರಲ್ಲಿ ಬದಲಾವಣೆಯೇನೂ ಆಗಿಲ್ಲ). ಇಷ್ಟಕ್ಕೂ ಒಟ್ಟು ಕಾರ್ಷಿಕ ಸುಧಾರಣೆಗಳ ಪೈಕಿ ಭೂ ಹಂಚಿಕೆಯ ವಿಚಾರ ಮಾತ್ರ ಚಾಲನೆ ಪಡೆದಿತ್ತು. ಆದರೆ ಇದನ್ನು ಗ್ವಾಟೆಮಾಲದ ಶ್ರೀಮಂತ ಮತ್ತು ಬಲಿಷ್ಟ ವರ್ಗಗಳು ಸಹಿಸಲಿಲ್ಲ. ಮಿಲಿಟರಿ ಒಳಗಿನ ಮತ್ತು ಹೊರಗಿನ ಪ್ರತಿಗಾಮಿ ಶಕ್ತಿಗಳೆಲ್ಲ ಸೇರಿ ಕ್ಷಿಪ್ರಕ್ರಾಂತಿ ನಡೆಸಿ ಚುನಾಯಿತ ಸರ್ಕಾರವನ್ನು ಪದಚ್ಯುತಗೊಳಿಸಿದವು.

ಅರ್ನೆಸ್ಟೊ ಗೆವಾರ 'ಚೆ' ಆದರು

ಕ್ಯೂಬಾದಲ್ಲಿ ಫಿಡೆಲ್ ಮತ್ತು ಸಂಗಡಿಗರು ನಡೆಸಿದ 1953 ಜುಲೈ 26 ರ ಮೊಂಕಾಡಾ ದಾಳಿಯ ಸಂದರ್ಭದಲ್ಲಿ ಹಲವಾರು ಕಾಂಪೆನೀರೋಗಳು (ರೈತ ಕೂಲಿಕಾರರು) ತಪ್ಪಿಸಿಕೊಂಡು ದೇಶ ಬಿಟ್ಟು ಹೋಗಿದ್ದರು. ಅವರಲ್ಲಿ ಕೆಲವರು ಗ್ವಾಟೆಮಾಲಕ್ಕೆ ಹೋಗಿದ್ದರು. ಜಾಕೊಬ್ ಅರ್ಬೆಂಜ್‌ನನ್ನು ಪದಚ್ಯುತಗೊಳಿಸಿದ ನಂತರದ ಸಂಕಷ್ಟದ ದಿನಗಳಲ್ಲಿ ಚೆ ಅಲ್ಲಿದ್ದರು. ಚೆ ಕ್ಯೂಬನ್ ಕಾಂಪೆನೀರೋಗಳ ಜೊತೆಗೂಡಿ ಮೆಕ್ಸಿಕೋಗೆ ತೆರಳಿದರು.

ಕ್ಯೂಬಾದಿಂದ ಮೆಕ್ಸಿಕೋಗೆ ಹೋದ ಮೊದಲಿಗರಲ್ಲಿ ರಾಲ್ ಕ್ಯಾಸ್ಟ್ರೋ ಒಬ್ಬರು. ಇವರು ಏನೂ ಮಾಡದಿದ್ದರೂ, ಬಾಂಬ್ ಸ್ಫೋಟಿಸಿದರೆಂದು ಇವರನ್ನು ದೂಷಿಸಲು ಪ್ರಾರಂಭಿಸಿದರು. ಫಿಡೆಲ್ ಸಲಹೆಯನ್ನು ಅನುಸರಿಸಿ ರಾಲ್ ಮೆಕ್ಸಿಕೋಗೆ ಹೊರಟರು. ಅಷ್ಟೊತ್ತಿಗಾಗಲೇ ಅಲ್ಲಿದ್ದ ಕಾಂಪೆನೀರೋಗಳು ಮತ್ತು ಅವರೊಂದಿಗಿದ್ದ ಚೆ ನನ್ನು ಭೇಟಿ ಮಾಡಿದರು. ಫಿಡೆಲ್ ಮತ್ತು ಸಂಗಡಿಗರು ಜೈಲಿನಲ್ಲಿರುವಾಗಲೇ ಮೆಕ್ಸಿಕೋಗೆ ಹೋಗಿ ಶಸ್ತ್ರಸಜ್ಜಿತ ಜನರನ್ನು ಸಂಘಟಿಸಿ ವಾಪಸ್ ಬರಲು ಯೋಜಿಸಿದ್ದರು. ಕ್ಯೂಬಾದಲ್ಲಿ ಈ ರೀತಿ ಸಂಪ್ರದಾಯ ಬೆಳೆದು ಬಂದಿತ್ತು ಎಂದು ಫಿಡೆಲ್ ನೆನಪಿಸಿಕೊಳ್ಳುತ್ತಾರೆ. ಚೆ'ನನ್ನು ರಾಲ್ ಭೇಟಿ ಮಾಡುವಾಗ ಚೆ ಇನ್ನೂ 'ಚೆ' ಆಗಿರಲಿಲ್ಲ. 'ಅರ್ನೆಸ್ಟೋ ಗೆವಾರ' ಮಾತ್ರ. ಅರ್ಜೆಂಟೈನರು ಯಾವಾಗಲೂ ಪ್ರತಿಯೊಂದಕ್ಕೂ 'ಚೆ, ಹೊಂಬ್ರೆ!', 'ಚೆ' ಅದು 'ಚೆ' ಇದು ಎಂದು ಕರೆಯುತ್ತಿದ್ದರು. ಕ್ಯೂಬನ್ನರು ಗೆವಾರನನ್ನು 'ಎಲ್ ಚೆ' ಎಂದು ಕರೆಯಲು ಶುರು ಮಾಡಿದರು. ಮತ್ತು ಅದು ಪಕ್ಕಾ ಹಿಡಿದುಬಿಟ್ಟಿತು.

ಆ ತಕ್ಷಣಕ್ಕೆ ಯಾವುದೇ ಅಪಾಯ ಇಲ್ಲದಿದ್ದರಿಂದ ಫಿಡೆಲ್ ಮೆಕ್ಸಿಕೋ ಪ್ರಯಾಣ ಸ್ವಲ್ಪ ತಡವಾಯಿತು. ಜೈಲಿನಿಂದ ಬಿಡುಗಡೆಯಾದ ನಂತರದ ದಿನಗಳಲ್ಲಿ, ತಮ್ಮ ಚಿಂತನೆಗಳನ್ನು ಜನರ ಬಳಿಗೆ ಕೊಂಡೊಯ್ಯಲು ಮತ್ತು ಅವರಲ್ಲಿ ಸಾಮಾಜಿಕ ಜಾಗೃತಿ ಮೂಡಿಸಲು ತೀವ್ರವಾದ ಪ್ರಚಾರದಲ್ಲಿ ತೊಡಗಿದರು. ತಮ್ಮ ಜುಲೈ 26 ರ ಚಳುವಳಿಗೆ ಒಂದು ಕ್ರಾಂತಿಕಾರಿ ಸಂಘಟನಾ ಸ್ವರೂಪವನ್ನು ನೀಡಿದರು. ಹೋರಾಟವನ್ನು ಶಾಂತಿಯುತ ಮತ್ತು ಕಾನೂನಾತ್ಮಕ ವಿಧಾನಗಳಿಂದ ಮುನ್ನಡೆಸುವುದು ಅಸಾಧ್ಯವೆಂದು ನಿರೂಪಿಸಲು ಪ್ರಯತ್ನಿಸಿದರು.

ಚೆ – ಫಿಡೆಲ್ ಭೇಟಿ

ಫಿಡೆಲ್ ಮೆಕ್ಸಿಕೋಗೆ ಬರುವಷ್ಟರಲ್ಲಿ ಚೆ ಜೊತೆ ರಾಲ್ ಕ್ಯಾಸ್ಟ್ರೊ ಸ್ನೇಹ ಬೆಳೆದಿತ್ತು. ಅಲ್ಲಿದ್ದ ಕ್ಯೂಬನ್ ಗುಂಪು ಚೆ'ನನ್ನು ತುಂಬಾ ಇಷ್ಟಪಡುತ್ತಿತ್ತು. ಚೆ ಜೊತೆ ಫಿಡೆಲ್‌ರ ಮೊದಲ ಭೇಟಿ ಮೆಕ್ಸಿಕೋ ನಗರದಲ್ಲಿ ಕ್ಯೂಬನ್ ಸ್ನೇಹಿತ ಮರಿಯಾ ಅಂತೋನಿಯೋ ಗೋನ್ಸಾಲೆಜ್ ಮನೆಯಲ್ಲಿ ನಡೆಯಿತು. ಫಿಡೆಲ್ ಹೇಳುವ ರೀತಿಯಲ್ಲಿ "ಚೆ ಜನರ ಪಾಲಿಗೆ ಒಂದು ವರವಾಗಿದ್ದರು. ಎಲ್ಲರನ್ನೂ ಪ್ರೀತಿಸುವ ಗುಣ ಚೆ'ಗೆ ಅಂತರ್ಗತವಾಗಿತ್ತು, ಆತನ ಸರಳತೆ, ಕಾಮ್ರೇಡ್‌ಶಿಪ್‌ನ ಅಂತಃಕರಣ, ಅದು ಆತನ ಸಹಜ ಸ್ವಭಾವವಾಗಿತ್ತು".

ರಾಷ್ಟ್ರೀಯ ವಿಮೋಚನೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಗಾಗಿನ ಹೋರಾಟವನ್ನು ನಡೆಸುತ್ತಿದ್ದ ಫಿಡೆಲ್ ಮತ್ತು ಅವರ ತಂಡದ ಉದ್ದೇಶವನ್ನು ಗಮನಿಸಿದ ಚೆ ಇವರೊಂದಿಗೆ ತಕ್ಷಣವೇ ಸೇರಿ-ಕೊಂಡರು. ಆಗ ಚೆ'ಗೆ ಇಪ್ಪತ್ತೇಳು ವಯಸ್ಸು. ಚೆ ಅಷ್ಟೊತ್ತಿಗಾಗಲೇ ಬದ್ಧತೆಯ ದೃಷ್ಟಿಯಿಂದ ಒಬ್ಬ ಮಾರ್ಕ್ಸ್‌ವಾದಿಯಾಗಿದ್ದರು, ಆದರೆ ಯಾವುದೇ ರಾಜಕೀಯ ಪಕ್ಷದ ಸದಸ್ಯರಾಗಿರಲಿಲ್ಲ. ಮೊಂಕಾಡಾ ದಾಳಿಯ ಸಂದರ್ಭಕ್ಕೆ ಫಿಡೆಲ್ ಒಬ್ಬ ಆದರ್ಶವಾದಿ ಮಾರ್ಕ್ಸ್‌ವಾದಿಯಾಗಿದ್ದರು. ಚೆ ಮತ್ತು ಫಿಡೆಲ್ ನಡುವೆ ಗಟ್ಟಿ ಬಾಂಧವ್ಯವನ್ನು ಬೆಸೆಯುವುದರಲ್ಲಿ ಇಂತಹ ಹಲವು ವಿಚಾರಗಳ ಸಂಗಮ ಕಾರಣವಾಗಿತ್ತು.

ಕ್ಯೂಬಾ ಕ್ರಾಂತಿಗೆ ಕೈಜೋಡಿಸಿದ ಚೆ, ನಂತರ ಫಿಡೆಲ್‌ಗೆ ಹೇಳಿದ ಮಾತಿದು, "ನಾನು ಕೇವಲ ಒಂದು ವಿಷಯವನ್ನು ಮಾತ್ರ ಕೇಳುತ್ತೇನೆ, ಕ್ಯೂಬಾದಲ್ಲಿ ಕ್ರಾಂತಿ ಜಯಿಸಿದ ಮೇಲೆ, ರಾಜ್ಯದ ಕಾರಣಗಳನ್ನು ಹೇಳಿ ಅರ್ಜೆಂಟೈನಾಕ್ಕೆ ಹೋಗಲು ಮತ್ತು ಅಲ್ಲಿ ಕ್ರಾಂತಿ ಮಾಡಲು, ನೀನು ನನ್ನನ್ನು ತಡೆಯಬಾರದು". ತನ್ನ ದೇಶದಲ್ಲಿ ಕ್ರಾಂತಿ ಮಾಡಬೇಕೆಂಬ ಇಚ್ಛೆ ಅಷ್ಟೊತ್ತಿಗಾಗಲೇ ಚೆ ಮನದಲ್ಲಿ ಬಂದಿತ್ತು. ಚೆ'ನ ಈ ಕೋರಿಕೆಯನ್ನು ಫಿಡೆಲ್ ಯಾವುದೇ ಮರು ಮಾತಾಡದೆ ಒಪ್ಪಿದ್ದರು. ಚೆ ಇವರಲ್ಲಿ ಅಚಲವಾದ ವಿಶ್ವಾಸವನ್ನಿಟ್ಟಿದ್ದರು. ಇದಕ್ಕೆ ಮುಖ್ಯವಾಗಿ ಆ ಕಾಲಘಟ್ಟದಲ್ಲಿ ಬೆಳೆದು ಬರುತ್ತಿದ್ದ ಅಂತರ್‍ರಾಷ್ಟ್ರೀಯತೆಯ ಪ್ರಜ್ಞೆ ಇದರ ಹಿಂದಿತ್ತು. ಇಲ್ಲದಿದ್ದಲ್ಲಿ ಬೊಗೊಟಾದಲ್ಲಿನ ಕಾರ್ಯಾಚರಣೆ, ಟ್ರುಜಿಲ್ಲೋನ ವಿರುದ್ಧ ಹೋರಾಟ, ಪೋರ್ಟೊರಿ-ಕೋ ಸ್ವಾತಂತ್ರ್ಯ ರಕ್ಷಣೆಗೆ ಹೋರಾಟ, ಪನಾಮ ಕಾಲುವೆಯನ್ನು ಪನಾಮಾಗೆ ಹಿಂದಿರುಗಿಸುವ ವಿಚಾರ, ಕೆರ್ರೀಬಿಯನ್‌ನಲ್ಲಿ ಯೂರೋಪಿಯನ್ ವಸಾಹತುಗಳ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ, ಇವೆಲ್ಲವೂ ಕ್ರಾಂತಿಕಾರಿ ಚಿಂತನೆಯ ಅಂತರ್‍ರಾಷ್ಟ್ರೀಯತೆ ಇಲ್ಲದಿದ್ದಲ್ಲಿ ಬರುತ್ತಿರಲಿಲ್ಲವೇನೋ ಎನ್ನುತ್ತಾರೆ ಫಿಡೆಲ್. ■

7.9%. ಜಿಡಿಪಿ ಬೆಳವಣಿಗೆಯಲ್ಲಿ 'ದಗಲ್‌ಬಾಜಿ ಅಂಶ' 51%?

ಹಣಕಾಸು ವರ್ಷ 2015–16ರ ಕೊನೆಯ ತ್ರೈಮಾಸಿಕದಲ್ಲಿ 7.9ಶೇ. ಬೆಳವಣಿಗೆ ದಾಖಲಿಸಿದ್ದರಿಂದ ಈ ಹಣಕಾಸು ವರ್ಷದ ಭಾರತದ ಜಿಡಿಪಿ ಬೆಳವಣಿಗೆ ದರ 7.6% ಆಗಿದ್ದು ಇದು ಕಳೆದ 5 ವರ್ಷಗಳಲ್ಲೇ ಅತಿ ಹೆಚ್ಚು ಎನ್ನಲಾಗಿದೆ. ಇದು ಅಧಿಕಾರದಲ್ಲಿ ಎರಡು ವರ್ಷಗಳನ್ನು ಪೂರೈಸುವ ವೇಳೆಗೆ ಪ್ರಧಾನ ಮಂತ್ರಿಗಳಿಗೆ ಸಿಕ್ಕ ಒಂದು ಉಡುಗೊರೆ ಎಂದೂ ಹೇಳಲಾಗಿದೆ.

ಈ ಹಣಕಾಸು ವರ್ಷದ ಎಪ್ರಿಲ್–ಜೂನ್ ಅವಧಿಯಲ್ಲಿ 7.5% ಮತ್ತು ಜುಲೈ–ಸಪ್ಟಂಬರ್ ತ್ರೈಮಾಸಿಕದಲ್ಲಿ 7.6% ಬೆಳವಣಿಗೆ ದಾಖಲಿಸಿದ್ದರೆ 3ನೇ ತ್ರೈಮಾಸಿಕದಲ್ಲಿ ಅಂದರೆ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ಇದು 7.2%.ಕ್ಕೆ ಇಳಿದಿತ್ತು.

ಆದರೆ ಈ ಅಂಕಿ–ಅಂಶಗಳನ್ನು ಪೂರ್ಣವಾಗಿ ನಂಬಬೇಡಿ ಎನ್ನುತ್ತಾರೆ ಆರ್ಥಿಕ ತಜ್ಞರು(ಮೋಹನ್ ಗುರುಸ್ವಾಮಿ, ಸ್ಕ್ರಾಲ್.ಇನ್, ಜೂನ್ 5). ಇದಕ್ಕೆ ಕಾರಣಗಳಿವೆ.

ಸರಕಾರೀ ಅಂಕಿ–ಅಂಶಗಳ ಪ್ರಕಾರವೇ, ಈ ಕೊನೆಯ ತ್ರೈಮಾಸಿಕದಲ್ಲಿ ಕೈಗಾರಿಕಾ ಬೆಳವಣಿಗೆ ದರ ಕೇವಲ 0.1%, ಸರಕು ತಯಾರಿಕೆಯ ದರವಂತೂ ಇಳಿಮುಖವಾಗಿತ್ತು,(–1.1%). ರೈಲ್ವೆ ನಿವ್ವಳ ಆದಾಯವೂ (–8.4%) ಇಳಿಯಿತು, ಬಂಡವಾಳ ರಚನೆ ದರವೂ ಇಳಿಯಿತು(–1.9%), ಕೃಷಿ ಬೆಳವಣಿಗೆಯ ದರ ಕೇವಲ 2.3% . ಹಾಗಿದ್ದರೆ ಈ 7.9% ಬೆಳವಣಿಗೆ ಎಲ್ಲಿಂದ ಬಂತು ಎಂದು ಈ ತಜ್ಞರು ಪ್ರಶ್ನಿಸುತ್ತಿದ್ದಾರೆ.

ಇಡೀ ವರ್ಷದ ಅಂಕಿ–ಅಂಶಗಳನ್ನು ನೋಡಿದಾಗಲೂ ಈ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ. ಇಡೀ ವರ್ಷದ ಅಂಕಿ–ಅಂಶಗಳು ಹೀಗಿವೆ:

ಕೈಗಾರಿಕಾ ಉತ್ಪಾದನಾ ಸೂಚ್ಯಂಕದಲ್ಲಿ ಹೆಚ್ಚಳ ಕೇವಲ 2%

ಕೃಷಿ ಬೆಳವಣಿಗೆ ದರ ಕೇವಲ 1.2%

ರೈಲ್ವೆ ಸಾಗಾಣಿಗೆ ಆದಾಯದಲ್ಲಿ ಹೆಚ್ಚಳ (–)4.5%, ಅಂದರೆ ಇಳಿಕೆ

ಸರಕಾರದ ಬಳಕೆ ಖರ್ಚು 12.8%ದಿಂದ 2.2%ಕ್ಕೆ ನಿಧಾನಗೊಂಡಿತು.

ಉತ್ಪಾದಕ ಆಸ್ತಿಗಳ ರಚನೆಯು ದರವೂ 4.9%ದಿಂದ 3.9%ಕ್ಕೆ ನಿಧಾನಗೊಂಡಿತು.

ಬಂಡವಾಳ ರಚನೆಯ ದರವೂ 32.3%ದಿಂದ 31.2%ಕ್ಕೆ ಇಳಿಯಿತು.

ದೇಶದ ಬಹುಭಾಗಗಳಲ್ಲಿ ರೈತರು ಬರದ ಬವಣೆಯಿಂದ ನರಳುತ್ತಿರುವಾಗ ಕೃಷಿ ಕ್ಷೇತ್ರದಲ್ಲಿ ನಿಜವಾಗಿಯೂ 1.2% ಬೆಳವಣಿಗೆ ಆಗಿದೆಯೇ ಎಂಬ ಪ್ರಶ್ನೆಯನ್ನು ಬದಿಗಿಟ್ಟರೂ 7.6% ಜಿಡಿಪಿ ಬೆಳವಣಿಗೆ ಎಲ್ಲಿಂದ ಬಂತು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ.


ಇಲ್ಲಿಯೇ ಆರ್ಥಿಕ ತಜ್ಞರು 'ಫಡ್ಜ್ ಫ್ಯಾಕ್ಟರ್' ಎನ್ನುವ ಅಂದರೆ ತೇಪೆ ಅಥವ, ಇನ್ನೂ ಸಮರ್ಪಕವಾಗಿ ಹೇಳಬೇಕಾದರೆ 'ದಗಲ್‌ಬಾಜಿ' ಅಂಶದ ಪಾತ್ರ ಬರುವುದು.

ಒಂದು ದೇಶದ ಜಿಡಿಪಿ ಅಥವ ಒಟ್ಟು ಆಂತರಿಕ ಉತ್ಪಾದನೆ ಎಂದರೆ ಎಲ್ಲ ಬಳಕೆದಾರರು ಮಾಡುವ ವೆಚ್ಚಗಳ ಮೊತ್ತ, ಸರಕಾರ ಮಾಡುವ ವೆಚ್ಚಗಳ ಮೊತ್ತ, ಸರಕಾರದ ಹೂಡಿಕೆಗಳು ಖಾಸಗಿ ಹೂಡಿಕೆಗಳು ಇವೆಲ್ಲವುಗಳ ಒಟ್ಟು ಮೊತ್ತ. ಇನ್ನೊಂದೆಡೆಯಲ್ಲಿ, ಈ ಆಂತರಿಕ ಉತ್ಪಾದನೆಯಲ್ಲಿ ಗಳಿಸಿದ ಆದಾಯ ಮತ್ತು ಮಾಡಿದ ಖರ್ಚುಗಳ ಮೊತ್ತವನ್ನು ಜಿಡಿಐ ಅಥವ ಒಟ್ಟು ಆಂತರಿಕ ಆದಾಯ ಎನ್ನುತ್ತಾರೆ. ವಾಸ್ತವವಾಗಿ ಜಿಡಿಪಿ ಮತ್ತು ಜಿಡಿಐ ಒಂದೇ ಆಗಿರಬೇಕು. ಆದರೆ ಸಾಮಾನ್ಯವಾಗಿ ಹಾಗಿರುವುದಿಲ್ಲ. ಇವೆರಡರ ನಡುವಿನ ವ್ಯತ್ಯಾಸವನ್ನು 'ಸಂಖ್ಯಾತ್ಮಕ ಅಸಾಂಗತ್ಯ'(ಸ್ಟಟಿಸ್ಟಿಕಲ್ ಡಿಸ್ಕ್ರೆಪೆನ್ಸಿ)ಎನ್ನುತ್ತಾರೆ. ಇದು ಜಿಡಿಪಿ ಮತ್ತು ಜಿಡಿಐ ನಡುವೆ ಸಮತೋಲ ತರುವ ಅಥವ ತೇಪೆ ಹಾಕುವ ಅಂಶವಾಗಿದ್ದು ಸರಕಾರಗಳು ಇದನ್ನು ತಮ್ಮ ಉದ್ದೇಶಕ್ಕೆ ತಕ್ಕಂತೆ ಬಳಸಿಕೊಳ್ಳುವ ಅವಕಾಶ ಇದೆ. ಆದ್ದರಿಂದ ಇದನ್ನು ಆರ್ಥಿಕತಜ್ಞರು ಅಧಿಕೃತ 'ತೇಪೆ ಅಂಶ' ಅಥವ ದಗಲ್‌ಬಾಜಿ ಅಂಶ ಎನ್ನುತ್ತಾರೆ (ಮೋಹನ್ ಗುರುಸ್ವಾಮಿ, ಸ್ಕ್ರಾಲ್.ಇನ್)

ಈ ಅಧಿಕೃತ 'ಅಸಾಂಗತ್ಯ'ದ ಅಥವ ತೇಪೆಯ ಸಂಖ್ಯೆಯಲ್ಲಿಯೇ ಮೇಲೆ ಹೇಳಿದ ಪ್ರಶ್ನೆಗಳಿಗೆ ಉತ್ತರ ಸಿಗುತ್ತದೆ ಎಂದಿದ್ದಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ತಮ್ಮ ಟ್ವೀಟ್‌ನಲ್ಲಿ. ಮೋಹನ್ ಗುರುಸ್ವಾಮಿಯವರೂ ಮೇಲೆ ಹೇಳಿದ ತಮ್ಮ ಲೇಖನದಲ್ಲಿ ಅದೇ ಅಭಿಪ್ರಾಯಕ್ಕೆ ಬರುತ್ತಾರೆ.

2015–16ರ ನಾಲ್ಕನೇ ತ್ರೈಮಾಸಿಕದ ಅಂಕಿ–ಅಂಶಗಳಲ್ಲಿ ಈ ತೇಪೆ ಸಂಖ್ಯೆಯೇ ರೂ.1,43,000 ಕೋಟಿ, ಹಿಂದಿನ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಇದು ಕೇವಲ ರೂ. 29,933 ಕೋಟಿ ರೂ. ಇತ್ತು. ಅಂದರೆ ಜಿಡಿಪಿ ಮತ್ತು ಜಿಡಿಐ ಲೆಕ್ಕಾಚಾರಗಳಲ್ಲಿ ಇಷ್ಟೊಂದು ದೊಡ್ಡ ಅಂತರ ಏಕೆ ಬಂತು ಎಂಬ ಪ್ರಶ್ನೆಯೇ ಮೇಲೆ ಎತ್ತಿದ ಪ್ರಶ್ನೆ ಉತ್ತರ ನೀಡುವಂತೆ ಕಾಣುತ್ತದೆ.

ಈ ತೇಪೆ ಸಂಖ್ಯೆ ನಾಲ್ಕನೇ ತ್ರೈಮಾಸಿಕದ ಒಟ್ಟು ಜಿಡಿಪಿಯ 51% ಆಗಿದ್ದು, ಇದನ್ನು ಬಿಟ್ಟರೆ ಜಿಡಿಪಿ ಬೆಳವಣಿಗೆ ದರ ಈ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದಲ್ಲಿ 3.9%ಕ್ಕೆ ಇಳಿಯುತ್ತದೆ ಎನ್ನುತ್ತಾರೆ ಸೀತಾರಾಮ್ ಯೆಚೂರಿಯವರು. ಇಡೀ ಹಣಕಾಸು ವರ್ಷದ ಲೆಕ್ಕಾಚಾರದಲ್ಲಿ ಈ ತೇಪೆ ಅಂಶವನ್ನು ಬಿಟ್ಟರೆ ಜಿಡಿಪಿ ಬೆಳವಣಿಗೆ ದರದಲ್ಲಿ 1ಶೇ.ದಷ್ಟು ಇಳಿಕೆಯಾಗುತ್ತದೆ, ಎನ್ನುತ್ತಾರೆ ಮೋಹನ್ ಗುರುಸ್ವಾಮಿಯವರು. ಅಂದರೆ 'ಅಚ್ಛೇದಿನ್' ಹಣಕಾಸು ಮಂತ್ರಿಗಳು ಪ್ರಧಾನ ಮಂತ್ರಿಗಳ ಪರವಾಗಿ ಹೆಮ್ಮೆ ಪಡುತ್ತಿರುವ ಜಿಡಿಪಿ ಬೆಳವಣಿಗೆ ದರ 7.6ಶೇ. ಆಗಿರದೆ 6.6ಶೇ. ಆಗುತ್ತದೆ!



ಸಾರಿಗೆ ಸೌಲಭ್ಯಗಳು ಜನಸಾಮಾನ್ಯರ ಕೈಗೆಟಕುವಂತೆ ಮಾಡುವ ಸಬ್ಸಿಡಿಗಳಿಗೆ ಕತ್ತರಿ, ಮಂತ್ರಿ–ಎಂಪಿಗಳಿಗೆ ವಿಶೇಷ ರೈಲು: ರೈಲ್ವೆ ಇಲಾಖೆ ಗೋಸುಂಬೆತನಕ್ಕೆ ಎಐಎಡಬ್ಲ್ಯುಯು ಖಂಡನೆ

ರೈಲ್ವೆ ಇಲಾಖೆ ಸಾಮಾಜಿಕ ಸೇವೆಯ ಭಾಗವಾಗಿ ನೀಡುತ್ತಿರುವ 50 ರಿಯಾಯಿತಿಗಳನ್ನು ನಿಲ್ಲಿಸುವ ಬಗ್ಗೆ ಯೋಚಿಸುತ್ತಿದೆ ಎಂದು ವರದಿಯಾಗಿದೆ. ಅವುಗಳಿಂದ ರೈಲ್ವೇ ಇಲಾಖೆಗೆ ಬಹಳ ನಷ್ಟವಾಗುತ್ತಿದೆಯಂತೆ, ಈ ರಿಯಾಯಿತಿಗಳಲ್ಲಿ ಹಿರಿಯ ನಾಗರಿಕರಿಗೆ ಕೊಡುವ ಪ್ರಯಾಣ ದರ ರಿಯಾಯಿತಿ, ಆವಶ್ಯಕ ಸರಕುಗಳ ಸಾಗಾಣಿಕೆಗಳಿಗೆ ಕೊಡುವ ರಿಯಾಯಿತಿಗಳು ಕೂಡ ಸೇರಿವೆಯಂತೆ. ಇದನ್ನು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಬಲವಾಗಿ ಖಂಡಿಸಿದೆ.

ಕೇವಲ ಪ್ರಚಾರಕ್ಕಾಗಿ ಖಾಲಿ ಟ್ಯಾಂಕರ್‌ಗಳ ರೈಲು ಕಳಿಸಲು(ಕಳೆದ ತಿಂಗಳು ಕೇಂದ್ರ ಮತ್ತು ಉತ್ತರಪ್ರದೇಶ ರಾಜ್ಯಸರಕಾರಗಳ ಜಗ್ಗಾಟದ ನಡುವೆ ಮಧ್ಯಪ್ರದೇಶದಿಂದ ಒಂದು ಖಾಲಿ ನೀರು ಟ್ಯಾಂಕರುಗಳ ರೈಲನ್ನು ಉತ್ತರಪ್ರದೇಶಕ್ಕೆ ಕಳಿಸಲಾಯ್ತು), ಮಂತ್ರಿಗಳಿಗೆ ಮಾತ್ರವಲ್ಲ, ಆಳುವ ಪಕ್ಷದ ಎಂಪಿಗೂ ವಿಶೇಷ ರೈಲು ಓಡಿಸಿ(ಜೂನ್ 1ರಂದು ಬಿಜೆಪಿ ಸಾಂಸದೆ ಪೂನಮ್ ಮಹಾಜನ್‌ಗಾಗಿ ಭೋಪಾಲ್‌ಗೆ ವಿಶೇಷ ರೈಲು ಓಡಿಸಲಾಯಿತಂತೆ) ನಷ್ಟ ಮಾಡಿಕೊಳ್ಳುವ ಬಗ್ಗೆ ಈ ಬಿಜೆಪಿ ಸರಕಾರಕ್ಕೇನೂ ಬೇಸರವಿಲ್ಲ, ಭಾರೀ ಸಂಪತ್ತಿರುವವರಿಗೆ, ಅವರಲ್ಲಿ ಕೆಲವರು ದೇಶದಿಂದ ಓಡಿಹೋಗುತ್ತಿದ್ದರೂ 5ಲಕ್ಷ ಕೋಟಿ ರೂ.ಗಳ ರಿಯಾಯಿತಿಗಳನ್ನು ದಯಪಾಲಿಸಲೂ ಈ ಸರಕಾರಕ್ಕೆ ಯಾವ ಅಡಚಣೆಯೂ ಇಲ್ಲ, ಅಥವ ಎಂಪಿ, ಎಂಎಲ್‌ಎಗಳ ಸಂಬಳ–ಸಾರಿಗೆ ಹೆಚ್ಚಿಸಿಕೊಳ್ಳಲು ಕೂಡ ಯಾವ ಮುಲಾಜೂ ಇಲ್ಲ. ಆದರೆ ಲಕ್ಷಾಂತರ, ಕೋಟ್ಯಂತರ ಜನಸಾಮಾನ್ಯರಿಗೆ, ಅದರಲ್ಲೂ ಬಡವರಿಗೆ ಕೊಡುವ ರಿಯಾಯಿತಿಗಳು ಮಾತ್ರ ಹೊರೆ ಅನಿಸುತ್ತದೆ ಎಂದು ಪರಿಹಾಸ್ಯ ಮಾಡಿರುವ ಎಐಎಡಬ್ಲ್ಯುಯು ಸಾಮಾನ್ಯ ಭಾರತೀಯ ನಾಗರಿಕರಿಗೆ ನೀಡುತ್ತಿರುವ ಸಬ್ಸಿಡಿಗಳನ್ನು ಮುಂದುವರೆಸಬೇಕು ಮಾತ್ರವಲ್ಲ, ಸರಕಾರದ ಧೋರಣೆಗಳಿಂದಾಗಿ ದಿಕ್ಕಿಲ್ಲದಂತಾಗಿರುವ ಕೃಷಿ ಕೂಲಿಕಾರರಿಗೆ ಮತ್ತು ವಲಸೆ ಕಾರ್ಮಿಕರಿಗೆ ಸಬ್ಸಿಡಿಗಳನ್ನು ಕೊಡಬೇಕು ಎಂದು ಆಗ್ರಹಿಸಿದೆ. ಸಾರಿಗೆ ಸೌಲಭ್ಯ ಜನಸಾಮಾನ್ಯರ ಕೈಗೆಟಕುವಂತೆ ಮಾಡಲು ಸರಕಾರದ ಬೆಂಬಲ ಅಗತ್ಯ, ಅದ್ದರಿಂದ ಯಾವ ಸಬ್ಸಿಡಿಗಳನ್ನೂ ನಿಲ್ಲಿಸಬಾರದು ಎಂದು ದನಿಯೆತ್ತಿ ಆಗ್ರಹಿಸಬೇಕು ಎಂದು ತನ್ನ ಎಲ್ಲ ಘಟಕಗಳಿಗೆ ಎಐಎಡಬ್ಲ್ಯುಯು ಕರೆ ನೀಡಿದೆ.

ರೈತರಿಗೆ ಮೋದಿ ಸರಕಾರದ ವಿಶ್ವಾಸಘಾತ–ಸ್ವಾಮಿನಾಥನ್ ಶಿಫಾರಸುಗಳ ಜಾರಿ ಸಾಧ್ಯವಿಲ್ಲ ಎಂದು ಅಫಿಡವಿಟ್!

ಪುಟ 2ರಿಂದ

ಮಾರುಕಟ್ಟೆಯನ್ನು ವಿಕೃತಗೊಳಿಸುತ್ತದೆ ಎಂದು ಸುಪ್ರಿಂ ಕೋರ್ಟ್ ಮುಂದೆ ಅಫಿಡವಿಟ್ ಕೊಟ್ಟಿದೆ! ರೈತರಿಗೆ ಉಂಟು ಮಾಡಿರುವ ಸಮಸ್ಯೆಗಳು ಸಾಲದೆಂಬಂತೆ , ಕೇಂದ್ರ ಸರಕಾರ ನಿಗದಿ ಪಡಿಸಿದ ಕನಿಷ್ಟ ಬೆಲೆಗಳಿಗಿಂತ ಹೆಚ್ಚಿನ ಬೆಲೆ ಕೊಡಲು ಬೋನಸ್ ಪ್ರಕಟಿಸುವ ರಾಜ್ಯಗಳಿಂದ ಧಾನ್ಯ ಖರೀದಿ ಮಾಡಲಾಗುವುದಿಲ್ಲ ಎಂದು ಬೆದರಿಸುವ ಸರಕಾರೀ ಆದೇಶವನ್ನು ಕೂಡ ಹೊರಡಿಸಿದೆ. ಇದಕ್ಕೂ ಅದು ಕೊಟ್ಟಿರುವ ಕಾರಣ ಇದು ಮಾರುಕಟ್ಟೆಯನ್ನು 'ವಿಕೃತ'ಗೊಳಿಸುತ್ತದೆ ಎಂದು! ಇದೀಗ ಈ ಸರಕಾರ ರೈತ–ವಿರೋಧಿ ನಿಜಸ್ವರೂಪ!

ಸರಕಾರದ ಈ ನಿಜವಾದ ರೈತ–ವಿರೋಧಿ ಸ್ವರೂಪವನ್ನು, ತಾನು ರೈತ–ಸ್ನೇಹಿ ಎಂದು ಬಿಂಬಿಸಲು ಅದು ಹೇಳುತ್ತಿರುವ ಸುಳ್ಳುಗಳನ್ನು ಬಯಲಿಗೆಳೆಯ ಬೇಕು, ಸರಕಾರ ರೈತರಿಗೆ ಬಗೆಯುತ್ತಿರುವ ಈ ವಿಶ್ವಾಸಘಾತವನ್ನು ದೇಶಾದ್ಯಂತ ಪ್ರತಿಭಟಿಸಬೇಕು ಎಂದು ಎಐಕೆಎಸ್ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

ಸಾರ್ವಜನಿಕ ವಲಯದೊಳಕ್ಕೆ ಖಾಸಗೀ ವಲಯದ ಏಜೆಂಟರನ್ನು ತುರುಕುವ ದುಷ್ಟ ಪ್ರಯತ್ನ

ಪುಟ 2 ರಿಂದ

ಈಗ ಈ ವರ್ಷದ ಬಜೆಟಿನಲ್ಲಿ ಪ್ರಕಟಿಸಿರುವಂತೆ ಇವುಗಳ ಆಯಕಟ್ಟಿನ ಮಾರಾಟದೊಂದಿಗೆ, ಇವನ್ನು ಒಳಗಿನಿಂದಲೇ ಬುಡಮೇಲು ಮಾಡುವ ತಂತ್ರ ಇದು ಎಂದು ಸಿಐಟಿಯು ಅಭಿಪ್ರಾಯ ಪಟ್ಟಿದೆ.

ಈ ಕ್ರಮದ ತಿದ್ದುಪಡಿಗಳ ಮೂಲಕ ಕಾರ್ಪೊರೇಟ್‌ಗಳ ಕೈಸೆರೆಯಾಗಿರುವ ಮೋದಿ ಸರಕಾರ ಖಾಸಗೀ ವಲಯದ ಹೆಚ್ಚು ಶೋಷಣಾಕಾರಿ, ದಮನಕಾರಿ ಮತ್ತು ಸರ್ವಾಧಿಕಾರಶಾಹಿ ಖಾಸಗೀ ಮ್ಯಾನೇಜ್‌ಮೆಂಟ್ ವ್ಯವಸ್ಥೆಯನ್ನು ಸಾರ್ವಜನಿಕ ವಲಯದೊಳಕ್ಕೆ ತುರುಕುವ ಪ್ರಯತ್ನವನ್ನೂ ನಡೆಸಿದೆ ಎಂದು ಸಿಐಟಿಯು ಹೇಳಿದೆ.

ಈ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿರುವ ಸಿಐಟಿಯು ಸರಕಾರದ ಈ ಭಂಡ ಸಾರ್ವಜನಿಕ ವಲಯ–ವಿರೋಧಿ ಕ್ರಮದ ವಿರುದ್ಧ ಬಲವಾದ ದನಿಯೆತ್ತಬೇಕು, ನಮ್ಮ ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ಖಾಸಗಿ ಮ್ಯಾನೇಜ್‌ಮೆಂಟಿನ ಪ್ರವೇಶವನ್ನು ನಿಲ್ಲಿಸಲು ನೌಕರರನ್ನು ಅಣಿಗೊಳಿಸಬೇಕು ಎಂದು ಕಾರ್ಮಿಕ ಸಂಘಟನೆಗಳಿಗೆ, ಮತ್ತು ಎಲ್ಲ ದರ್ಜೆಗಳ, ಸಂಯೋಜನೆಗಳ ಎಲ್ಲ ಸಾರ್ವಜನಿಕ ವಲಯದ ನೌಕರರಿಗೆ ಕರೆ ನೀಡಿದೆ.

ಮಾತು–ಮಾತು–ಮಾತು–ಮಾತು

'ಅಭಿವೃದ್ಧಿ ಅಜೆಂಡಾ'ವೂ 'ವೈಯಕ್ತಿಕ ಅಭಿಪ್ರಾಯ'ಗಳೂ


ಒಬ್ಬ ಮಾತಾಡುವ ಪ್ರಧಾನಿಯನ್ನು ಕೊಟ್ಟದ್ದು ಬಿಜೆಪಿ ಸರಕಾರದ ಎರಡು ವರ್ಷಗಳ ಅತಿ ದೊಡ್ಡ ಸಾಧನೆ ಎಂದಿದ್ದಾರೆ ಆಳುವ ಪಕ್ಷದ ಅಧ್ಯಕ್ಷರು. ಇರಬಹುದು. ಆದರೆ ಹತ್ತಾರು ಬಾಯಿಗಳಿಂದ ಬಂದ ಹತ್ತಾರು ಹೇಳಿಕೆಗಳ ಬಗ್ಗೆ ಕೇಳಿದಾಗ ಎಲ್ಲದಕ್ಕೂ ಅವರ ಸಿದ್ಧ ಉತ್ತರ ಒಂದೇ– 'ವೈಯಕ್ತಿಕ' ಅಭಿಪ್ರಾಯಗಳು!

* ಸುಬ್ರಮಣ್ಯ ಸ್ವಾಮಿಯವರು ರಿಝರ್ವ್ ಬ್ಯಾಂಕ್ ಗವರ್ನರ್ ಸಿಐಎ ಏಜೆಂಟ್, ಅವರನ್ನು ಮುಂದುವರೆಸಬಾರದು ಎನ್ನುತ್ತಾರಲ್ಲ!– ಅದು ಅವರ ವೈಯಕ್ತಿಕ ಅಭಿಪ್ರಾಯ.
* ಮೋದಿ ಸಂಪುಟದ ಒಬ್ಬ ಮಹತ್ವದ ಮಂತ್ರಿ ಉಮಾಭಾರತಿ ಸುಬ್ರಮಣ್ಯ ಸ್ವಾಮಿಯವರು ತಮ್ಮ ಹೀರೋ, ಅವರು 2017ರಲ್ಲಿ ಅಯೋಧ್ಯೆಯಲ್ಲಿ ರಾಮದೇವಸ್ತಾನ ಕಟ್ಟಲಾಗುತ್ತದೆ ಎಂದು ಭರವಸೆ ನೀಡಿದ್ದಾಗಿ ಹೇಳಿದ್ದಾರಲ್ಲಾ!–ಅದು ಅವರ ವೈಯಕ್ತಿಕ ಅಭಿಪ್ರಾಯ!
* ಮೋದಿ ಸಂಪುಟದ ಇನ್ನೊಬ್ಬ ಮಂತ್ರಿ ಸಂಜೀವ ಬಲ್ಯಾನ್ ದಾದ್ರಿಯ ಮಹಮ್ಮದ್ ಅಖ್ಲಾಕ್ ಮನೆ ಮುಂದೆ ಸಿಕ್ಕಿತೆನ್ನಲಾದ ಗೋಮಾಂಸವನ್ನು ಬಹಳ ಮಂದಿ ತಿಂದಿದ್ದಾರೆ ಎಂದು ಗಂಭೀರ ಆರೋಪ ಮಾಡಿ ಯಾರ್‍ಯಾರು ಎಂದು ತನಿಖೆ ಮಾಡಬೇಕೆಂದಿದ್ದಾರಲ್ಲಾ!– ಅದು ಅವರ ವೈಯಕ್ತಿಕ ಅಭಿಪ್ರಾಯ.
* ವಿಹೆಚ್‌ಪಿ ಮುಖಂಡೆ ಸಾಧ್ವಿ ಪ್ರಾಚಿ ಭಾರತವನ್ನು ಕಾಂಗ್ರೆಸ್–ಮುಕ್ತ ಮಾಡುವ ಮಿಶನ್ ಈಡೇರಿದೆ ಎಂಬ ಬಿಜೆಪಿ ಅಧ್ಯಕ್ಷರ ಮಾತನ್ನೇ ಮುಂದುವರೆಸಿ ಅದನ್ನೀಗ ಮುಸ್ಲಿಂ–ಮುಕ್ತ ಮಾಡಬೇಕು ಎಂದಿದ್ದಾರಲ್ಲಾ–ಅದೂ ಅವರ ವೈಯಕ್ತಿಕ ಅಭಿಪ್ರಾಯವೇ!

'ಅಭಿವೃದ್ಧಿ ಅಜೆಂಡಾ'ದ ನಂತರ 'ವೈಯಕ್ತಿಕ ಅಭಿಪ್ರಾಯ' ಎಂಬುದು ಬಿಜೆಪಿ ಅಧ್ಯಕ್ಷರ ಇನ್ನೊಂದು ಸಿದ್ಧ ಮಂತ್ರವಾಗಿ ಬಿಟ್ಟಂತೆ ಕಾಣುತ್ತದೆ ಎಂದು ಒಬ್ಬ ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ. ದೇಶದ ಆಳುವ ಪಕ್ಷದ ಅಧ್ಯಕ್ಷರು ದೇಶದ ಸಂವಿಧಾನವನ್ನೇ ಪ್ರಶ್ನಿಸುವ ಈ ಎಲ್ಲ ಗಂಭೀರ ಮತ್ತು ಅಪಾಯಕಾರಿ ಹೇಳಿಕೆಗಳನ್ನು ನೀಡಿರುವವರಿಗೆ ತೋರಿಕೆಗಾದರೂ ಇಂತಹ ಮಾತುಗಳು ಸಲ್ಲ ಎಂದು ಕಿವಿ ಮಾತನ್ನಾದರೂ ಹೇಳಬಹುದು ಎಂದು ಅವರು ನಿರೀಕ್ಷಿಸಿದ್ದರಂತೆ. ಆದರೆ ಅಧ್ಯಕ್ಷರು ಆ 'ವೈಯಕ್ತಿಕ' ಅಭಿಪ್ರಾಯಗಳು ತಪ್ಪು ಎಂದೂ ಹೇಳುವ ಗೋಜಿಗೆ ಹೋಗಿಲ್ಲ. ಬಹುಶಃ ಇವು ಅವರ 'ವೈಯಕ್ತಿಕ' ಅಭಿಪ್ರಾಯಗಳೂ ಆಗಿರಬಹುದು, ಸದ್ಯಕ್ಕೆ ಆಳುವ ಪಕ್ಷದ 'ಅಧಿಕೃತ' ಅಭಿಪ್ರಾಯಗಳಲ್ಲ ಅಷ್ಟೇ ಎಂದು ಅರ್ಥ ಮಾಡಿಕೊಳ್ಳಬೇಕೇ? ಬಹುಶಃ ಅಧಿಕಾರದ ಸ್ಥಾನಗಳಲ್ಲಿ ಇರುವವರ 'ವೈಯಕ್ತಿಕ' ಅಭಿಪ್ರಾಯಗಳ ಬಗ್ಗೆ ಪ್ರಧಾನಿಗಳ ದಿವ್ಯಮೌನಕ್ಕೂ ಇದೇ ಕಾರಣವಿರಬಹುದು.

ಮೋದಿ ಸಂಪುಟದ ಇನ್ನೊಬ್ಬ ಪ್ರಮುಖ ಮಂತ್ರಿ, ಸಂಸದೀಯ ವ್ಯವಹಾರಗಳ ಮಂತ್ರಿ, ಈ ಹಿಂದೆ ಬಿಜೆಪಿ ಅಧ್ಯಕ್ಷರೂ ಆಗಿದ್ದವರು, ಅತ್ತ ಸಂಜೀವ ಬಲ್ಯಾನ್ ಮತ್ತು ಸಾಧ್ವಿ ಪ್ರಾಚಿಯವರು ಉದ್ರೇಕಕಾರಿ ಹೇಳಿಕೆಗಳನ್ನು ಕೊಡುತ್ತಿರುವಾಗಲೇ ಭಾರತ ಜಗತ್ತಿನ ಅತ್ಯಂತ ಸಹಿಷ್ಣು ದೇಶ ಎಂದು ಮತ್ತೆ ಸಾರಿದ್ದಾರೆ.

ಆಳುವ ಪಕ್ಷದ ಅಥವ ಹಿಂದುತ್ವ ಅರ್ಥಕೋಶದಲ್ಲಿ ರಾಷ್ಟ್ರೀಯವಾದದಂತೆ 'ಸಹಿಷ್ಣುತೆ'ಗೂ ಬೇರೆಯೇ ಅರ್ಥವಿರಬಹುದೇ? ಅಥವ ಇಂತಹ ಹೇಳಿಕೆಗಳನ್ನು ದೇಶದ ಜನತೆ ಇನ್ನೂ ಸಹಿಸಿಕೊಂಡಿದ್ದಾರೆ ಎಂಬ ಅರ್ಥದಲ್ಲಿರಬಹುದೇ?





ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ ಮತ್ತು ಶುಭನೀಲ್, ಡೆಕ್ಕನ್ ಕ್ರಾನಿಕಲ್



ಕೆ.ಎಂ.ನಾಗರಾಜ್

ಜಗತ್ತಿನಲ್ಲಿರುವ ಬಡತನವನ್ನು ಕೊನೆಗೊಳಿಸಲು ಸಾಧ್ಯವಿದೆ



ಐಎಲ್‌ಒ ವರದಿಯ ಪ್ರಕಾರ ಇಡೀ ವಿಶ್ವದ 700 ಕೋಟಿ ಜನಸಂಖ್ಯೆಗೆ ಹೋಲಿಸಿದರೆ ಕಡು ಬಡವರ ಸಂಖ್ಯೆ ಸುಮಾರು ಶೇ. 30 ರಷ್ಟಿದೆ(ಸುಮಾರು ಇನ್ನೂರು ಕೋಟಿ). ಇಷ್ಟು ಮಂದಿಯ ಬಡತನ ನೀಗಿಸಲು ಬೇಕಾಗುವ ವಿಶ್ವ ಜಿಡಿಪಿಯ ಕೇವಲ ಶೇ. 0.8ರಷ್ಟು ಸಣ್ಣ ಪ್ರಮಾಣದ ಹಣವನ್ನು ಯಾರೊಬ್ಬರಿಂದಲೂ ಕಸಿಯಬೇಕಿಲ್ಲ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್. ಇದಕ್ಕೆ ಬಡವರಲ್ಲದವರಿಂದ ಯಾವ ತ್ಯಾಗದ ಅವಶ್ಯಕತೆಯೂ ಇಲ್ಲದಿರುವುದರಿಂದ ಬಡತನ ನಿವಾರಣೆಗೆ ಯಾರ ಅಡ್ಡಿಯೂ ಇರಲು ಸಾಧ್ಯವಿಲ್ಲ, ಆದರೆ ತಡೆಯೊಡ್ಡುತ್ತಿರುವುದು ಬಿಕ್ಕಟ್ಟಿಗೊಳಗಾಗಿರುವ ಬಂಡವಾಳಶಾಹಿಯೇ. ವರಮಾನಗಳ ಅಂತರ ಸರಿಪಡಿಸುವುದು ಬಂಡವಾಳಶಾಹಿಗೆ ನಿಷಿದ್ಧ. ಅದು ಬಂಡವಾಳಶಾಹಿ ಅಧಿನಾಯಕತ್ವದ (ಅ)ನೈತಿಕತೆಯ ಚಿಹ್ನೆ ಎನ್ನುತ್ತಾರೆ ಅವರು.

ಜಾಗತಿಕ ಮಟ್ಟದಲ್ಲಿ ಉದ್ಯೋಗ ಮತ್ತು ಸಾಮಾಜಿಕ ಆಗು ಹೋಗುಗಳ ಬಗ್ಗೆ ಅಂತರಾಷ್ಟ್ರಿಯ ಕಾರ್ಮಿಕ ಸಂಘಟನೆಯು(ILO) ಪ್ರತಿ ವರ್ಷವೂ ಒಂದು ವರದಿ ಪ್ರಕಟಿಸುತ್ತದೆ. ಬಡತನ ಕೊನೆಗೊಳಿಸಲು ಉದ್ಯೋಗಗಳ ಮಾರ್ಪಾಡು(Transforming Jobs to End Poverty) ಎಂಬ ಶೀರ್ಷಿಕೆಯಡಿಯಲ್ಲಿ, ಮೇ 18ರಂದು ಈ ವರ್ಷದ ವರದಿ ಪ್ರಕಟವಾಗಿದೆ. ಯಾವ ಮಟ್ಟದ ಬಡತನ ಜಗತ್ತಿನಲ್ಲಿದೆ ಮತ್ತು ಅದನ್ನು ಕೊನೆಗೊಳಿಸಲು ಎಷ್ಟು ಹಣವನ್ನು ಬಡವರ ವರಮಾನಗಳತ್ತ ಹರಿಸಬೇಕಾಗುತ್ತದೆ ಎಂಬ ಒಂದು ಅಂದಾಜು ಈ ವರದಿಯಲ್ಲಿದೆ.

ಬಡವರೆಂದರೆ ಯಾರು?

ವಿಶ್ವ ಬ್ಯಾಂಕ್‌ನ 2011ರ ಅಳತೆಗೋಲಿನ ಪ್ರಕಾರ, ಉದಯೋನ್ಮುಖ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ, ಒಬ್ಬ ವ್ಯಕ್ತಿಯು ದಿನ ಒಂದಕ್ಕೆ 1.90 ಡಾಲರ್‌ಗಿಂತ ಕಡಿಮೆ ಹಣದಲ್ಲಿ ಜೀವನ ಸಾಗಿಸುತ್ತಿದ್ದರೆ ಅಂತಹ ವ್ಯಕ್ತಿಗಳನ್ನು ಕಡು ಬಡವರೆಂದೂ ಮತ್ತು 1.90ರಿಂದ ಹಿಡಿದು 3 ಡಾಲರ್ ಒಳಗಿನ ಹಣದಲ್ಲಿ ಬದುಕುತ್ತಿರುವವರನ್ನು ಸಾಧಾರಣ ಮಟ್ಟದ ಬಡವರೆಂದೂ ಗುರುತಿಸಲಾಗಿದೆ. ವಿಶ್ವ ಬ್ಯಾಂಕ್ ಸಿದ್ಧಪಡಿಸಿರುವ ಈ ಬಡತನ ರೇಖೆಗಳನ್ನು ಬೇರೆ ಬೇರೆ ದೇಶಗಳ ಕರೆನ್ಸಿಗಳಿಗೆ ಪರಿವರ್ತಿಸಿ ಆಯಾ ದೇಶಗಳ ಬಡತನದ ರೇಖೆಗಳೆಂದು ಕರೆಯಲಾಗಿದೆ.

ಡಾಲರ್‌ನಲ್ಲಿ ಲೆಕ್ಕಹಾಕಿರುವ ಬಡತನ ರೇಖೆಯನ್ನು ರೂಪಾಯಿ ಮೌಲ್ಯದಲ್ಲಿ ವ್ಯಕ್ತಪಡಿಸಿದಾಗ ಸ್ವಲ್ಪ ಮಟ್ಟಿನ ಗೊಂದಲ ಉಂಟಾಗುತ್ತದೆ. ಅದನ್ನು ಹೀಗೆ ಅರ್ಥಮಾಡಿಕೊಳ್ಳಬಹುದು: ಒಂದು ಡಾಲರ್‌ಗೆ ಈಗ 67 ರೂಗಳ ವಿನಿಮಯ ಸಿಗುತ್ತದೆ. ಆದರೆ, ಒಂದು ಬಡಕುಟುಂಬವು ಬಳಸುವ ಪದಾರ್ಥಗಳು ಮತ್ತು ಸೇವೆಗಳನ್ನೊಳಗೊಂಡ ಬುಟ್ಟಿಯ ಮೌಲ್ಯವು ರೂಪಾಯಿಗಳ ಲೆಕ್ಕದಲ್ಲಿ ಡಾಲರ್‌ನ 67 ಪಟ್ಟು ದೊಡ್ಡದಿರಬೇಕೆಂದಿಲ್ಲ. ಅದು ಸುಮಾರು 20 ಪಟ್ಟು ದೊಡ್ಡದಿರಬಹುದು. ಆಗ, ಕೊಳ್ಳುವ ಶಕ್ತಿಯ ಸಮಮೌಲ್ಯವು (purchasing power parity-PPP) ಒಂದು ಡಾಲರ್‌ಗೆ 20 ರೂಪಾಯಿಗಳೆಂದಾಗುತ್ತದೆ. ವಿಶ್ವ ಬ್ಯಾಂಕ್, ಬಡತನರೇಖೆಯನ್ನು ಸಿದ್ಧಪಡಿಸುವ ಸಮಯದಲ್ಲಿ, ಬೇರೆ ಬೇರೆ ದೇಶಗಳು ತಮ್ಮ ಪದಾರ್ಥಗಳ ಬೆಲೆಗಳನ್ನು ಆಧರಿಸಿ ತಮ್ಮ ದೇಶದ ಕರೆನ್ಸಿಯಲ್ಲಿ ಲೆಕ್ಕ ಹಾಕಿದ ರಾಷ್ಟ್ರೀಯ ಬಡತನ ರೇಖೆಗಳ ಮೊತ್ತವನ್ನು ಡಾಲರ್‌ಗೆ ಪರಿವರ್ತಿಸಿ ಒಂದು ಬಡತನ ರೇಖೆಯನ್ನು ರಚಿಸುತ್ತವೆ. ಪುನಃ ಅದನ್ನು ಬೇರೆ ಬೇರೆ ದೇಶಗಳ ಕರೆನ್ಸಿಗೆ ಪರಿವರ್ತಿಸಿ, ಆ ದೇಶಗಳ ಬಡತನ ರೇಖೆಗಳೆಂದು ಗುರುತಿಸಲಾಗುತ್ತದೆ. ಇಸವಿ 2011ನ್ನು ಮೂಲ ವರ್ಷವೆಂದು ಇಲ್ಲಿ ತಿಳಿಯಬೇಕು. ಬಡತನ ರೇಖೆಯನ್ನು ಬೆಲೆಗಳ ಸೂಚ್ಯಂಕದೊಂದಿಗೆ ಹೋಲಿಸಿ ಲೆಕ್ಕಮಾಡಿದರೆ ನಂತರದ ವರ್ಷಗಳ ಬಡತನ ರೇಖೆಯ ಅಂಕಿ-ಅಂಶಗಳನ್ನು ಪಡೆಯಬಹುದು.

ಜಗತ್ತಿನಲ್ಲಿರುವ ಬಡವರ ಸಂಖ್ಯೆ ಎಷ್ಟು?

ILO ವರದಿಯಲ್ಲಿ, ಇಸವಿ 2012ರಲ್ಲಿ, ಉದಯೋನ್ಮುಖ ಮತ್ತು ಅಭಿವೃದ್ಧಿಶೀಲ ದೇಶಗಳ ಒಟ್ಟು ಜನಸಂಖ್ಯೆಯ ಶೇ.36.2 ಮಂದಿ ಅಥವಾ ಸುಮಾರು ಇನ್ನೂರು ಕೋಟಿ ಜನರು ಬಡತನದಿಂದ ನರಳುತ್ತಿದ್ದರೆಂದೂ ಮತ್ತು ಅವರಲ್ಲಿ ಶೇ.15ರಷ್ಟು ಮಂದಿ ಕಡು ಬಡವರೆಂದೂ ಗುರುತಿಸಲಾಗಿದೆ. ಇಡೀ ವಿಶ್ವದ ಏಳು ನೂರು ಕೋಟಿ ಜನಸಂಖ್ಯೆಗೆ ಹೋಲಿಸಿದರೆ ಕಡು ಬಡವರ ಸಂಖ್ಯೆ ಸುಮಾರು ಶೇ. 30 ರಷ್ಟಿದೆ(ಸುಮಾರು ಇನ್ನೂರು ಕೋಟಿ).

ಉದಯೋನ್ಮುಖ ಮತ್ತು ಅಭಿವೃದ್ಧಿಶೀಲ ದೇಶಗಳಲ್ಲಿ ಬಡತನ ಇಳಿಯುತ್ತಿದೆ ಎಂದುILOಹೇಳಿದೆ. ಆದರೆ, ILOಈ ಅಂಕಿ ಅಂಶಗಳನ್ನು ವಿಶ್ವ ಬ್ಯಾಂಕಿನಿಂದ ಪಡೆದಿದೆ. ವಿಶ್ವ ಬ್ಯಾಂಕ್ ಈ ಅಂಕಿ ಅಂಶಗಳನ್ನು ಇಂಡಿಯಾದಂತಹ ಬೇರೆ ಬೇರೆ ದೇಶಗಳು ಸಿದ್ಧಪಡಿಸಿರುವ ಬಡತನ ರೇಖೆಗಳಿಂದ ಕಲೆಹಾಕಿದೆ. ನಮ್ಮದೇಶದಲ್ಲಿ ಬಡತನ ಇಳಿಯುತ್ತಿದೆ ಎಂದು ಭಾರತವೂ ಹೇಳಿಕೊಳ್ಳುತ್ತಿದೆ.ಅದನ್ನೇILO ಪ್ರತಿಧ್ವನಿಸುತ್ತಿದೆ. ಹಾಗಾಗಿ, ILO ಹೇಳಿದ ಕೂಡಲೇ ಅದೇನೂ ವೇದವಾಕ್ಯವಾಗುವುದಿಲ್ಲ. ಏಕೆಂದರೆ, ಭಾರತದ ವಿಷಯದಲ್ಲಿ ಬಡತನ ಇಳಿಯುತ್ತಿದೆ ಎಂಬ ಹೇಳಿಕೆ ಸತ್ಯಕ್ಕೆ ದೂರವಾಗಿದೆ.

ಬಡತನ ಅಳಿಸಿಹಾಕಲು ಎಷ್ಟು ಹಣ ಬೇಕು?

ಎಲ್ಲಾ ಬಡವರನ್ನು ಒಟ್ಟಿಗೆ ಸೇರಿಸಿ ನೋಡಿದರೆ ಅವರ ತಲಾ ಬಳಕೆಯ ಖರ್ಚುಗಳ (per capita consumption expenditure) ಮತ್ತು ಬಡತನ ರೇಖೆಯ ನಡುವೆ ಒಂದು ಅಂತರವಿದೆ. ಇದು ಅವರ ವರಮಾನಗಳ ಅಂತರದ (income gap) ಮೊತ್ತ ಎಂದು ILO ಹೇಳುತ್ತದೆ. ಬಡವರ ವರಮಾನಗಳಿಗೆ ಸಂಬಂಧಿಸಿದ ದತ್ತಾಂಶಗಳು ಲಭ್ಯವಿಲ್ಲದಿರುವುದರಿಂದ, ಅವರ ತಲಾ ಬಳಕೆಯ ಖರ್ಚುಗಳನ್ನು ಮಾತ್ರ ಪರಿಗಣಿಸಿ ಈ ಲೆಕ್ಕಾಚಾರ ಮಾಡಲಾಗಿದೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಇದೇ ಮೊತ್ತದ ಹಣವನ್ನು(income gap) ಬಡವರಿಗೆ ವರ್ಗಾಯಿಸಿದರೆ, (ಅಂದರೆ, ಬಡತನ ರೇಖೆಗಿಂತ ಅವರಿಗೆ ಎಷ್ಟು ಹಣ ಕಡಿಮೆ ಬೀಳುತ್ತದೆಯೋ ಅಷ್ಟು ಹಣವನ್ನು ಪ್ರತಿ ಬಡ ವ್ಯಕ್ತಿಗೂ ವರ್ಗಾಯಿಸಿದರೆ) ಬಡತನವನ್ನು ಸಂಪೂರ್ಣವಾಗಿ ತೊಡೆದು ಹಾಕಬಹುದು. ಇಡೀ ವಿಶ್ವದಲ್ಲಿ ಕಡು ಬಡತನ ಮತ್ತು ಸಾಧಾರಣ ಮಟ್ಟದ ಬಡತನ ಎರಡನ್ನೂ ತೊಡೆದು ಹಾಕಲು, 2012ನೇ ಇಸವಿಗೆ ಸಂಬಂಧಿಸಿ ಹೇಳುವುದಾದರೆ, ಸುಮಾರು 600 ಬಿಲಿಯನ್ ಡಾಲರ್‌ಗಳಷ್ಟು ಅಂದರೆ, ಆ ವರ್ಷದ ವಿಶ್ವ ಜಿಡಿಪಿಯ ಶೇ.0.8ರಷ್ಟು ಹಣಬೇಕಾಗುತ್ತಿತ್ತು.

ಈ 600 ಬಿಲಿಯನ್ ಡಾಲರ್ ಹಣವನ್ನು ವಿಶ್ವದ ಎರಡು ಬಿಲಿಯನ್ ಮಂದಿ ಬಡವರಿಗೆ ಹಂಚಿದರೆ ಪ್ರತಿ ವ್ಯಕ್ತಿಗೆ ವರ್ಷಕ್ಕೆ 300 ಡಾಲರ್ ಅಂದರೆ, ದಿನಕ್ಕೆ 0.82 ಡಾಲರ್ ಹಣ ಸಿಗುತ್ತದೆ. ಉದಯೋನ್ಮುಖ ಮತ್ತು ಅಭಿವೃದ್ಧಿಶೀಲ ದೇಶಗಳ ಒಬ್ಬ ಬಡ ವ್ಯಕ್ತಿಯ ಪ್ರತಿ ದಿನದ ಖರ್ಚಿನಲ್ಲಿ, ಬಡತನ ರೇಖೆಯ 3.10 ಡಾಲರ್ ಮಟ್ಟದಲ್ಲಿ, ಸರಾಸರಿ 0.82 ಡಾಲರ್‌ಗಳಷ್ಟು ಕಡಿಮೆ ಬೀಳುತ್ತಿತ್ತು. ಇದು ಬಡತನ ರೇಖೆಯ ಕಾಲು ಭಾಗದಷ್ಟು ಮೊತ್ತ. ಪ್ರತಿ ದಿನ ಕಡಿಮೆ ಬೀಳುವ ಈ 0.82 ಡಾಲರ್‌ಗಳಷ್ಟು ಹಣವನ್ನು ಪ್ರತಿಯೊಬ್ಬ ಬಡ ವ್ಯಕ್ತಿಗೂ ನೇರ ಹಣ ವರ್ಗಾವಣೆಯ ಮೂಲಕವಾಗಲಿ ಅಥವಾ ಸಾಮಾಜಿಕ ರಕ್ಷಣೆ ಒದಗಿಸುವ ಮೂಲಕವಾಗಲಿ ತಲುಪಿಸಿದಲ್ಲಿ ವಿಶ್ವದಲ್ಲಿ ಬಡತನದಿಂದ ನರಳುತ್ತಿರುವ ಎಲ್ಲರನ್ನೂ ಮೇಲೆತ್ತಬಹುದು.

ಬಡತನ ನಿರ್ಮೂಲನೆಯ ಹೊಣೆ ಯಾರದ್ದು?

ಬಡತನ ಅಳಿಸಿಹಾಕುವ ಸಲುವಾಗಿ ಬಡವರಿಗೆ ನೇರವಾಗಿ ಹಣ ವರ್ಗಾವಣೆ ಮಾಡುವುದಕ್ಕಿಂತಲೂ ಅವರಿಗೆ ಒಳ್ಳೆಯ ಕೆಲಸಗಳನ್ನು ಕಲ್ಪಿಸುವುದು ಉತ್ತಮ ಮಾರ್ಗವೆಂದು ಖಚಿತವಾಗಿ ಹೇಳಬಹುದು. ಆದರೆ, ಯಾವ ಮಾರ್ಗ ಪ್ರಶಸ್ತವಾದುದು ಎಂಬುದಕ್ಕಿಂತಲೂ ಮುಖ್ಯವಾದ ವಿಷಯ ಎಷ್ಟು ಕಡಿಮೆ ಹಣದಲ್ಲಿ ಭೂಮಿಯ ಮೇಲಿರುವ ಬಡತನವನ್ನು ನಿರ್ಮೂಲನೆ ಮಾಡಲು ಸಾಧ್ಯವಿದೆ ಎಂಬುದು. ಜಗತ್ತಿನ ವರಮಾನದ ಶೇ. 0.8ರಷ್ಟು ಸಣ್ಣ ಮೊತ್ತದ ಹಣ ಬಡವರ ಕೈ ಸೇರುವಂತಾದರೆ ಅವರನ್ನು ಬಡತನದಿಂದ ಪಾರು ಮಾಡಬಹುದು. ಹಾಗಿದ್ದರೂ, ಯಾರೊಬ್ಬರೂ ಈ ಬಗ್ಗೆ ಸೊಲ್ಲೆತ್ತದಿರುವುದು ಎದ್ದು ಕಾಣುವಂತಿದೆ. ವರಮಾನಗಳ ಇಷ್ಟು ಸಣ್ಣ ಪ್ರಮಾಣದ ಅಂತರವು (income gap) ಬಡತನದ ಸಮಸ್ಯೆಯು ಹಿಂದಿರುವ ಕಾರಣಎಂಬುದನ್ನು ಗುರುತಿಸಿರುವ ILOವರದಿಯು ತಕ್ಷಣ ಅದನ್ನು ಬಡ ದೇಶಗಳ ಜಿಡಿಪಿಗೆ ಹೋಲಿಸುತ್ತದೆ ಮತ್ತು ಬಡತನ ನಿರ್ಮೂಲನೆ ಮಾಡುವ ಹೊಣೆಯನ್ನು ಆ ದೇಶಗಳ ಮೇಲೆ ಹೊರಿಸುತ್ತದೆ.

ಪ್ರತಿಯೊಂದು ದೇಶವೂ ಒಂದು ಪ್ರತ್ಯೇಕ ದ್ವೀಪವಾಗಿದ್ದಿದ್ದರೆ ಅಥವಾ ಬೇರೆ ಬೇರೆ ದೇಶಗಳ ನಡುವೆ ಪರಸ್ಪರ ಸಂಬಂಧಗಳಿಲ್ಲದಿದ್ದರೆ, ಬಡತನತನದಿಂದ ಒದ್ದಾಡುತ್ತಿರುವ ಈ ದೇಶಗಳು ತಮ್ಮ ದೇಶದ ಬಡತನವನ್ನು ಕೊನೆಗೊಳಿಸುವ ಜವಾಬ್ದಾರಿಯನ್ನು ತಾವೇ ನಿರ್ವಹಿಬೇಕು ಎಂಬ ILO ವರದಿಯ ಸಲಹೆಗೆ ಒಂದು ಆಧಾರ ಕಾಣುತ್ತಿತ್ತು. ಆದರೆ, ವಾಸ್ತವ ಪರಿಸ್ಥಿತಿ ಅದಲ್ಲ. ಈಗ ಅಭಿವೃದ್ಧಿ ಪಥದಲ್ಲಿರುವ ದೇಶಗಳು ಕರಾರುವಾಕ್ಕಾಗಿ ಹಿಂದೆ ವಸಾಹತುಗಳಾಗಿದ್ದವು. ಈ ವಸಾಹತುಗಳ ಸಂಪತ್ತನ್ನು ವ್ಯವಸ್ಥಿತವಾಗಿ ಶತಮಾನಗಳ ಉದ್ದಕ್ಕೂ ಸಮ್ರಾಜ್ಯಶಾಹಿ ದೇಶಗಳು ಲೂಟಿ ಹೊಡೆದಿವೆ. ಆಮದುಗಳ ಮೂಲಕ ವಸಾಹತುಗಳಲ್ಲಿದ್ದ ವೃತ್ತಿ ಕೌಶಲ್ಯಗಳನ್ನು ಮತ್ತು ಕೈ ಕಸುಬುಗಳನ್ನು ನಾಶಮಾಡಲಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಸ್ಥಳೀಯ ಉದ್ಯೋಗಗಳು ಶಾಶ್ವತವಾಗಿ ನಾಶವಾಗಿರುವುದೇ ಈ ದೇಶಗಳ ಬಡತನದ ಹಿಂದಿರುವ ಕಾರಣ. ಜಾಗತೀಕರಣದ ಮೂಲಕ ಈ ಉದ್ಯೋಗ ನಾಶದ ಪ್ರಕ್ರಿಯೆ ಈವತ್ತಿಗೂ ಮುಂದುವರಿಯುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳು ಈ ದೇಶಗಳ ಪ್ರಕೃತಿ ಸಂಪತ್ತನ್ನು ದುಗ್ಗಾಣಿದರದಲ್ಲಿ ಬಾಚಿಕೊಳ್ಳುತ್ತಿವೆ. ರೈತರು ಮತ್ತು ಸಣ್ಣಉತ್ಪಾದಕರು ಕಾರ್ಪೊರೇಟ್‌ಗಳ ಬಂಡವಾಳ ಶೇಖರಣೆಯ ಪ್ರವೃತ್ತಿಗೆ ಸರಕಾಗಿದ್ದಾರೆ. ಈ ದೇಶಗಳ ಸರ್ಕಾರಗಳು ಬಡವರಿಗೆ ಸಣ್ಣ ಪುಟ್ಟರಿಯಾಯ್ತಿ ತೋರಿಸಿದರೂ ಈ ಕಾರ್ಪೊರೇಟ್‌ಗಳು ಕಣ್ಣು ಕೆಂಪಗೆ ಮಾಡಿಕೊಳ್ಳುತ್ತವೆ.

ಹೊರೆಯೇ ಅಲ್ಲ

ಒಟ್ಟಿನಲ್ಲಿ, ಒಂದು ಜಾಗತೀಕರಣಗೊಂಡ ಪ್ರಪಂಚದಲ್ಲಿ ನಾವಿಂದು ಬದುಕುತ್ತಿರುವುದರಿಂದ ಮತ್ತು ಅದೇ ಕಾರಣದಿಂದ ನಮ್ಮ ಬಯಕೆಗಳು ಈಡೇರುತ್ತವೆಂದು ಭಾವಿಸಿಕೊಳ್ಳುತ್ತಿರುವುದರಿಂದ, ಬಡತವನ್ನೂ ಮತ್ತು ಅದರ ನಿವಾರಣೆಯನ್ನೂ ಒಂದು ಜಾಗತಿಕ ಸಮಸ್ಯೆಯಾಗಿಯೇ ನೋಡಬೇಕಾಗುತ್ತದೆ. ILO ವರದಿ ಏನನ್ನು ಸೂಚಿಸುತ್ತದೆ ಎಂದರೆ ಬಡತನ ಕೊನೆಗೊಳಿಸುವ ಜವಾಬ್ದಾರಿಯು ಹೆಚ್ಚೆಂದರೆ ಒಂದು ಸಣ್ಣ ಹೊರೆ ಎಂದು.

ಹಾಗೆ ನೋಡಿದರೆ ಅದು ಒಂದು ಹೊರೆಯೇ ಅಲ್ಲ. ವಿಶ್ವ ಅರ್ಥವ್ಯವಸ್ಥೆಯು ಬಿಕ್ಕಟ್ಟಿಗೆ ಒಳಗಾಗಿರುವ ಸಮಯದಲ್ಲಿ, ವಿಶ್ವ ಜಿಡಿಪಿಯ ಕೇವಲ ಶೇ. 0.8ರಷ್ಟು ಸಣ್ಣ ಪ್ರಮಾಣದ ವರಮಾನಗಳ ಅಂತರ (income gap) ತುಂಬಲು ಬೇಕಾಗುವ ಹಣವನ್ನು ಯಾರೊಬ್ಬರಿಂದಲೂ ಕಸಿಯಬೇಕಿಲ್ಲ. ಬಳಕೆಯಾಗದೆ ಬಿದ್ದಿರುವ ಯಂತ್ರೋಪಕರಣಗಳು ಮತ್ತು ನಿರುದ್ಯೋಗಿಗಳನ್ನು ಬಳಸಿಕೊಂಡು ಈ ಹಣವನ್ನು ಉತ್ಪಾದಿಸಬಹುದು ಮತ್ತು ಅದನ್ನು ಒಂದು ದತ್ತಿರೂಪದಲ್ಲಿ ಬಡವರಿಗೆ ಕೊಡಬಹುದು. ಹಾಗೆ ಮಾಡಿದಲ್ಲಿ, ನಿಷ್ಕ್ರಿಯವಾಗಿ ಉಳಿದಿರುವ ಉತ್ಪಾದನಾ ಸಾಮರ್ಥ್ಯದ ಬಳಕೆಯಿಂದಾಗಿ ಈ ಸಣ್ಣ ಪ್ರಮಾಣದ ಹಣದ ಜೊತೆಗೆ ಅದರ ಅನೇಕ ಪಟ್ಟು ಹೆಚ್ಚು ಉತ್ಪಾದನೆ ಮಾಡಬಹುದು.

ಒಂದು ಉದಾಹರಣೆಯ ಮೂಲಕ ಈ ಅಂಶವನ್ನು ಸ್ಪಷ್ಟಪಡಿಸಬಹುದು. ಈಗಿನ ಜಾಗತಿಕ ಉತ್ಪತ್ತಿ 100 ಯೂನಿಟ್ ಎಂದೂ ಮತ್ತು ಆ ಉತ್ಪತ್ತಿಯಿಂದ ಬಂದ ವರಮಾನದಲ್ಲಿ ಸಾಧಾರಣವಾಗಿ ಶೇ.25ರಷ್ಟು ಉಳಿತಾಯವಾಗುತ್ತದೆ ಎಂದೂ ಊಹಿಸಿಕೊಳ್ಳೋಣ. ಈಗ, ವಿಶ್ವದಲ್ಲಿ ಬಡತನ ಅಳಿಸಿಹಾಕಲು ವಿಶ್ವದ ಎಲ್ಲ ಬಡವರಿಗೆ ದೇಣಿಗೆ ಕೊಡುವ ಸಲುವಾಗಿ ವಿಶ್ವ ಜಿಡಿಪಿಯ 0.8 ರಷ್ಟು ಹಣವನ್ನು ಹೊಂದಿಸಲು ಒಟ್ಟು ವಿಶ್ವಉತ್ಪತ್ತಿಯನ್ನು 3.2 ಯೂನಿಟ್‌ನಷ್ಟು ಹೆಚ್ಚಿಸಬೇಕಾಗುತ್ತದೆ.ಅದರಲ್ಲಿ 0.8 ರಷ್ಟು ಮೌಲ್ಯದ ಉಳಿತಾಯವಾಗುತ್ತದೆ. ಅದನ್ನು ಸರ್ಕಾರಗಳು ಸಾಲವಾಗಿ ಪಡೆದು ಬಡವರಿಗೆ ದೇಣಿಗೆ ಕೊಡುವ ಸಲುವಾಗಿ ಬಳಸುತ್ತವೆ ಮತ್ತು ಉಳಿದ 2.4 ಭಾಗ ಉತ್ಪತ್ತಿಯನ್ನು ಬಡವರಲ್ಲದವರು ಉಪಭೋಗಿಸುತ್ತಾರೆ. ಅಂದರೆ, ಬಡತನ ನಿವಾರಣೆಯು ಬಡವರಲ್ಲದವರ ಉಪಭೋಗವನ್ನು ವಾಸ್ತವವಾಗಿ ಹೆಚ್ಚಿಸುತ್ತದಲ್ಲದೆ ನಿರ್ಬಂಧಿಸುವುದಿಲ್ಲ.

ಜಗತ್ತಿನಲ್ಲಿರುವುದು ಒಂದೇ ಒಂದು ಸರ್ಕಾರವಲ್ಲ. ಅನೇಕ ಸರ್ಕಾರಗಳಿವೆ. ಆದ್ದರಿಂದ, ಬೇರೆ ಬೇರೆ ಸರ್ಕಾರಗಳು ವಿಶ್ವ ಜಿಡಿಪಿಯ 0.8 ರಷ್ಟು ಉತ್ಪತ್ತಿಯನ್ನು ಯಾವರೀತಿಯಲ್ಲಿ ವಂತಿಕೆಯಾಗಿ ಕೊಡಬಹುದು ಎಂಬುದನ್ನು ಕೂಲಂಕುಶವಾಗಿ ಲೆಕ್ಕಹಾಕಬೇಕಾಗುತ್ತದೆ. ಅದನ್ನು ಕಾರ್ಯರೂಪಕ್ಕೆ ತರುವ ಏರ್ಪಾಟುಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.ನಮಗೆ ಬೇಕಾಗಿರುವುದು ಅಷ್ಟೇ. ವಿಶ್ವ ಬಡತನವನ್ನು ತೊಡೆದುಹಾಕಲು, ತತ್ವತಃ, ಯಾರೊಬ್ಬರೂ ಏನನ್ನೂ ತ್ಯಾಗ ಮಾಡಬೇಕಿಲ್ಲ. ಬದಲಿಗೆ, ಅದರಿಂದ ಎಲ್ಲರೂ ಮೊದಲಿಗಿಂತ ಉತ್ತಮ ಸ್ಥಿತಿಯಲ್ಲಿರುತ್ತಾರೆ.

ಬಡತನ ನಿವಾರಣೆಗೆ ಅಡೆ ತಡೆಗಳಿವೆಯೆ?

ಹಾಗಾದರೆ, ಬಡತನದ ವಿರುದ್ಧ ಜಯಗಳಿಸಲು ಏನಾದರೂ ಅಡೆ ತಡೆಗಳಿವೆಯೆ? ಬಡವರಲ್ಲದವರಿಂದ ಯಾವ ತ್ಯಾಗದ ಅವಶ್ಯಕತೆಯೂ ಇಲ್ಲದಿರುವುದರಿಂದ ಯಾರ ಆಕ್ಷೇಪವೂ ಇರುವುದಿಲ್ಲ. ಜಗತ್ತಿನಲ್ಲಿ ಅನೇಕ ಸರ್ಕಾರಗಳಿದ್ದರೂ ಕಾರ್ಯರೂಪಕ್ಕಿಳಿಸುವಾಗ ಎದುರಾಗುವ ಸಮಸ್ಯೆಗಳನ್ನು ಇತ್ಯರ್ಥ ಪಡಿಸಬಹುದು. ಆದ್ದರಿಂದ ಅವೂ ತಡೆಯೊಡ್ಡಲಾರವು. ತಡೆಯೊಡ್ಡುತ್ತಿರುವುದು ಬಿಕ್ಕಟ್ಟಿಗೊಳಗಾಗಿರುವ ಬಂಡವಾಳಶಾಹಿಯೇ. 'ನೀನು ಹಣವಂತನಾಗಿಲ್ಲದಿದ್ದರೆ ನಿನ್ನ ಅನ್ನ ಹುಟ್ಟುವುದು ನಿನ್ನ ಬೆವರಿನಲ್ಲೇ ಎನ್ನುವುದೇ ಬಂಡವಾಳಶಾಹಿಯ ನೈತಿಕತೆ'. ವರಮಾನಗಳ ಅಂತರ ಸರಿಪಡಿಸುವುದು ಬಂಡವಾಳಶಾಹಿಗೆ ನಿಷಿದ್ಧ. ಅದು ಬಂಡವಾಳಶಾಹಿ ಅಧಿನಾಯಕತ್ವದ ಇಂದಿನ ನೈತಿಕತೆಯ ಚಿನ್ಹೆಯಾಗಿದೆ. ಕೆಲವು ದಶಕಗಳ ಹಿಂದೆ ಅದು ಹೀಗಿರಲಿಲ್ಲ. ಆಗ, ಬ್ರ್ಯಾಂಡ್ಟ್ ಆಯೋಗವು (ವಿಲ್ಲಿ ಬ್ರ್ಯಾಂಡ್ಟ್ ಜರ್ಮನಿಯ ಅಧ್ಯಕ್ಷರಾಗಿದ್ದರು) ಮುಂದುವರೆದ ದೇಶಗಳು ತಮ್ಮ ಜಿಡಿಪಿಯ ಶೇ.1 ಭಾಗದಷ್ಟು ನೆರವನ್ನು ಹಿಂದುಳಿದ ದೇಶಗಳಿಗೆ ಒದಗಿಸುವಂತೆ ಕರೆ ಕೊಟ್ಟಿತ್ತು.ಜಾಗತಿಕ ಕೀನ್ಸ್‌ವಾದದ ನೆಲೆಯಲ್ಲಿದ್ದ ಅಂತಹ ಸಾಮಾಜಿಕ-ಪ್ರಜಾಪ್ರಭುತ್ವವಾದಿ ಕಳಕಳಿಗೆ ಇಂದು ಯಾರೂ ದನಿಗೂಡಿಸುತ್ತಿಲ್ಲ.

(ಇದು 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆ ಪ್ರಕಟಿಸಿರುವ ಪ್ರೊ. ಪ್ರಭಾತ್ ಪಟ್ನಾಯಕ್ ಅವರ World Poverty ಲೇಖನದ ಭಾವಾನುವಾದ.)

ದಿಲ್ಲಿಯಲ್ಲಿ ಮಣಿಪುರದ ಬುಡಕಟ್ಟು ಪ್ರತಿಭಟನಾಕಾರರ ಮೇಲೆ ಅಮಾನುಷ ಪೋಲೀಸ್ ಕಾರ್ಯಾಚರಣೆ







ಜೂನ್ 7ರಂದು ದಿಲ್ಲಿಯ ಮಣಿಪುರ ಭವನದ ಎದುರು ಮಣಿಪುರ ಬುಡಕಟ್ಟು ವೇದಿಕೆಯ ಆಶ್ರಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಮಣಿಪುರ ಬುಡಕಟ್ಟು ಪ್ರತಿಭಟನಾಕಾರ ಮೇಲೆ ದಿಲ್ಲಿ ಪೋಲೀಸರು ಮತ್ತು ಮಣಿಪುರ ಪೋಲಿಸರ ಅಮಾನುಷ ದಾಳಿಯಲ್ಲಿ ಹಲವಾರು ಮಂದಿ ತೀವ್ರವಾಗಿ ಗಾಯಗೊಂಡರು. ಸುಮಾರು 60 ಮಂದಿಯನ್ನು ದಿಲ್ಲಿಯ ಚಾಣಕ್ಯಪುರಿ ಪೋಲೀಸ್ ಠಾಣೆಯಲ್ಲಿ ಬಂಧಿಸಿಡಲಾಗಿದೆ. ಅವರನ್ನು ಭೇಟಿಯಾಗಲು ಹೋದ ಅಖಿಲ ಭಾರತ ಕಿಸಾನ್ ಸಭಾ ಮುಖಂಡ ವಿಜೂ ಕೃಷ್ಣನ್ ಅವರನ್ನು ಭೇಟಿ ಮಾಡಲು ಬಿಡಲಿಲ್ಲ.

ಮಣಿಪುರದ ಬುಡಕಟ್ಟು ಜನರು ಮಣಿಪುರ ವಿಧಾನ ಸಭೆ ಪಾಸು ಮಾಡಿದ ಮೂರು ಮಸೂದೆಗಳು ತಮ್ಮ ಭೂಮಿ ಹಕ್ಕುಗಳನ್ನು ಕಸಿದುಕೊಳ್ಳಲಾಗುತ್ತಿದೆ ಎಂದು ಅವುಗಳ ವಿರುದ್ಧ ಕಳೆದ ಸುಮಾರು 10ತಿಂಗಳಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಪ್ರತಿಭಟನೆಯ ವೇಳೆ ಬಲಿಯಾದ 9 ಬುಡಕಟ್ಟು ಜನಗಳ ಮೃತದೇಹಗಳನ್ನು ಮಣ್ಣು ಮಾಡದೆ ಈ ಪ್ರತಿಭಟನೆ ಮುಂದುವರೆಯುತ್ತಿದೆ.

ದಿಲ್ಲಿಯಲ್ಲಿ ಈ ಪ್ರತಿಭಟನೆಯ ಭಾಗವಾಗಿ ಮಣಿಪುರ ಬುಡಕಟ್ಟುಗಳ ಒಮದು ವವಿದಿಕೆ ರಚಿಸಿಕೊಮಡು ಕಳೆದ ನವಂಬರರನಿನದ ಜಂತರ್‌ಮಂತರ್‌ನಲ್ಲಿ ಶಾಂತಿಯುತ ಪ್ರತಿಭಟನೆ ನಡೆಯುತ್ತಿದೆ. ಅವರು ರಾಷ್ಟ್ರಪತಿಗಳನ್ನು, ಗೃಹಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ವಿವಿಧ ಇಲಾಖೆಗಳ ಮಂತ್ರಿಗಳನ್ನು ಭೇಟಿಯಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಸರ್ವ ಶಾಂತಿಯುತ ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಕೇಂದ್ರ ಸರಕಾರವಾಗಲೀ, ಮಣಿಪುರದ ಕಾಂಗ್ರೆಸ್ ಸರಕಾರವಾಗಲೀ ಅವರ ಅಹವಾಲುಗಳ ಬಗ್ಗೆ ಮಾತುಕತೆ ನಡೆಸಲು ಯಾವುದೇ ಮುತುವರ್ಜಿ ವಹಿಸಿಲ್ಲ.

ಕಳೆದ ವಾರ ಈ ಮಸೂದೆಗಳಿಗೆ ರಾಷ್ಟ್ರಪತಿಗಳ ಮಂಜೂರಾತಿ ಪಡೆಯಲು ಮಣಿಪುರದ ಮುಖ್ಯಮಂತ್ರಿಗಳು ದಿಲ್ಲಿಗೆ ಬಂದಿದ್ದಾಗ ಸಾವಿರಾರು ಮಣಿಪುರೀ ಬುಡಕಟ್ಟು ಜನಗಳು ಮಣಿಪುರ ಭವನದ ಮುಂದೆ ನೆರೆದಿದ್ದಾಗ ಈ ಪೋಲೀಸ್ ದಾಳಿನಡೆದಿದೆ.

ಪ್ರಜಾಸತ್ತಾತ್ಮಕ ಭಿನ್ನಮತವನ್ನು ಎದುರಿಸುವ ರೀತಿ ಇದಲ್ಲ, ಇಂತಹ ಅಮಾನುಷ ವರ್ತನೆಗಳನ್ನು ನಿಲ್ಲಿಸಿ, ಸಂವಾದ ನಡೆಸಿ ಸಮಸ್ಯೆಗೆ ಶಾಂತಿಯುತ ಪರಿಹಾರ ಸಾಧ್ಯವಿದೆ, ಬಂಧಿತರನ್ನೆಲ್ಲ ಬೇಷರತ್ ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಆಗ್ರಹಿಸಿದೆ.

ಹರಿಯಾಣ ಪೋಲೀಸ್ ಮುಖ್ಯಸ್ಥರ ಮತ್ತೊಂದು ಕಾನೂನುಬಾಹಿರ ನಿರ್ದೇಶನ

'ಕನಿಷ್ಠ ಸರಕಾರ, ಗರಿಷ್ಠ ಆಳ್ವಿಕೆ'ಯ ಘೋಷಣೆ ಕೊಟ್ಟಿರುವ ಬಿಜೆಪಿಯ ಹರಿಯಾಣ ರಾಜ್ಯ ಸರಕಾರ ಕಳೆದ ಕೆಲವು ತಿಂಗಳಿಂದ ಹೆಚ್ಚೆಚ್ಚು ಕುಖ್ಯಾತಿ ಗಳಿಸಿಕೊಳ್ಳುತ್ತಿದೆ. ಇದಕ್ಕೆ ಇತ್ತೀಚಿನ ಸೇರ್ಪಡೆಯೆಂದರೆ ರಾಜ್ಯದ ಅಡಿಶನಲ್ ಡಿಜಿಪಿ ಜಿಲ್ಲಾ ಪೋಲೀಸ್ ವರಿಷ್ಠರುಗಳಿಗೆ ಕಳಿಸಿರುವ ಸುತ್ತೋಲೆ.

"ಕಾನೂನುಬಾಹಿರ ಮತ್ತು ಸರಕಾರ-ವಿರೋಧಿ" ಚಟುವಟಿಕೆಗಳಲ್ಲಿ ತೊಡಗಿರುವವರ ದಾಖಲೆಗಳನ್ನು ಇಡಬೇಕು, ಇಂತಹ ವ್ಯಕ್ತಿಗಳನ್ನು, ಅದರಲ್ಲೂ ಯುವಜನರು ಮತ್ತು ಮಾಜಿ ಸೈನಿಕರು ಪೋಲೀಸ್ ಮತ್ತು ಸೇನೆಯಲ್ಲಿ ಭರ್ತಿಯಾಗಲು ಅನರ್ಹರಾಗುತ್ತಾರೆ ಎಂದು ಈ ಸುತ್ತೋಲೆ ನಿರ್ದೇಶನ ನೀಡಿದೆ.

ರಾಜ್ಯದ ಅತ್ಯಂತ ಹಿರಿಯ ಪೋಲೀಸ್ ಅಧಿಕಾರಿಯಿಂದ ಇಂತಹ ಸರ್ವಾಧಿಕಾರಶಾಹಿ ಮತ್ತು ಕರಾಳ ನಿರ್ದೇಶನದ ಬಗ್ಗೆ ಸಿಪಿಐ(ಎಂ) ಹರಿಯಾಣ ರಾಜ್ಯ ಸಮಿತಿ ಆಘಾತ ವ್ಯಕ್ತಪಡಿಸಿದೆ.

ಇದೇ ವ್ಯಕ್ತಿ ಕೆಲವು ದಿನಗಳ ಹಿಂದೆ, ಯಾರಾದರೂ ಕ್ರಿಮಿನಲ್ ಕೃತ್ಯದಲ್ಲಿ ತೊಡಗಿರುವುದನ್ನು ಕಂಡರೆ ನಾಗರಿಕರೇ ಅಂತವರ ಜೀವ ತೆಗೆದುಕೊಳ್ಳಬಹುದು ಎಂದಿದ್ದರು. ಈ ಬಗ್ಗೆ ಅವರು ಮಾಧ್ಯಮಗಳಲ್ಲಿ ವ್ಯಾಪಕ ಟೀಕೆಯನ್ನು ಎದುರಿಸಬೇಕಾಗಿ ಬಂದಿತ್ತು.

ಮುಖ್ಯಮಂತ್ರಿಗಳು ಈ ಸುತ್ತೋಲೆಯನ್ನು, ಕಾನೂನು ಬಾಹಿರ ನಿರ್ದೇಶನಗಳನ್ನು ಹಿಂತೆಗೆದು ಕೊಳ್ಳುವಂತೆ ಆದೇಶ ನೀಡಬೇಕು, ಹಿರಿಯ ಅಧಿಕಾರಿಗಳು ಕಾನೂನಿನ ಪ್ರಕಾರ ತಮ್ಮ ಕರ್ತವ್ಯ ನಿಭಾಯಿಸುವಂತೆ ಹೇಳಬೇಕು ಎಂದು ಹೇಳಬೇಕು ಎಂದು ಸಿಪಿಐ(ಎಂ) ರಾಜ್ಯಸಮಿತಿ ಆಗ್ರಹಿಸಿದೆ.

ಪಶ್ಚಿಮ ಬಂಗಾಲ: ಟಿಎಂಸಿ ಹಿಂಸಾಚಾರ ಮುಂದುವರೆಯುತ್ತಿದೆ- ಪ್ರತಿರೋಧವೂ



ಎಡರಂಗ ಗೆದ್ದ ಕ್ಷೇತ್ರಗಳಲ್ಲಿ ಟಿಎಂಸಿ ಹಿಂಸಾಚಾರದ ಬೆನ್ನಿಗೇ, ಈಗ ಟಿಎಂಸಿಯ 'ವಿಜಯ ಮೆರವಣಿಗೆ'ಯ ಹೆಸರಲ್ಲಿ ಹಿಂಸಾಚಾರಗಳು ಮುಂದುವರೆಯುತ್ತಿವೆ. ಜತೆಗೆ ಇವಕ್ಕೆ ಪ್ರತಿರೋಧಗಳೂ ಎಲ್ಲೆಡೆಗಳಲ್ಲಿ ಕಾಣ ಬರುತ್ತಿವೆ.

ಪೊಕ್ಕೋನಾ ಎಂಬಲ್ಲಿ ಟಿಎಂಸಿ ವಿಜಯೋತ್ಸವದ ಹೆಸರಿನಲ್ಲಿ ಸಿಪಿಐ(ಎಂ) ಪಕ್ಷದ ಕಚೇರಿಯನ್ನು ಧ್ವಂಸ ಮಾಡಿದರು. ಬರ್ಜೊರಾದ ಸಿಪಿಐ(ಎಂ) ಶಾಸಕ ಸುಜಿತ್ ಚಕ್ರವರ್ತಿ ಅಲ್ಲಿಗೆ ಭೇಟಿ ನೀಡಿ ಹಿಂದಿರುವಾಗ ಅವರ ಮೇಲೂ ದಾಳಿ ನಡೆಸಲಾಯಿತು. ಸುದ್ದಿ ತಿಳಿದ ಬರ್ಜೊರಾದ ಜನ ಪೋಲೀಸ್ ಠಾಣೆಯ ಮುಂದೆ ಭಾರೀ ಪ್ರತಿಭಟನೆ ನಡೆಸಿದರು. ಅಲ್ಲಿ ದೂರು ನೀಡಲು ಬಂದಿದ್ದ ಟಿಎಂಸಿ ಮುಖಂಡರೂ ಇದ್ದರು. ಭಾರೀ ಪ್ರತಿಭಟನೆಯನ್ನು ಕಂಡ ಆ ಟಿಎಂಸಿ ಮುಖಂಡರು ಪಕ್ಷದ ಕಚೇರಿಯನ್ನು ಹಾಳುಗೆಡವಿದಕ್ಕೆ ಪರಿಹಾರ ನೀಡುವುದಾಗಿ ಲಿಖಿತ ಹೇಳಿಕೆ ನೀಡಬೇಕಾಯಿತು.

ರಾಜ್ಯದ ಇತರೆಡೆಗಳಲ್ಲೂ ಟಿಎಂಸಿ ಹಿಂಸಾಚಾರ, ಅದಕ್ಕೆ ಪ್ರತಿರೋಧಗಳ ವರದಿಗಳು ಬರುತ್ತಿವೆ.

ರಾಜ್ಯದ ಹೊರಗೂ, ಟಿಎಂಸಿ ಹಿಂಸಾಚಾರವನ್ನು ಪ್ರತಿಭಟಿಸಿ ಎಡರಂಗದೊಡನೆ ಸೌಹಾರ್ದ ವ್ಯಕ್ತಗೊಳ್ಳುತ್ತಿದೆ.



ಸೋನಾಮಾರ್ಗ್ ಕಾಂಕ್ರೀಟ್ ಅರಣ್ಯವಾಗಲು ಬಿಡಬೇಡಿ-ಮಹಮ್ಮದ್ ತರೀಗಾಮಿ ಆಗ್ರಹ

ಕಾಶ್ಮೀರ ಕಣಿವೆಯಲ್ಲಿ ಶ್ರೀನಗರ-ಲೇಹ್ ಹೆದ್ದಾರಿಯಲ್ಲಿರುವ ಸೋನಾಮಾರ್ಗ್ ಪರಿಸರ-ಸೂಕ್ಷ್ಮ ತಾಣವನ್ನು ಕಾಂಕ್ರೀಟ್ ಅರಣ್ಯವಾಗಿ ಮಾಡಲಾಗುತ್ತಿದೆ ಎಂದು ಸಿಪಿಐ(ಎಂ) ಮುಖಂಡ ಹಾಗೂ ಶಾಸಕ ಮಹಮ್ಮದ್ ಯೂಸುಫ್ ತರೀಗಾಮಿ ಆಪಾದಿಸಿದ್ದಾರೆ.

ಜಮ್ಮು-ಕಾಶ್ಮೀರ ವಿಧಾನ ಸಭೆಯಲ್ಲಿ ಪ್ರವಾಸೋದ್ಯಮಕ್ಕೆ ರಾಜ್ಯಸರಕಾರ ನೀಡಿರುವ ಹಣದ ಬಗ್ಗೆ ಚರ್ಚೆಯ ಸಂದರ್ಭದಲ್ಲಿ ಅವರು ಈ ಪ್ರವಾಸಿ ತಾಣದಲ್ಲಿ ನಿಯಮಗಳನ್ನು ಉಲ್ಲಂಘಿಸಿ ಕಾನೂನುಬಾಹಿರ ಕಟ್ಟಡ ನಿರ್ಮಾಣಗಳು ನಡೆಯುತ್ತಿವ ಬಗ್ಗೆ ಗಮನ ಸೆಳೆದರು. ಈ ಹಿಂದೆ ಈ ಕುರಿತು ತನಿಖೆಯೊಂದನ್ನು ನಡೆಸಲಾಗಿತ್ತು. ಆದರೆ ಆ ವರದಿಯಲ್ಲಿ ನೀಡಲಾದ ಶಿಫಾರಸುಗಳ ಬಗ್ಗೆ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನೆನಪಿಸಿದ ಅವರು ಅಲ್ಲಿ ಹೊಸ ಕಟ್ಟಡ ನಿರ್ಮಾಣ ಚಟುವಟಿಕೆಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು.

ಕೇರಳ: ವಿಶ್ವ ಪರಿಸರ ದಿನದಂದು ಕ್ಯಾಂಪಸ್ ಸಾವಯವ ಕೃಷಿ ಕಾರ್ಯಕ್ರಮ



ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ವಿಶ್ವ ಪರಿಸರ ದಿನದಂದು ತಿರುವನಂತಪುರ ವಿಶ್ವವಿದ್ಯಾಲಯ ಆವರಣದಲ್ಲಿ 'ಕ್ಯಾಂಪಸ್ ಸಾವಯವ ಕೃಷಿ' ಎಂಬ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಸ್‌ಎಫ್‌ಐನ ಕೇರಳ ರಾಜ್ಯ ಸಮಿತಿ ಈ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಹಮ್ಮಿಕೊಂಡಿದೆ.



ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟು ಅಭಿವೃದ್ಧಿ ಇಲಾಖೆಯ ಮಂತ್ರಿ ಎ.ಕೆ.ಬಾಲನ್ ಪಾಲಕ್ಕಡ್ ಜಿಲ್ಲೆಯ ಮಲಂಪುಳದ ಸರ್ಕಾರಿ ಐಟಿಐ ನಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಎಲ್‌ಡಿಎಫ್ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಪರಿಸರಕ್ಕೆ ಸಂಬಂಧಪಟ್ಟಂತೆ ಒಂದು ಪರ್ಯಾಯ ಕಣ್ನೋಟದ ಭರವಸೆ ನೀಡಿತ್ತು. ಹೊಸ ಮಂತ್ರಿಮಂಡಲದ ಪ್ರತಿಜ್ಞಾ ಸ್ವೀಕಾರ ಸಮಾರಂಭ ಒಂದು ಪ್ಲಾಸ್ಟಿಕ್-ಮುಕ್ತ, ತ್ಯಾಜ್ಯ-ಮುಕ್ತ ಹಸಿರು ಸಮಾರಂಭವಾಗಿ ನಡೆಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.


ಒಡಿಶಾದ ರಾಜಧಾನಿ ಭುವನೇಶ್ವರದಲ್ಲಿ ಜೂನ್ 8ರಂದು ರಾಜ್ಯ ಮಟ್ಟದ ಧರಣಿ ಕಾರ್ಯಕ್ರಮ ನಡೆಯಿತು. ಈ ಧರಣಿಯಿಂದ ಐದು ಮುಖಂಡರಿದ್ದ ನಿಯೋಗವೊಂದು ರಾಜ್ಯಪಾಲರನ್ನು ಭೇಟಿಯಾಗಿ ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ ಚುನಾವಣೋತ್ತರ ಹಿಂಸಾಚಾರವನ್ನು ತಡೆಗಟ್ಟಲು ರಾಷ್ಟ್ರಪತಿಗಳ ಮಧ್ಯಪ್ರವೇಶಕ್ಕೆ ಆಗ್ರಹಿಸುವ ಮನವಿ ಪತ್ರವನ್ನು ಸಲ್ಲಿಸಲಾಯಿತು.


ಜೂನ್ 5ರಂದು ತಮಿಳುನಾಡಿನ ಹಲವೆಡೆಗಳಲ್ಲಿ ಮತಪ್ರದರ್ಶನಗಳು ನಡೆದವು.

ಪುದುಚೇರಿಯಲ್ಲೂ ಅದೇ ದಿನ ಪ್ರತಿಭಟನಾ ಸಭೆಗಳು ನಡೆದವು.









ಜೂನ್ 3 ರಂದು, ತನ್ನ 74ನೇ ವಯಸ್ಸಿನಲ್ಲಿ ನಿಧನರಾದ ಪ್ರಖ್ಯಾತ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಮುಹಮ್ಮದ್ ಅಲಿ ಶತಮಾನದ ಕ್ರೀಡಾಪಟು ಎಂಬ ಖ್ಯಾತಿ ಗಳಿಸಿದವರು, ಆದರೆ ಜಗತ್ತು ಅವರನ್ನು ನೆನಪಿಸಿಕೊಳ್ಳುವುದು ಆತ ಒಬ್ಬ ಮಹಾನ್ ಆಟಗಾರ ಎಂಬುದಕ್ಕೆ ಮಾತ್ರವೇ ಅಲ್ಲ, ಅದಕ್ಕಿಂತ ಹೆಚ್ಚಾಗಿ, ಅಮೆರಿಕಾದ ವಿಯೆಟ್ನಾಂ ಯುದ್ಧದಲ್ಲಿ ಭಾಗವಹಿಸಲು ನಿರಾಕರಿಸಿ ತನ್ನ ನಂಬಿಕೆಗಳಿಗಾಗಿ ತನ್ನ ಖ್ಯಾತಿ ಮತ್ತು ಸಾಧನೆಯನ್ನೂ ಬದಿಗಿಟ್ಟು ಜೈಲಿಗೂ ಹೋಗಲು ಸಿದ್ಧನಾದ ಧೀರ ಎಂದು.

ಜಗದ ಸುತ್ತ

ವೇದರಾಜ್ ಎನ್.ಕೆ.


ಗುಲಾಮಿಕೆ, ಅನ್ಯಾಯ, ಅಸಮಾನತೆಗೆ ಮುಷ್ಟಿಯೇಟು ಬಿಗಿದ ಮುಹಮ್ಮದ್ ಅಲಿ

ಕ್ಯಾಶಿಯಸ್ ಕ್ಲೇ ಎಂಬುದು ಆತನಿಗೆ ತಂದೆ-ತಾಯಿ ಇಟ್ಟ ಹೆಸರು. ಈ ಹೆಸರಿನಲ್ಲೇ ಆತ ತನ್ನ 18ನೇ ವಯಸ್ಸಿನಲ್ಲಿ 1960ರ ಒಲಿಂಪಿಕ್ ಪಂದ್ಯದ ಹೆವಿವೈಟ್ ಸ್ಪರ್ಧೆಯಲ್ಲಿ ಅಮೆರಿಕಾಕ್ಕೆ ಚಿನ್ನದ ಪದಕ ಗಳಿಸಿ ಕೊಟ್ಟ. ಆದರೆ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಎನಿಸಿಕೊಂಡರೂ ತನ್ನ ಕರಿಯ ನಾಗರಿಕರ ವಿರುದ್ಧ ವರ್ಣಬೇಧ-ಜನಾಂಗ ಬೇಧದಿಂದ ಪೀಡಿತವಾಗಿದ್ದ ಅಮೆರಿಕನ್ ಸಮಾಜದ ವರ್ತನೆಗಳಿಂದ ಬೇಸತ್ತು ಆತ ತನ್ನ ಚಿನ್ನದ ಪದಕವನ್ನು ಓಹಿಯೋ ನದಿಗೆ ಎಸೆದು ವೃತ್ತಿಪರ ಬಾಕ್ಸಿಂಗ್ ಕಣಕ್ಕೆ ಧುಮುಕಿದ. ನಾಲ್ಕು ವರ್ಷಗಳಲ್ಲೇ, 1964ರಲ್ಲಿ ಆತ ವಿಶ್ವ ಹೆವಿವೈಟ್ ಚಾಂಪಿಯನ್ ಎಂಬ ಪಟ್ಟ ಪಡೆದ.

ಅದಾದ ಕೆಲವೇ ದಿನಗಳಲ್ಲಿ ಇಸ್ಲಾಮ್ ಧರ್ಮ ಸ್ವೀಕರಿಸಿದ ಆತನ ಹೆಸರು ಮುಹಮ್ಮದ್ ಅಲಿ ಎಂದಾಯಿತು. "ಕ್ಯಾಶಿಯಸ್ ಕ್ಲೇ ನನ್ನ ಗುಲಾಮ ಹೆಸರು. ಅದು ನಾನು ಆರಿಸಿದ್ದಲ್ಲ, ನನಗೆ ಅದು ಬೇಕಿಲ್ಲ. ನಾನು ಮುಹಮ್ಮದ್ ಅಲಿ-ಅದು ಒಂದು ಮುಕ್ತ ಹೆಸರು" ಎಂದ ಆತ ಒಮ್ಮೆ "ಬಾಕ್ಸಿಂಗ್ ಅಂದರೆ ಇಬ್ಬರು ಕರಿಯರು ಪರಸ್ಪರ ಚಚ್ಚಿ ಕೊಳ್ಳುವುದನ್ನು ಹಲವರು ಬಿಳಿಯರು ವೀಕ್ಷಿಸುವ ಆಟ" ಎಂದು ಉದ್ಗರಿಸಿದ್ದನಂತೆ.

ಆಗ ಅಮೆರಿಕಾದಲ್ಲಿ ಎದ್ದುಬಂದಿದ್ದ ಕರಿಯರ ನಾಗರಿಕ ಹಕ್ಕುಗಳ ಆಂದೋಲನದಲ್ಲಿ ಪಾಲ್ಗೊಂಡ ಆತನ ಧೀರ ವ್ಯಕ್ತಿತ್ವ ಉಜ್ವಲವಾಗಿ ಪ್ರಕಟಗೊಂಡದ್ದು ಸಾವಿರಾರು ಮೈಲುಗಳ ದೂರದ ವಿಯೆಟ್ನಾಂನ ರಾಷ್ಟ್ರೀಯ ವಿಮೋಚನಾ ಹೋರಾಟಗಾರರ ಮೇಲೆ ಆತನ ದೇಶದ ಆಳರಸರ ಕ್ರೌರ್ಯದ ಕರಾಳ ಪ್ರದರ್ಶನ ನಡೆಯುತ್ತಿದ್ದ ಸಮಯದಲ್ಲಿ ಎಂಬುದು ಕಾಕತಾಳೀಯವೇನಲ್ಲ.

1967ರಲ್ಲಿ ವಿಯೆಟ್ನಾಮಿನಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗೆ ಭಾರೀ ಸವಾಲು ಎಸೆದಿದ್ದ ವಿಯೆಟ್‌ಕಾಂಗ್ ಗೆರಿಲ್ಲಾಗಳನ್ನು ಎದುರಿಸಲು ಅಮೆರಿಕನ್ ಆಳರಸರು ಅಮೆರಿಕನ್ ಯುವಕರು ಕಡ್ಡಾಯವಾಗಿ ಸೇನೆಯಲ್ಲಿ ಕನಿಷ್ಟ ಸೇವೆ ಸಲ್ಲಿಸಬೇಕೆಂದು ವಿಧಿಸಿದ್ದರು. 25 ವರ್ಷದ ಯುವಕ ಮುಹಮ್ಮದ್ ಅಲಿ ಇದನ್ನು ವಿರೋಧಿಸಿದ, ತನ್ನ ಧರ್ಮ ಅದಕ್ಕೆ ಆಸ್ಪದ ಕೊಡುವುದಿಲ್ಲ ಎಂದ, **ಆ ವಿಯೆಟ್‌ಕಾಂಗ್‌ಗಳ ಬಗ್ಗೆ ನನಗೇನೂ ದ್ವೇಷವಿಲ್ಲ, ಅವರ ವಿರುದ್ಧ ನಾನೇಕೆ ಕಾದಾಡಬೇಕು** ಎಂದು ಸೇನೆಯಲ್ಲಿ ಕಡ್ಡಾಯ ಸೇವೆ



ಸಲ್ಲಿಸಲು ನಿರಾಕರಿಸಿದ. ಆಗ ಆತ ಹೇಳಿದ ಮಾತುಗಳು ದೇಶಭಕ್ತಿಯ ಟೊಳ್ಳು ಮಾತುಗಳನ್ನಾಡುವವರನ್ನು ಬಯಲಿಗೆಳೆದಿದ್ದವು:


"ಇಲ್ಲಿ ಲೂಯಿವಿಲ್ಲೆಯಲ್ಲಿ ನಿಗ್ರೋಗಳು ಎಂದು ಕರೆಯಲಾಗುವ ಜನರನ್ನು ನಾಯಿಗಳಂತೆ ನೋಡುತ್ತಿರುವಾಗ, ಸರಳ ಮಾನವ ಹಕ್ಕುಗಳನ್ನು ನಿರಾಕರಿಸಿರುವಾಗ ನಾನು ಯೂನಿಫಾರ್ಮ್ ಧರಿಸಿಕೊಂಡು 10 ಸಾವಿರ ಮೈಲಿಗಳಾಚೆ ಹೋಗಿ ಬೂದು ಬಣ್ಣದ ಜನಗಳ ಮೇಲೆ ಬಾಂಬುಗಳನ್ನು ಸುರಿಸಬೇಕು ಎಂದು ಅವರೇಕೆ ನನಗೆ ಹೇಳಬೇಕು? ...ನಾನು ಇಂತಹ ನಿಲುವು ತಳೆದಿರುವುದರಿಂದ ನನಗೆ ಮಿಲಿಯಗಟ್ಟಲೆ ಡಾಲರುಗಳ ನಷ್ಟವಾಗಬಹುದು ಎಂದು ಎಚ್ಚರಿಸಲಾಗಿದೆ. ಆದರೆ ನಾನು ಒಮ್ಮೆ ಹೇಳಿದ್ದೇನೆ, ಮತ್ತೆ ಹೇಳುತ್ತೇನೆ-ನನ್ನ ಜನಗಳ ನಿಜವಾದ ಶತ್ರುಗಳು ಇರುವುದು ಇಲ್ಲಿಯೇ. ತಮ್ಮ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೋರಾಡುತ್ತಿರುವವರನ್ನು ಗುಲಾಮಗಿರಿ ಗೊಳಪಡಿಸುವ ಸಾಧನವಾಗಲಾರೆ, ಆ ಮೂಲಕ ನಾನು ನನ್ನ ಧರ್ಮ, ನನ್ನ ಜನತೆ ಮತ್ತು ನನಗೇ ಅವಮಾನ ಮಾಡಲಾರೆ. ಈ ಯುದ್ಧ ನನ್ನ 22 ಮಿಲಿಯ ಜನಗಳಿಗೆ ಸ್ವಾತಂತ್ರ್ಯ ಮತ್ತು ಸಮಾನತೆ ತರುವುದಾಗಿದ್ದಲ್ಲಿ ಅವರು ನನಗೆ ಕಡ್ಡಾಯ ಮಾಡಬೇಕಿರಲಿಲ್ಲ, ನಾನೇ ಸೇರಿಕೊಳ್ಳುತ್ತಿದ್ದೆ. ನನ್ನ ನಂಬಿಕೆಗಳಿಗಾಗಿ ಎದ್ದು ನಿಲ್ಲುವುದರಲ್ಲಿ ನಾನು ಕಳಕೊಳ್ಳುವುದು ಏನೂ ಇಲ್ಲ. ನಾನು ಜೈಲಿಗೆ ಹೋಗಬಹುದು. ಅದರಲ್ಲೇನಿದೆ? ನಾವೆಲ್ಲ 400 ವರ್ಷಗಳಿಂದ ಜೈಲಿನಲ್ಲೇ ಇದ್ದೇವೆ"

ಆತನನ್ನು ಬಂಧಿಸಲಾಯಿತು, ವಿಶ್ವ ಬಾಕ್ಸಿಂಗ್ ಚಾಂಪಿಯನ್ ಪದವಿಯನ್ನು ಮತ್ತು ಬಾಕ್ಸಿಂಗ್ ಮಾಡುವ ಲೈಸೆನ್ಸನ್ನು ಕಿತ್ತುಕೊಳ್ಳಲಾಯಿತು. ಜೂನ್ 1967ರಲ್ಲಿ ಕೋರ್ಟು ಆತ ಕಡ್ಡಾಯ ಸೇವೆ ತಪ್ಪಿಸಿಕೊಂಡ ಅಪರಾಧಿ ಎಂದು 10 ಸಾವಿರ ಡಾಲರ್ ದಂಡ ಮತ್ತು ಐದು ವರ್ಷಗಳ ಜೈಲು ಶಿಕ್ಷೆ ವಿಧಿಸಿತು. ಆದರೆ ಮುಹಮ್ಮದ್ ಅಲಿ ಹಿಂಜರಿಯಲಿಲ್ಲ, ಈ ಶಿಕ್ಷೆಯ ವಿರುದ್ಧ ಅಪೀಲು ಹೋದದ್ದರಿಂದಾಗಿ, ಆ ಬಗ್ಗೆ ವಿಚಾರಣೆ ಮುಗಿಯುವ ವರೆಗೆ ಆತನನ್ನು ಜೈಲಿಗೆ ಕಳಿಸಲಾಗಲಿಲ್ಲ. ಆದರೆ ಮುಹಮ್ಮದ್ ಅಲಿ ಅಪೀಲು ಹಾಕಿ ಸುಮ್ಮನೆ ಕುಳಿತುಕೊಳ್ಳಲಿಲ್ಲ, ಆತ ವಿಯೆಟ್ನಾಂ ಯುದ್ಧದ ವಿರುದ್ಧ ಅಮೆರಿಕಾದಾದ್ಯಂತ ಪ್ರಚಾರ ನಡೆಸಿದ. ಈ ವೇಳೆಗೆ ವಿಶ್ವಾದ್ಯಂತ ಅಮೆರಿಕನ್ ಸಾಮ್ರಾಜ್ಯಶಾಹಿಯ ವಿಯಟ್ನಾಂ ಯುದ್ಧದ ವಿರುದ್ಧ ಆಕ್ರೋಶ ಹರಡಿತು. ಇದು ಅಮೆರಿಕಾವನ್ನು ಕೂಡ ತಟ್ಟಿತು. ಅಂತಿಮವಾಗಿ 1971ರಲ್ಲಿ ಅಮೆರಿಕಾದ ಸುಪ್ರಿಂ ಕೋರ್ಟ್ ಆತನಿಗೆ ವಿಧಿಸಿದ್ದ ಶಿಕ್ಷೆಯನ್ನು ರದ್ದು ಮಾಡಿತು.


ಮಹಮ್ಮದ್ ಅಲಿ ಕೇವಲ ರಾಜಕೀಯ ರಂಗಕ್ಕೆ ಸೀಮಿತಗೊಂಡಿದ್ದ ಜನಾಂಗ ದ್ವೇಷದ ಪ್ರಶ್ನೆಯನ್ನು ಜನಸಾಮಾನ್ಯರ ಬಳಿಗೊಯ್ಯುವಲ್ಲಿ ಯಶಸ್ವಿಯಾದರು. ಇದು ಆಗಿನ ಆಫ್ರಿಕನ್ ಅಮೆರಿಕನ್ ಯುವ ಜನರ ಮೇಲೆ ಅಪಾರ ಪ್ರಭಾವ ಬೀರಿತು(ಬಾಕ್ಸ್ ನೋಡಿ)

ಐವತ್ತು ವರ್ಷಗಳ ಹಿಂದೆ ಮುಹಮ್ಮದ್ ಅಲಿ ತಳೆದ ನಿಲುವು ಈಗ ಹಣಕಾಸು ಬಂಡವಾಳದ ಜಾಗತಿಕ ಪ್ರಾಬಲ್ಯದ ಹಿನ್ನೆಲೆಯಲ್ಲಿ ಮತ್ತೆ ಸಮಾನತೆ ಮತ್ತು ನ್ಯಾಯದ ಪ್ರಶ್ನೆ ಹಾಗೂ ಹುಸಿ ರಾಷ್ಟ್ರವಾದದ ಮುಖಾಮುಖಿ ಭಾರತದಲ್ಲಿ ಮತ್ತು ಜಗತ್ತಿನ ಹಲವೆಡೆ ಕಾಣ ಬರುತ್ತಿರುವಾಗ ನಾವೆಲ್ಲ ನೆನಪಿಸಿಕೊಳ್ಳಬೇಕಾದ್ದು.

1968ರ ಮೆಕ್ಸಿಕೊ ಒಲಿಂಪಿಕ್ಸ್ ಕ್ರೀಡೆಗಳ ಓಟದ ಸ್ಪರ್ಧೆಯಲ್ಲಿ ಗೆದ್ದ ಅಮೆರಿಕನ್ ತಂಡದ ಟಾಮಿ ಸ್ಮಿತ್ ಮತ್ತು ಜಾನ್ ಕಾರ್ಲೋಸ್ 200 ಮೀಟರ್‌ಗಳ ಓಟದಲ್ಲಿ ಮೊದಲನೇ ಮತ್ತು ಮೂರನೇ ಸ್ಥಾನ ಪಡೆದಿದ್ದರು. ಪದಕ ನೀಡುವ ಸಂದರ್ಭದಲ್ಲಿ ಇವರಿಬ್ಬರು ಕಪ್ಪು ಗ್ಲೋವ್ಸ್ ಹಾಕಿಕೊಂಡ ಬಿಗಿ ಮುಷ್ಟಿಯೆತ್ತಿ 'ಬ್ಲಾಕ್ ಸೆಲ್ಯೂಟ್' ನೀಡಿದ್ದು ಅಮೆರಿಕನ್ ಆಳರಸರ ಮತ್ತು 'ದೇಶಭಕ್ತ'ರ ಕಣ್ಣು ಕೆಂಪಾಗಿಸಿತ್ತು. ಅಂತರ್‍ರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಅಧ್ಯಕ್ಷ ಅವೆರಿ ಬ್ರುಂಡೇಜ್ 'ಒಲಿಂಪಿಕ್ ಸ್ಫೂರ್ತಿಯ ಮೂಲಭೂತ ಸೂತ್ರಗಳ ಹಿಂಸಾತ್ಮಕ ಉಲ್ಲಂಘನೆ ಇದು' ಎಂದು ಅವರಿಬ್ಬರನ್ನು ಕ್ರೀಡಾಕೂಟದಿಂದ ಉಚ್ಛಾಟಿಸಿದ. ತಮಾಷೆಯೆಂದರೆ ಇದೇ ವ್ಯಕ್ತಿ 40 ವರ್ಷಗಳ ಹಿಂದೆ 1936ರಲ್ಲಿ ನಡೆದ ಬರ್ಲಿನ್ ಒಲಿಂಪಿಕ್ಸ್ ವೇಳೆಯಲ್ಲಿ ಅಮೆರಿಕನ್ ಒಲಿಂಪಿಕ್ ಸಮಿತಿಯ ಅಧ್ಯಕ್ಷನಾಗಿದ್ದ. ಆಗ ಜರ್ಮನ್ ಕ್ರೀಡಾಪಟುಗಳು ನಾಝೀ ಸೆಲ್ಯೂಟ್ ಹೊಡೆದಾಗ ಆತನಿಗೆ ಒಲಿಂಪಿಕ್ ಸ್ಫೂರ್ತಿಯ ನೆನಪಾಗಿರಲಿಲ್ಲ!



ಬೂರ್ಜ್ವಾಗಳ ಬಾಕ್ಸರ್ ಮಿಥ್ಯೆಯನ್ನು ಜನತೆಯ ಗಾಥೆಯಾಗಿಸಿದ...



ಅಮೆರಿಕಾದಲ್ಲಿ ಒಂದು ದುಡ್ಡು ಮಾಡುವ ವೃತ್ತಿಯಾಗಿದ್ದ 'ಬಾಕ್ಸಿಂಗ್' ಬಗ್ಗೆ ಮತ್ತು ಅದರ ಸ್ವರೂಪವನ್ನು ಬದಲಿಸಿಬಿಟ್ಟ ಮುಹಮ್ಮದ್ ಅಲಿಯ ಬಗ್ಗೆ ಪ್ರಖ್ಯಾತ ರಂಗ ಕಲಾವಿದ ಉತ್ಪಲ್ ದತ್ ಅವರ ಮಾರ್ಮಿಕ ವಿಶ್ಲೇಷಣೆಯನ್ನು ನೆನಪಿಸಿಕೊಳ್ಳೋಣ:

"ಬಾಕ್ಸರ್‌ನ ಮಿಥ್ಯೆಯನ್ನು ಬೂರ್ಜ್ವಾಗಳು ಮುಖ್ಯವಾಗಿ ಲಾಭ ಮಾಡುವ ಮಾರಾಟ ಯಂತ್ರವಾಗಿ ಸೃಷ್ಟಿಸಿದರು..'ಗೋಲ್ಡನ್ ಬಾಯ್'ನಲ್ಲಿ ಒಡೆಟ್ಸ್ ಮತ್ತು ದಿ ಗ್ರೇಟ್ ವೈಟ್ ಹೋಪ್'ನಲ್ಲಿ ಹೊವಾರ್ಡ್ ಸ್ಯಾಕ್ಲರ್(ಚಲನಚಿತ್ರಕಾರರು-ಸಂ.) ಇದನ್ನು ಚೆನ್ನಾಗಿ ಬಳಸಿಕೊಂಡರು. ಇದೀಗ ಬೂರ್ಜ್ವಾಗಳೇ ಕೃತಕವಾಗಿ ನಿರ್ಮಿಸಿ ಪ್ರಚುರಪಡಿಸಿದ ಒಂದು ಆಧುನಿಕ ಪುರಾಣ- ಮತ್ತು ಇದು ಕೇವಲ ಲಾಭಕ್ಕಾಗಿ ಮಾತ್ರವೇ ಇಲ್ಲ. ಮುಷ್ಟಿ ಕಾಳಗದ ಜಟ್ಟಿಯ ತಿಳಿಗೇಡಿ ಆಕ್ರಮಣಕಾರಿತ್ವದಲ್ಲಿ ಒಬ್ಬ ಉಪಯೋಗೀ ನಾಗರಿಕ ಮತ್ತು ವಿಧೇಯ ಸೈನಿಕನ ಬೂರ್ಜ್ವಾ ಪರಿಕಲ್ಪನೆ ಸಾಕಾರಗೊಂಡಿದೆ. ಏಕೆ ಎಂದು ಆತ ಪ್ರಶ್ನಿಸುವುದಿಲ್ಲ. ಅದು ವಿಶ್ವದ ಯಜಮಾನಿಕೆಯ ಸಾಮ್ರಾಜ್ಯಶಾಹಿ ಕನಸಿನ ಭಾಗ, ಅದರಲ್ಲಿ ಯೋಚಿಸುವ ಸಾಮರ್ಥ್ಯ ಹೊಡೆದೋಡಿಸಲ್ಪಟ್ಟ, ದೇಶದ ಪ್ರತಿಯೊಂದು ಮಾಧ್ಯಮದಲ್ಲೂ ಹಾಡಿ ಹೊಗಳಲ್ಪಡುವ, ಮುಖಪುಟಗಳಲ್ಲಿ ರಾರಾಜಿಸುವ, ಊಟದ ಮೇಜಿನಲ್ಲಿ, ಸ್ಲೋ ಮೋಶನ್ ಟಿವಿಯಲ್ಲಿ ಅಧ್ಯಯನ, ವಿಶ್ಲೇಷಣೆಗಳಿಗೆ ಒಳಪಡುವ, ಯೋಚಿಸುವ ಶಕ್ತಿಯಿಲ್ಲದ ದೈತ್ಯನಾದ ಬಾಕ್ಸರ್ ತನ್ನ ಬಾಕ್ಸಿಂಗ್ ಪ್ರದರ್ಶನವನ್ನು ಏರ್ಪಡಿಸುವ ಪ್ರೊಮೋಟರನ್ನು, ಏಜಂಟನನ್ನು ಹಿಂಬಾಲಿಸುವ ಕನಸು ಅದು.

....

ಈ ಬಾಕ್ಸಿಂಗ್ ರಿಂಗ್ ಕರಿಯ ಶ್ರಮಜೀವಿಗೆ ಬಿಳಿಯ ಜನಾಂಗ ದ್ವೇಷಿಗಳಿಗೆ ವಿರುದ್ಧವಾದ ಒಂದು ರಣರಂಗವಾಗಿದೆ. ಆದ್ದರಿಂದ ಈ ಪುರಾಣ ಈಗ ಜಗತ್ತಿನ ಜನತೆಗೆ ಸೇರಿದ್ದು. ಬಿಳಿಯ ಪ್ರಮೋಟರನ ಬುದ್ಧಿಹೀನ ಬಾಕ್ಸರ್ ಈಗ ಸಮಂಜಸವಾಗಿ, ತಾರ್ಕಿಕವಾಗಿ ಯೋಚಿಸಲಾರಂಭಿಸಿದ್ದಾನೆ, ಮುಹಮ್ಮದ್ ಅಲಿ ವಿಯೆಟ್ನಾಂ ಯುದ್ಧದಲ್ಲಿ ಸೇರಿಕೊಳ್ಳಲು ನಿರಾಕರಿಸಿದ್ದು ಇದಕ್ಕೆ ಮಾದರಿ. ಬಾಕ್ಸಿಂಗ್ ಬಿಸಿನೆಸ್‌ನ ಮತ್ತು ಕಣ್ಣು ಕೋರೈಸುವ ಬೂರ್ಜ್ವಾ ಪ್ರಚಾರದ ಮೂಲ ಉದ್ದೇಶ ಸಂಪೂರ್ಣವಾಗಿ ಪರಾಭವಗೊಂಡಿದ್ದನ್ನು ಇದು ಸೂಚಿಸಿದೆ. ಅಂದರೆ ಒಡೆಟ್ಸ್ ಮತ್ತು ಸ್ಯಾಕ್ಲರ್ ಬಳಸಿಕೊಂಡ ಮಿಥ್ಯೆ ಈಗ ಅತ್ಯಂತ ಪ್ರಸ್ತುತವಾದ ಶ್ರಮಜೀವಿಗಳ ಪ್ರಗಾಥೆಯಾಗಿ ಬಿಡುತ್ತದೆ. ಇಲ್ಲಿ ಬಾಕ್ಸಿಂಗ್ ರಿಂಗ್ ಮತ್ತು ಊದಿಕೊಂಡ ಮಾಂಸಖಂಡಗಳು, ಜರ್ಝರಿತ ಮೂಗು, ಸೋರುವ ರಕ್ತ ಮುಂತಾದ ಸಮಸ್ಯೆಗಳು, ಕ್ರಮೇಣ ಸ್ವತಃ ವರ್ಗಹೋರಾಟದ ಗೊಂಡಾರಣ್ಯವಾಗಿ ಬಿಡುತ್ತವೆ.."

-ಉತ್ಪಲ್ ದತ್

JANASHAKTHI KANNADA VARA PATRIKE JUNE 19, 2016 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಸಿಐಟಿಯು 15ನೇ ದ.ಕ.ಜಿಲ್ಲಾ ಸಮ್ಮೇಳನ – ಉದ್ಘಾಟನೆ

ಸಮಾಜವಾದಕ್ಕೆ ಭವಿಷ್ಯ ಉತ್ತಮವಿದೆ: ವಿ.ಜಿ.ಕೆ.ನಾಯರ್



ಉದಾರೀಕರಣದ ಈ ಸಂದರ್ಭದಲ್ಲಿ ಜಗತ್ತಿನಲ್ಲಿ ಸಮಾಜವಾದಕ್ಕೆ ನೆಲೆಯಿಲ್ಲ ಎಂದು ಪ್ರಚಾರ ಮಾಡಲಾಗುತ್ತಿದೆ. ವಾಸ್ತವವಾಗಿ ಪರಿಸ್ಥಿತಿ ಅದ–ಕ್ಕೆ ವಿರುದ್ಧವಾಗಿದೆ. ಅಮೆರಿಕಾ ಚುನಾವಣೆಯ ಅಭ್ಯರ್ಥಿ ಸ್ಯಾಂಡರ್ಸ್ ಸಮಾಜವಾದದ ಪ್ರತಿಪಾದಕರಾಗಿದ್ದಾರೆ. ಆ ದೇಶದಲ್ಲೂ ಲಕ್ಷಾಂತರ ಜನ ಸಮಾಜವಾದ ಒಂದೇ ದಾರಿ ಎನ್ನುತ್ತಿದ್ದಾರೆ. ಅಲ್ಲಿನ ಜನತೆ ಬಂಡವಾಳಶಾಹಿಯಿಂದ ಸಂಕಷ್ಟ ಅನುಭವಿಸುತ್ತಿರುವುದರ ಗುರುತು ಅದು. ಜನ ಗಂ–ಟೆಗೆ 15 ಡಾಲರ್ ವೇತನಕ್ಕಾಗಿ ಆಗ್ರಹಿಸುತ್ತಿದ್ದಾರೆ. ಯಾವ ಅಮೇರಿಕಾದಲ್ಲಿ 130 ವರ್ಷಗಳ ಹಿಂದೆ ಮೇ ದಿನ ಹೋರಾಟಗಳು ನಡೆದವೋ, ಯಾವ ಅಮೇರಿಕಾದಲ್ಲಿ 100 ವರ್ಷಗಳ ಹಿಂದೆ ದುಡಿಯುವ ಮಹಿಳೆಯರು ದನಿ ಎತ್ತಿದರೋ, ಅದೇ ದೇಶದಿಂದಲೇ ದುಡಿಯುವ ಜನರ ಬೇಡಿಕೆಗಳು ಕೇಳಿಬರುತ್ತಿರುವುದನ್ನು ನಾವು ಗಮನಿಸಬೇಕಿದೆ ಎಂಬುದಾಗಿ ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಅಧ್ಯಕ್ಷರಾದ ವಿ.ಜೆ.ಕೆ.ನಾಯರ್ ಹೇಳಿದರು.

ಅವರು ಉಳ್ಳಾಲ ತೊಕ್ಕೋಟಿನ ಕಾ|ರಾಮಚಂದ್ರ ಉಚ್ಚಿಲ್ ನಗರದ ಕಾ|ಅಬ್ರಹಾಂ ಕರ್ಕಡ ವೇದಿಕೆಯಲ್ಲಿ ಸಿಐಟಿಯು ದ.ಕ.ಜಿಲ್ಲಾ 15ನೇ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಭಾರತದಲ್ಲಿ ತದ್ವಿರುದ್ಧವಾಗಿ ಬಲಪಂಥೀಯ ಬೆಳವಣಿಗೆಯೇ ಸದ್ಯ ನಡೆಯುತ್ತಿದೆ. ಆರೆಸ್ಸೆಸ್ ಬಿಜೆಪಿ ಬೆಳೆದಿದೆ. ಕಾಂಗ್ರೆಸ್ಸಿಗೆ ಪರ್ಯಾಯ ತರುತ್ತೇವೆಂದು ಅಧಿಕಾರಕ್ಕೆ ಬಂದ ಬಿಜೆಪಿ ಮತ್ತು ನರೇಂದ್ರ ಮೋದಿ ಚೀನಾದ ರೀತಿಯಲ್ಲಿ ಘನ ಕೈಗಾರಿಕೆಗಳನ್ನು ಬೆಳೆಸುತ್ತಾರೆಯೋ ಇಲ್ಲ. ಮೋದಿಯ ಮಾದರಿ ಚಿಕ್ಕ ಚಿಕ್ಕ ಉದ್ಯೋಗ ಕೊಡಿಸುವುದು ಅದನ್ನು ಹೊರಗುತ್ತಿಗೆಗೆ ನೀಡುವುದು. ಹಾಗಾಗಿ ಖಾಯಂ ಕಾರ್ಮಿಕರಿರುವಷ್ಟೇ ಪ್ರಮಾಣದಲ್ಲಿ ಗುತ್ತಿಗೆ ಕಾರ್ಮಿಕರೂ ಇರುತ್ತಾರೆ. ಕಾರ್ಮಿಕ ಸಂಘಟನೆಗಳು ರೂ.18 ಸಾವಿರ ಕನಿಷ್ಟ ವೇತನ ಆಗ್ರಹಿಸುತ್ತಿವೆ. ಮೋದಿ ಅದನ್ನು ಕೊಡಲು ಸಿದ್ಧರಿದ್ದರೇ? ಗುತ್ತಿಗೆ ಕಾರ್ಮಿಕರಿಗೆ ಕನಿಷ್ಟ ಕೂಲಿ ರೂ. 10 ಸಾವಿರ ಕೊಡತಕ್ಕದೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದ ಬಳಿಕ, ಕನಿಷ್ಟ ಕೂಲಿ ಬಗ್ಗೆ ಮೋದಿ ಕ್ರಮ ಕೈಗೊಂಡಿದ್ದಾರೆ.

ಬೆಂಗಳೂರಿನಲ್ಲಿ 5 ಲಕ್ಷ ಸಿದ್ಧ ಉಡುಪು ಕಾರ್ಮಿಕರಿದ್ದಾರೆ. ಅವರಿಗೆ ದಿನಕ್ಕೆ ಕೂಲಿ ಕೇವಲ 200 ರೂ. ಇವರಲ್ಲಿ ಲಕ್ಷ ಮೀರಿದ ಕಾರ್ಮಿಕರು 2 ದಿನ ಬೀದಿಗಿಳಿದು ಹೋರಾಟ ನಡೆಸಿದರು. ನಗರವನ್ನೇ ಸ್ಥಬ್ಧಗೊಳಿಸಿದರು. ಕೇಂದ್ರ ಸರಕಾರ ಕೂಡಾ ನಡುಗಿ ತಾನು ತಂದಿದ್ದ ಪ್ರಾವಿಡೆಂಟ್ ಫಂಡ್ ತಿದ್ದುಪಡಿ ಕಾನೂನನ್ನು ಹಿಂತೆಗೆದುಕೊಂಡಿತು.

ವಾಸುದೇವ್ ಉಚ್ಚಿಲ್

ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಒಟ್ಟಾದಾಗ ಮಾತ್ರ ಹೋರಾಟ ಯಶಸ್ವಿಯಾಗುತ್ತದೆ. ಮೋದಿ ಮುಂದಕ್ಕೆ ಬಾರದೆ ಅವರ ಆರೆಸ್ಸೆಸ್ ಬಳಗದವರು ಕೋಮುದ್ವೇಷವನ್ನು ಹರಡುತ್ತಿದ್ದಾರೆ. ಕೋಮುವಾದವನ್ನು ಎದುರಿಸಿ ನಿಲ್ಲಲು ಆರ್ಥಿಕ ಪ್ರಶ್ನೆಯನ್ನು ಮುಂದಿಟ್ಟು ಹೋರಾಡಿ ಹಿಮ್ಮೆಟ್ಟಿಸಲು ವಿ.ಜಿ.ಕೆ.ನಾಯರ್ ಕರೆ ನೀಡಿದರು. ಉತ್ಸಾಹದಿಂದ ನಡೆದ ಸಿಐಟಿಯು ದ.ಕ.ಜಿಲ್ಲಾ 15ನೇ ಸಮ್ಮೇಳನವನ್ನು ಸಿಐಟಿಯು ರಾಜ್ಯಾಧ್ಯಕ್ಷ ಉದ್ಘಾಟಿಸಿದರು.

ಹಿರಿಯ ರೈತ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ಜಿಲ್ಲಾಧ್ಯಕ್ಷ ಜೆ.ಬಾಲಕೃಷ್ಣ ಶೆಟ್ಟಿ ಉದ್ಘಾಟನಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷರಾದ ಕೆ.ಕೃಷ್ಣಪ್ಪ ಸಾಲ್ಯಾನ್ ಸ್ವಾಗತಿಸಿದರು. ಶ್ರದ್ಧಾಂಜಲಿ ನಿರ್ಣಯಗಳನ್ನು ಸಿಐಟಿಯು ಜಿಲ್ಲಾ ಸಮಿತಿಯ ಸುನಿಲ್ ಕುಮಾರ್ ಬಜಾಲ್ ಮಂಡಿಸಿದರು. ಹಿರಿಯ ಕಾರ್ಮಿಕ ಮುಖಂಡ ಬಿ.ಮಾಧವ, ಸಿಐಟಿಯು ಜಿಲ್ಲಾ ಮುಖಂಡರಾದ ಯು.ಬಿ.ಲೋಕಯ್ಯ, ವಸಂತ ಆಚಾರಿ, ಪದ್ಮಾವತಿ ಶೆಟ್ಟಿ, ಬಿ.ಎಂ.ಭಟ್ ವೇದಿಕೆಯ ಮೇಲಿದ್ದರು.

ಸ್ವಾಗತ ಸಮಿತಿ ಕಾರ್ಯದರ್ಶಿ ಜಯಂತ ನಾಯ್ಕ್ ವಂದಿಸಿದರು. ಮೊದಲು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟಿ ಧ್ವಜಾರೋಹಣ ನೆರವೇರಿಸಿದರು.

ಪ್ರತಿನಿಧಿ ಅಧಿವೇಶನ ಮತ್ತು ನೂತನ ಜಿಲ್ಲಾ ಸಮಿತಿ ರಚನೆ

ಜೂನ್ 5ರ ಅಪರಾಹ್ನ ಆರಂಭವಾದ ಪ್ರತಿನಿಧಿ ಅಧಿವೇಶನದಲ್ಲಿ ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಕಳೆದ ಸಮ್ಮೇಳನದಿಂದ ಈ ಸಮ್ಮೇಳನದವರೆಗಿನ ಮೂರುವರೆ ವರ್ಷಗಳ ಚಟುವಟಿಕೆಗಳೊಂದಿಗೆ ಜಿಲ್ಲೆಯ ಕೈಗಾರಿಕೆ ಮತ್ತು ಕಾರ್ಮಿಕ ರಂಗದ ಸ್ಥಿತಿಗತಿಯ ಬಗ್ಗೆ ವರದಿ ಮಂಡಿಸಿದರು.


ಯೋಗೀಶ್ ಜಪ್ಪಿನಮೊಗರು, ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್

ವಿವಿಧ ರಂಗಗಳ 175 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಪುರುಷರಿಗಿಂತ ಮಹಿಳಾ ಪ್ರತಿನಿಧಿಗಳೇ ಹೆಚ್ಚಿದ್ದರು. ಒಂದು ದಿನಕ್ಕೂ ಹೆಚ್ಚು ಕಾಲಾವಧಿಯಲ್ಲಿ ವರದಿಯ ಮೇಲೆ ಚರ್ಚೆ ನಡೆಸಿದರು. ಜೂನ್ 6ರ ಅಪರಾಹ್ನ ಜಿಲ್ಲಾ ಸಮಿತಿಯ ಪರವಾಗಿ ವಸಂತ ಆಚಾರಿಯವರು ಚರ್ಚೆಗೆ ಉತ್ತರ ನೀಡಿದರು.

ಜಿಲ್ಲೆಯ ಹಿರಿಯ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್ ಎರಡೂ ದಿನಗಳ ಕಲಾಪಗಳಲ್ಲಿ ಉಪಸ್ಥಿತರಿದ್ದು ಸಮಾರೋಪ ಭಾಷಣ ಮಾಡಿ ಪ್ರತಿನಿಧಿಗಳಿಗೆ ಮಾರ್ಗದರ್ಶಕ ಮಾತುಗಳನ್ನಾಡಿದರು.

ಸಮ್ಮೇಳನಾಂತ್ಯದಲ್ಲಿ ಪ್ರತಿನಿಧಿಗಳು ಮುಂದಿನ ಸಾಲಿಗೆ 55 ಮಂದಿಯ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿರುತ್ತಾರೆ. 15 ಮಂದಿಯ ಪದಾಧಿಕಾರಿಗಳನ್ನು ಆಯ್ಕೆ ಮಾಡಿರುತ್ತದೆ. ಜೆ.ಬಾಲಕೃಷ್ಣ ಶೆಟ್ಟಿ ಅಧ್ಯಕ್ಷರಾಗಿ, ಸುನಿಲ್ ಕುಮಾರ್ ಬಜಾಲ್ ಕಾರ್ಯದರ್ಶಿಯಾಗಿ, ಯೋಗೀಶ್ ಜಪ್ಪಿನಮೊಗರು ಖಜಾಂಚಿಯಾಗಿ ಆಯ್ಕೆಯಾಗಿದ್ದು, ಕೆ.ಆರ್.ಶ್ರೀಯಾನ್, ಯು.ಬಿ.ಲೋಕಯ್ಯ, ವಸಂತ ಆಚಾರಿ, ಬಿ.ಎಂ.ಭಟ್ ಉಪಾಧ್ಯಕ್ಷರಾಗಿ ಮುಂದುವರಿಯುವರು.




ಸಿಐಟಿಯು 15ನೇ ದ.ಕ.ಜಿಲ್ಲಾ ಸಮ್ಮೇಳನ – ಬಹಿರಂಗ ಸಭೆ

ಕನಿಷ್ಟ ಕೂಲಿಗಾಗಿ ಸಿಐಟಿಯು ಹೋರಾಟ: ವಿ.ಜಿ.ಕೆ.ನಾಯರ್

1957 ರಲ್ಲಿ ಕಾರ್ಮಿಕ ರಂಗ ಕನಿಷ್ಟ ಕೂಲಿ ದೇಶಕ್ಕೇ ಇರಬೇಕೆಂದು ನಿಗದಿಯಾಗಿತ್ತು. ಆದರೆ 60 ವರ್ಷಗಳಾಗುತ್ತಿದ್ದರೂ ಕನಿಷ್ಟ ಕೂಲಿಯೊಂದನ್ನು ನಿಗದಿಪಡಿಸುವುದು ದೇಶದ ಸರಕಾರಗಳಿಗೆ ಸಾಧ್ಯವಾಗಿಲ್ಲ. ಕರ್ನಾಟಕದಲ್ಲಿ 1983 ರಿಂದಲೇ ಸಿಐಟಿಯು ಕನಿಷ್ಟ ಕೂಲಿಗಾಗಿ ಹೋರಾಟ ಮಾಡುತ್ತಿದೆ. ಕರ್ನಾಟಕದಲ್ಲಿ ರೂ.7700 ಕನಿಷ್ಟ ಕೂಲಿಯಿದ್ದು ಆದರೆ ಇತರ ಮಾನದಂಡಗಳಿಂದ ಕನಿಷ್ಟ ಕೂಲಿ ತರೂ.10,500 ಆಗಬೇಕಿತ್ತೆಂದು ಸರಕಾರದ ಸಮಿತಿಯೇ ಹೇಳಿದೆ. 23 ಉದ್ದಿಮೆಗಳಿಗೆ ಸಂಬಂಧಿಸಿ ಈ ಮೊಬಲಗನ್ನು ಸಮಿತಿ ಸೂಚಿಸಿದ್ದರೂ ರಾಜ್ಯದ ಕಾರ್ಮಿಕ ಸಚಿವ ಪರಮೇಶ್ವರ ನಾಯ್ಕ್ ಸಮಿತಿ ವರದಿ ಜಾರಿಯನ್ನು ತಡೆ ಹಿಡಿದಿದ್ದಾರೆ. ಈ ಕೂಲಿಯನ್ನಾದರೂ ನೀಡಿದ್ದ–ರೆ ಕಾರ್ಮಿಕರಿಗೆ ತಿಂಗಳಿಗೆ ರೂ.3000 ಅಂದರೆ ದಿನಕ್ಕೆ ರೂ.100 ಕೂಲಿ ಹೆಚ್ಚಾಗುತ್ತಿತ್ತು. ಇದರಿಂದ ಅವರ ಕೊಳ್ಳುವ ಸಾಮರ್ಥ್ಯ ಹೆಚ್ಚುವಾಗ ಜೀನಸಿ ಅಂಗಡಿ, ಬಟ್ಟೆ ಮಳಿಗೆ, ಸಾರಿಗೆ ಹೀಗೆ ಹಲವಾರು ಉದ್ಯಮಗಳು ಅಭಿವೃದ್ಧಿಯಾಗುವುದಿಲ್ಲವೇ? ಎಂಬುದಾಗಿ ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷ ವಿ.ಜಿ.ಕೆ.ನಾಯರ್ ಪ್ರಶ್ನಿಸಿದರು. ಅವರು ಸಿಐಟಿಯು ದ.ಕ.ಜಿಲ್ಲಾ ಸಮ್ಮೇಳನದ ಬಹಿರಂಗ ಸಭೆಯನ್ನು ಮಾತನಾಡುತ್ತಿದ್ದರು.

ಹೆಚ್.ಆರ್. ನವೀನ್‌ಕುಮಾರ್



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**